ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧ Volume - 161	ಬೆಂಗಳೂರು, ಶುಕ್ರವಾರ, ೨೦, ಫೆಬ್ರವರಿ, ೨೦೨೬ (ಫಾಲ್ಗುಣ, ೦೧, ಶಕವರ್ಷ, ೧೯೪೭) BENGALURU, FRIDAY, 20, FEBRUARY, 2026 (PHALGUNA , 01, SHAKAVARSHA, 1947)	ಸಂಚಿಕೆ ೩೫ Issue 35

ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

ಕರ್ನಾಟಕ ಸರ್ಕಾರ

ಸಂ.ನಅಇ 636 ಎಂಎನ್‌ಯು 2025 (ಪಿ) ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ
ಡಾ. ಬಿ.ಆರ್.ಅಂಬೇಡ್ಕರ್ ಬೀದಿ,
ಬೆಂಗಳೂರು, ದಿನಾಂಕ: 13.01.2026

ಅಧಿಸೂಚನೆ

ದಿನಾಂಕ: 13-01-2026ರ ಕರ್ನಾಟಕ ರಾಜ್ಯ ಪತ್ರದ ವಿಶೇಷ ರಾಜ್ಯ ಪತ್ರಿಕೆಯ ಭಾಗ-IVಎ ರಲ್ಲಿ ಪ್ರಕಟಗೊಂಡ ಅಧಿಸೂಚನೆ ಸಂಖ್ಯೆ: UDD 636 MNU 2025 (P), ದಿನಾಂಕ: 13-01-2026 ರಲ್ಲಿ ಅಂತಿಮಗೊಳಿಸಲಾದ The Greater Bengaluru Area (Advertisement) Rules, 2025ರ ಕನ್ನಡ ಭಾಷಾಂತರವನ್ನು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ, 2022ರ ಪ್ರಕರಣ 6ರ ಉಪ ಪ್ರಕರಣ (2) ರಲ್ಲಿ ಪ್ರದತ್ತವಾದ ಅಧಿಕಾರದ ಅನ್ವಯ ಕರ್ನಾಟಕ ರಾಜ್ಯ ಪತ್ರದಲ್ಲಿ ಈ ಮೂಲಕ ಪ್ರಕಟಿಸಲಾಗಿದೆ.

ನಿಯಮಗಳು

1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ.- (1) ಈನಿಯಮಗಳನ್ನು ಗ್ರೇಟರ್ ಬೆಂಗಳೂರು ಪ್ರದೇಶ (ಜಾಹೀರಾತು) ನಿಯಮಗಳು, 2025 ಎಂದುಕರೆಯತಕ್ಕದ್ದು.

(2) ಈನಿಯಮಗಳು, ಅಧಿಕೃತ ರಾಜಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಈ ನಿಯಮಗಳು, ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 ರ ಪ್ರಕರಣ 3ರ ಅಡಿಯಲ್ಲಿ ಘೋಷಿಸಲಾದಂತೆ ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಅನ್ವಯವಾಗತಕ್ಕದ್ದು.

2. ಪರಿಭಾಷೆಗಳು.- (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು-

(ಎ) "**ಅಧಿನಿಯಮ**" ಎಂದರೆ, ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024:

(ಬಿ) "**ಜಾಹೀರಾತು**" ಎಂದರೆ, ಈ ಪರಿಭಾಷೆಗಳಲ್ಲಿ ಒಳಗೊಳ್ಳುವ ಪ್ರವರ್ಗಗಳ ಅಡಿಯಲ್ಲಿ ವಾಣಿಜ್ಯಿಕ ಅರ್ಥದಲ್ಲಿ ಒಂದು ಉತ್ಪನ್ನ ಅಥವಾ ಸೇವೆಯನ್ನು ಉತ್ತೇಜಿಸಲು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಥವಾ ಸಾರ್ವಜನಿಕರಿಗೆ ಕಾಣುವಂತಹ ಸ್ಥಳದಲ್ಲಿ ಪ್ರದರ್ಶಿಸಲಾಗುವ ಪೋಸ್ಟರುಗಳು, ಪ್ರಕಟಣಾ ಫಲಕಗಳು, ಜಾಹೀರಾತು ಫಲಕ, ಬ್ಯಾನರುಗಳು, ತಾತ್ಕಾಲಿಕ ಕಮಾನುಗಳು, ವಿದ್ಯುನ್ಮಾನಿತ ಪ್ರದರ್ಶನ, ನಾಮಫಲಕಗಳು, ನಿರ್ದೇಶನಾ ಫಲಕಗಳು, ಕರಪತ್ರಗಳು, ಬಾವುಟಗಳು ಅಥವಾ ಇತರ ಯಾವುದೇ ದೃಶ್ಯ ಅಥವಾ ಶ್ರವ್ಯ ಮಾಧ್ಯಮದ ಮೂಲಕ ಪದ, ನಿರ್ದೇಶನ, ಸಂಕ್ಷಿಪ್ತಾಕ್ಷರ, ಅಕ್ಷರ, ಲಾಂಛನ, ಸಂಕೇತ, ನಮೂನೆ, ಚಿತ್ರ ಅಥವಾ ಅದರ ಸಂಯುಕ್ತ ಚಿಹ್ನೆಯಿಂದ ಮಾಡುವ ಯಾವುದೇ ಪ್ರದರ್ಶನ, ಸಾಧನ ಅಥವಾ ಅದರ ಪ್ರತೀಕವಾದ ಅಂಥವನ್ನೆಲ್ಲಾ ಒಳಗೊಳ್ಳುತ್ತವೆ. ಆದರೆ ಇವುಗಳಲ್ಲಿ, ಸ್ಥಳಗಳು, ಕಟ್ಟಡಗಳು ಮತ್ತು ಬಾಡಿಗೆ ವಾಣಿಜ್ಯ ಸಂಸ್ಥೆಗಳನ್ನು ಗುರುತಿಸುವುದಕ್ಕಾಗಿ ಮತ್ತು ಹೆಸರಿಸುವುದಕ್ಕಾಗಿ ಅಳವಡಿಸಲಾದ ನಾಮ ಫಲಕಗಳನ್ನು ಒಳಗೊಂಡಿರುವುದಿಲ್ಲ.

(ಸಿ) "**ಏಜೆನ್ಸಿ**" ಎಂದರೆ, ಜಾಹೀರಾತುಗಳ ಪ್ರವರ್ತಕರು ಅಥವಾ ಸಮನ್ವಯಕಾರರಾಗಿದ್ದು, ಅವರು ವ್ಯಕ್ತಿ, ಸರ್ಕಾರ, ಅರೆಸರ್ಕಾರಿ ಸಂಸ್ಥೆಗಳು, ನೋಂದಾಯಿತ ದತ್ತಿ ಸಂಸ್ಥೆ, ಪ್ರೊಪ್ರೇಟರಿ ಫರ್ಮ್, ಪಾಲುದಾರಿಕೆ ಫರ್ಮ್ ಅಥವಾ ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ, 18) ಅಡಿಯಲ್ಲಿ ನಿಗಮಿತವಾದ ಯಾವುದೇ ಕಂಪನಿ;

(ಡಿ) "**ಬಿಬಿಎಂಪಿ**" ಎಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ;

(ಇ) "**ಬ್ಯಾನರ್**" ಎಂದರೆ, ಬಟ್ಟೆ ಅಥವಾ ಇತರ ಯಾವುದೇ ಜ್ವೆಲಿಕವಾಗಿ ಕೊಳೆಯಬಲ್ಲ ಮೆದುವಾದ (ಆದರೆ, ಪೂರ್ಣವಾಗಿ ಅಥವಾ ಆಂಶಿಕವಾಗಿ ಪಾಲಿವಿನೈಲ್ ಕ್ಲೋರೈಡ್ ಅಥವಾ ಪರಿಶುದ್ಧ ಅಥವಾ ಮರುಬಳಕೆಯ ಪ್ಲಾಸ್ಟಿಕ್‌ನ ಯಾವುದೇ ರೂಪದಿಂದ ತಯಾರಿಸಬಾರದು) ಸಾಮಗ್ರಿಯಾಗಿದ್ದು, ಸಾರ್ವಜನಿಕ ಸ್ಥಳದಲ್ಲಿ ಪ್ರದರ್ಶಿಸುವುದಕ್ಕಾಗಿ

ಕೆಲವು ಜಾಹೀರಾತು ಅಥವಾ ಘೋಷಣೆ ಅಥವಾ ಲಿಖಿತ ವಿಷಯವನ್ನು ಒಳಗೊಂಡಿರುತ್ತದೆ;

(ಎಫ್) **"ಪ್ರಕಟಣಾ ಫಲಕಗಳು / ಜಾಹೀರಾತು ಫಲಕ"** ಎಂದರೆ, ಜಾಹೀರಾತು ಪ್ಯಾನಲ್‌ನ ರೂಪದಲ್ಲಿ ಜಾಹೀರಾತು ಪ್ರದರ್ಶನಕ್ಕಾಗಿ ಸ್ಥಳಾವಕಾಶವಿರುವ ಹೊರಾಂಗಣ ಮಾಧ್ಯಮ ಸಾಧನವಾಗಿದ್ದು, ಆ ಪ್ಯಾನೆಲ್ ಅನ್ನು ನೆಲ ಅಥವಾ ಕಟ್ಟಡದ ಮೇಲಿನ ಯಾವುದೇ ನಿರ್ಮಿತಿಯ ಮೇಲೆ ಹಿಂಕಟ್ಟಿನೊಂದಿಗೆ ಹಾಕಲಾಗಿರುತ್ತದೆ ಮತ್ತು ಯಾವುದೇ ಜೈವಿಕವಾಗಿ ಕೊಳೆಯಬಲ್ಲ ಮೆದುವಾದ ಸಾಮಗ್ರಿಯಿಂದ (ಆದರೆ, ಪೂರ್ಣವಾಗಿ ಅಥವಾ ಆಂಶಿಕವಾಗಿ ಪಾಲಿವಿನೈಲ್ ಕ್ಲೋರೈಡ್ ಅಥವಾ ಪರಿಶುದ್ಧ ಅಥವಾ ಮರುಬಳಕೆಯ ಪ್ಲಾಸ್ಟಿಕ್‌ನ ಯಾವುದೇ ರೂಪದಿಂದ ತಯಾರಿಸಬಾರದು) ಅಥವಾ ವಿದ್ಯುನ್ಮಾನಿತ ಪ್ರದರ್ಶಕ/ ಎಲ್‌ಸಿಡಿ ಯಿಂದ ಮಾಡಲಾಗಿರುತ್ತದೆ.

(ಜಿ) "**ಕಟ್ಟಡದ ಸುತ್ತಲು ಜಾಹೀರಾತು**" ಎಂದರೆ, ಕಟ್ಟಡದ ಮುಂಭಾಗದಾದ್ಯಂತ ಹಬ್ಬಿರುವಂತೆ ಯಾವುದೇ ಕಟ್ಟಡದ ಮುಂಭಾಗದ ಮೇಲೆ ಅಥವಾ ನಿರ್ಮಾಣದ ಅಥವಾ ದುರಸ್ತಿಯ ಹಂತದಲ್ಲಿರುವ ಕಟ್ಟಡದ ಸಾರುವೆಯ ಮೇಲೆ ಪ್ರದರ್ಶಿಸುವ ಅಥವಾ ಗಾಜಿನ ಮುಂಭಾಗ ಅಥವಾ ಕಿಟಕಿಗೆ ಅಂಟಿಸುವ ಅಥವಾ ಜೋಡಿಸುವ ಜಾಹೀರಾತಾಗಿದೆ;

(ಎಚ್) "**ಯಾವುದೇ ಕಂಬಗಳನ್ನು ಬಳಸದೆಯೇ ಜಾಹೀರಾತು ಫಲಕಗಳನ್ನು ನಿಲ್ಲಿಸಲು ಬಳಸುವಂಥ ಕಟ್ಟಡ ಆಚ್ಛಾದಿತ ವಿದ್ಯುನ್ಮಾನಿತ ಜಾಹೀರಾತುಗಳು**" ಎಂದರೆ, ಪಾರಂಪರಿಕ ಕಟ್ಟಡವಲ್ಲದಂತಹ ಯಾವುದೇ ಕಟ್ಟಡದ ಮುಂಭಾಗದ ಮೇಲೆ ಡಿಜಿಟಲ್ ಮುದ್ರಣಗಳನ್ನು ಬಳಸಿ ಪ್ರದರ್ಶಿಸುವ ಜಾಹೀರಾತಾಗಿದ್ದು, ಅದನ್ನು ರಾತ್ರಿ ಪ್ರಜ್ವಲಿಸಬಹುದು ಮತ್ತು ಒಂದು ಅಥವಾ ಹೆಚ್ಚಿನ ಭಿನ್ನ ವರ್ಣಗಳ ಸಮ್ಮಿಳನದ ರೂಪದಲ್ಲಿ ಬೆಳಗಬಹುದು ಅಥವಾ ಕಾಣಿಸಬಹುದು;

(ಐ) "**ಮುಖ್ಯಆಯುಕ್ತ**," ಎಂದರೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು**;**

(ಜೆ) **"ನಗರ ಪಾಲಿಕೆ"** ಎಂದರೆ, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಗರ ಪಾಲಿಕೆ;

(ಕೆ) **"ಆಯುಕ್ತರು"** ಎಂದರೆ, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಗರ ಪಾಲಿಕೆಯ ಆಯುಕ್ತರು;

(ಎಲ್) "**ಪ್ರದರ್ಶನ**" ಎಂದರೆ, ಜಾಹೀರಾತನ್ನು ಪ್ರತಿಷ್ಠಾಪಿಸಿರುವಂತಹ ಸ್ಥಳ ಯಾವುದೇ ಇರಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಸಾರ್ವಜನಿಕರಿಗೆ ಕಾಣಿಸುವ ಜಾಹೀರಾತು ಅಥವಾ ಮಾಹಿತಿ;

(ಎಮ್) "**ವಿದ್ಯುನ್ಮಾನಿತ ಪ್ರದರ್ಶನ**" ಎಂದರೆ, ಕಂಪ್ಯೂಟರ್ ಪ್ರೋಗ್ರಾಮ್‌ಗಳು ಮತ್ತು ತಂತ್ರಾಂಶ ಅಥವಾ ಇತರ ಯಾವುದೇ ವಿಧಾನಗಳಿಂದ ಚಾಲನೆಗೊಳ್ಳುವ ಪಠ್ಯ, ಪ್ರದರ್ಶನಗಳು ಮತ್ತು ಮಾಹಿತಿ ಸಂದೇಶಗಳನ್ನು ಪ್ರದರ್ಶಿಸುವುದಕ್ಕಾಗಿ ಎಲ್‌ಇಡಿ ಬೆಳಕನ್ನು ಹೊರಹೊಮ್ಮಿಸುವ ಡೈಯೋಡ್ (ಲೈಟ್ ಎಮಿಟಿಂಗ್ ಡೈಯೋಡ್) ಅಥವಾ ಎಲ್‌ಸಿಡಿ ನೀರ್ವರಳು ತೆರೆ (ಲಿಕ್ವಿಡ್ ಕ್ರಿಸ್ಟೆಲ್ ಡಿಸ್‌ಪ್ಲೇ) ಅಥವಾ ಇತರ ಯಾವುದೇ ವಿದ್ಯುನ್ಮಾನಿತ ಮೂಲದಿಂದ ತಯಾರಿಸಲಾದ ಪ್ರದರ್ಶಕವುಳ್ಳ ಮಾಧ್ಯಮ ಸಾಧನವಾಗಿವೆ.

(ಎನ್) "**ನಮೂನೆ**" ಎಂದರೆ, ಈ ನಿಯಮಗಳಿಗೆ ಅನುಬಂಧಿಸಿರುವ ನಮೂನೆ;

(ಓ) **"ನೆಲಬಾಡಿಗೆ"** ಎಂದರೆ, ಜಾಹೀರಾತಿಗಾಗಿ ಅಥವಾ ಇತರೆ ಉದ್ದೇಶಕ್ಕಾಗಿ ಭೂಮಿ ಅಥವಾ ಸ್ವತ್ತನ್ನು ಉಪಯೋಗಿಸುವುದಕ್ಕಾಗಿ ಭೂಮಾಲೀಕರು ಅಥವಾ ಸ್ವತಂತ್ರ ಹಿಡುವಳಿದಾರರು ಅಥವಾ ಸ್ವತ್ತಿನ ಅಧೀಭೋಗದಾರರಿಗೆ ಮಾಡುವ ಸಂದಾಯ ಮತ್ತು ಇದರಲ್ಲಿ ಜಾಹೀರಾತು ಶುಲ್ಕ ಒಳಗೊಂಡಿರುವುದಿಲ್ಲ.

(ಪಿ) **"ಪರಂಪರಾಗತ (Legacy) ಜಾಹೀರಾತು"** ಎಂದರೆ, ಬಿಬಿಎಂಪಿ ಜಾಹೀರಾತು ಉಪ-ವಿಧಿಗಳು 2006ರ ಅಡಿಯಲ್ಲಿ ಅನುಮತಿಗಳನ್ನು ಪಡೆಯಲಾದ ಅನುಮೋದಿತ ಅಥವಾ ದಾಖಲಿತ ಅಥವಾ ನೋಂದಾಯಿತ ಏಜೆನ್ಸಿಗಳು ಮತ್ತು

(i) ಬಿಬಿಎಂಪಿ ಜೊತೆಗೆ ಮಾಡಿಕೊಂಡ ಅಸ್ತಿತ್ವದಲ್ಲಿರುವ ಒಪ್ಪಂದ ಹೊಂದಿರುವ, ಅಥವಾ

(ii) ಪ್ರದರ್ಶನಗೊಳ್ಳಲು 1.1.2016 ರಂದು ಸಿಂಧುವಾಗಿರುವಂತೆ ಬಿಬಿಎಂಪಿಯಿಂದ ಅನುಮತಿ ಹೊಂದಿದ್ದ, ಅಥವಾ

(iii) ದಿನಾಂಕ 06.08.2015 ಅಥವಾ 09.10.2015ರ ಬಿಬಿಎಂಪಿಯ ಪತ್ರಿಕಾ ಜಾಹೀರಾತುಗಳಿಗೆ ಪ್ರತಿಯಾಗಿ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದು, ಅದರ ಕ್ರಮಬದ್ಧ ಸ್ವೀಕೃತಿ ಪತ್ರವನ್ನು ಹೊಂದಿರುವ;

ಖಾಸಗಿ ಅಥವಾ ಸಾರ್ವಜನಿಕ ಸ್ವತ್ತುಗಳ ಮೇಲೆ ನಿಲ್ಲಿಸಿದ ಮತ್ತು ಪ್ರದರ್ಶಿಸಲಾದ ಪ್ರಕಟಣಾ ಫಲಕಗಳು ಸೇರಿದಂತೆ ಅನುಮತಿಸಿರುವ ವಾಣಿಜ್ಯಜಾಹೀರಾತುಗಳು.

(ಕ್ಯು) **"ಪರವಾನಗಿ"** ಎಂದರೆ, ಈ ನಿಯಮಗಳ ಅಡಿಯಲ್ಲಿ ನೀಡಲಾಗುವ ಪರವಾನಗಿ;

(ಆರ್) "**ಮೊಬೈಲ್ ಜಾಹೀರಾತು ಪ್ರದರ್ಶನ**"ಎಂದರೆ, ಜಾಹೀರಾತಿನ ಉತ್ತಮ ಪ್ರದರ್ಶನಕ್ಕಾಗಿ ಒಂದು ಪ್ರಮುಖ ಸ್ಥಳಗಳಲ್ಲಿ ಸುತ್ತಲು ತಿರುಗಬಹುದಾದ ಅಥವಾ ನಿಲ್ಲಿಸಲಾದ ರೀತಿಯಲ್ಲಿ ವಾಹನದ ಮೇಲೆ ಅಥವಾ ಹಿಂದೆ

ಹಾಕಲಾದ ಏಕ ಅಥವಾ ದ್ವಿ ಬದಿಯ (Double or Single Sided) ಜಾಹೀರಾತು ಫಲಕ (Hoarding) ಅಥವಾ ಪ್ಯಾನಲ್;

(ಎಸ್) "**ಅನುಮತಿ**" ಎಂದರೆ, ಈ ನಿಯಮಗಳ ಅಡಿಯಲ್ಲಿ ನೀಡಲಾದ ಅನುಮತಿ;

(ಟಿ) "**ಭಿತ್ತಿಪತ್ರ**" (ಪೋಸ್ಟರ್) ಎಂದರೆ, ಕಾಗದದ ಅಥವಾ ಇತರ ಯಾವುದೇ ಜೈವಿಕವಾಗಿ ಕೊಳೆಯಬಲ್ಲ ಸಾಮಗ್ರಿಯಿಂದ ಮಾಡಿದ ಹಾಳೆಯಾಗಿದ್ದು, (ಆದರೆ, ಪೂರ್ಣವಾಗಿ ಅಥವಾ ಆಂಶಿಕವಾಗಿ ಪಾಲಿವಿನೈಲ್ ಕ್ಲೋರೈಡ್ ಅಥವಾ ಪರಿಶುದ್ಧ ಅಥವಾ ಮರುಬಳಕೆಯ ಪ್ಲಾಸ್ಟಿಕ್‌ನ ಯಾವುದೇ ರೂಪದಿಂದ ತಯಾರಿಸಬಾರದು) ಸಾಮಾನ್ಯವಾಗಿ ಗೋಡೆ, ಆವರಣ, ಮೋಟು ಗೋಡೆ, ಜಾಹೀರಾತು ಫಲಕಗಳು, ಇತ್ಯಾದಿಗಳ ಮೇಲೆ ಅಂಟಿಸುವ ಮೂಲಕ ಸಾರ್ವಜನಿಕ ಸ್ಥಳದಲ್ಲಿ ಪ್ರದರ್ಶಿಸುವುದಕ್ಕಾಗಿ ಯಾವುದಾದರೂ ವಿಷಯವನ್ನು ಜಾಹೀರು ಮಾಡಲು ಬಳಸುವುದಾಗಿದೆ;

(ಯು) "**ದಾರಿಯ ಹಕ್ಕು (ಆರ್‌ಓಡಬ್ಲ್ಯು)**" ಎಂದರೆ, ಸಂಬಂಧಪಟ್ಟ ಪ್ರಾಧಿಕಾರದ ಒಡೆತನದ ರಸ್ತೆ (ವಾಹನ ರಸ್ತೆ ಮತ್ತು ರಸ್ತೆಯ ಇಕ್ಕೆಲಗಳು), ಕಾಲುವೆಗಳು, ಸರ್ವಿಸ್ ರಸ್ತೆಗಳು, ಮರ ನೇಡುವುದಕ್ಕಾಗಿ, ಜನೋಪಯೋಗಿ ಸ್ಥಳಗಳು, ಮುಂತಾದವುಗಳಿಗೆ ಅವಕಾಶ ಮಾಡಿಕೊಡುವುದಕ್ಕಾಗಿ ಅಗತ್ಯವಾಗಿರುವ ಒಟ್ಟು ವಿಸ್ತಾರದ ಜಾಗ ಎಂದು ತಿಳಿಯತಕ್ಕದ್ದು.

(ವಿ) "**ಅನುಸೂಚಿ**" ಎಂದರೆ, ಈ ನಿಯಮಗಳಿಗೆ ಅನುಬಂಧಿಸಲಾಗಿರುವ ಅನುಸೂಚಿ;

(ಡಬ್ಲು) "**ಸ್ವಯಂ-ಜಾಹೀರಾತು ಅಥವಾ ಸ್ವಯಂ ಸೈನೇಜ್**" ಎಂದರೆ, ಒಂದು ಕಟ್ಟಡ ಅಥವಾ ಸ್ಥಳ ಅಥವಾ ಭೂಮಿಯಲ್ಲಿ ನಡೆಸಲಾಗುವ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಅದರ ಗುರುತು, ಹೆಸರು ಅಥವಾ ಮಾಹಿತಿಗಾಗಿ ಸಾರ್ವಜನಿಕರಿಗೆ ಪ್ರದರ್ಶಿಸಲಾದ ಯಾವುದೇ ಜಾಹೀರಾತು ಅಥವಾ ಪ್ರದರ್ಶನ ಆದರೆ, ಅದು ಸದರಿ ಭೂಮಿ ಅಥವಾ ಸ್ಥಳ ಅಥವಾ ಕಟ್ಟಡದಲ್ಲಿ ನಡೆಸದಿರುವ ಅಥವಾ ಲಭ್ಯವಿರದಿರುವ ಯಾವುದೇ ವಿಷಯದ ಮಾಹಿತಿ ಅಥವಾ ಪ್ರದರ್ಶನ ಒಳಗೊಳ್ಳುವುದಿಲ್ಲ.

(2)ಈ ನಿಯಮಗಳಲ್ಲಿ ಬಳಸಲಾಗಿರುವ ಆದರೆ ಅರ್ಥವಿವರಣೆ ನೀಡದಿರುವಂತಹ ಯಾವುದೇ ಪದಗಳು ಮತ್ತು ಪದಾವಳಿಗಳಿಗೆ ಅಧಿನಿಯಮದಲ್ಲಿ ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳಲ್ಲಿ ಅವುಗಳಿಗೆ ನೀಡಲಾಗಿರುವ ಅವೇ ಅರ್ಥಗಳನ್ನು ಹೊಂದಿರತಕ್ಕದ್ದು ಮತ್ತು ಯಾವುದೇ ಸಂಶಯದ ಸಂದರ್ಭದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರ ತೀರ್ಮಾನವು ಅಂತಿಮವಾಗಿರತಕ್ಕದ್ದು.

3.ಸಾಮಾನ್ಯ ಉಪಬಂಧಗಳು,-ಈ ಮುಂದಿನ ಸಾಮಾನ್ಯ ಉಪಬಂಧಗಳು, ಈ ನಿಯಮಗಳ ಹಾಗೂ ಅವುಗಳ ಅರ್ಥವಿವರಣೆಯಿಂದ ನಿರ್ವಹಿಸತಕ್ಕದ್ದು ಮತ್ತು ಮಾರ್ಗದರ್ಶಿಯಾಗಿರತಕ್ಕದ್ದು,-

(i) ಹದಿನೆಂಟು ಮೀಟರ್‌ಗಿಂತ ಕಡಿಮೆ ಅಗಲವಿರುವ ಯಾವುದೇ ರಸ್ತೆಯ ಮೇಲೆ ಸ್ವಯಂ-ಜಾಹೀರಾತನ್ನು ಹೊರತುಪಡಿಸಿ, ಯಾವುದೇ ಜಾಹೀರಾತಿಗೆ ಅನುಮತಿಸತಕ್ಕದ್ದಲ್ಲ:

ಪರಂತು, ಅನುಮೋದಿತ ಮಾಸ್ಟರ್ ಪ್ಲಾನ್ ಅಡಿಯಲ್ಲಿ ವಾಣಿಜ್ಯ ಅಥವಾ ಕೈಗಾರಿಕೆ ಬಳಕೆಗಾಗಿ ಘೋಷಿಸಲಾದ ಪ್ರದೇಶಗಳ ಸಂದರ್ಭದಲ್ಲಿ ಅರವತ್ತು ಅಡಿಗಿಂತ ಕಡಿಮೆ ಅಗಲದ ರಸ್ತೆಯ ಮೇಲೆ ಜಾಹೀರಾತು ಕುರಿತ ಸದರಿ ನಿಷೇಧವು ಅನ್ವಯವಾಗತಕ್ಕದ್ದಲ್ಲ ಆದರೆ ಈ ನಿಯಮಗಳ ಪ್ರಕಾರ ನಿರ್ಬಂಧಗಳು ಮತ್ತು ನಿಬಂಧನೆಗಳಿಗೆ ಒಳಪಡತಕ್ಕದ್ದು.

(ii) ವೈಯಕ್ತಿಕ ಜಾಹೀರಾತು ಅಥವಾ ಪ್ರದರ್ಶನಕ್ಕಾಗಿ ಅನುಮತಿಸಲಾದ ಗರಿಷ್ಠ ಗಾತ್ರ ಮತ್ತು ಅಳತೆಗಳು ಅನುಸೂಚಿ-IIIರಲ್ಲಿ ನಿರ್ದಿಷ್ಟಪಡಿಸಲಾದಂತೆ ಇರತಕ್ಕದ್ದು.

(iii) ಪ್ರತ್ಯೇಕ ಜಾಹೀರಾತಿನ ಗರಿಷ್ಟ ಗಾತ್ರ ಮತ್ತು ಅಳತೆಗಳಿಗೆ ಮತ್ತು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದ ಇತರೆ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು, ಪ್ರತಿಯೊಂದು ರಸ್ತೆಯ ಮೇಲೆ (ಈ ಕೆಳಗೆ ನಿರ್ದಿಷ್ಟಪಡಿಸಿದಂತೆ) ಅಥವಾ ವೃತ್ತದಲ್ಲಿ ಅಥವಾ ಪ್ರದೇಶದಲ್ಲಿ ಗರಿಷ್ಟ ಅನುಮತಿಸಬಹುದಾದ ಪಾವತಿ ಜಾಹೀರಾತು ಈ ಮುಂದಿನಂತಿರತಕ್ಕದ್ದು,-

ರಸ್ತೆ/ವೃತ್ತ/ಪ್ರದೇಶದ ವಿಧ	**ಪ್ರತಿ 200 ಮೀಟರ್ ರಸ್ತೆ (ಎರಡು ಬದಿಗಳು ಸೇರಿದಂತೆ) ಅಥವಾ ವೃತ್ತ ಅಥವಾ ಪ್ರದೇಶದಲ್ಲಿ ಗರಿಷ್ಟ ಅನುಮತಿಸಬಹುದಾದ ಪಾವತಿ ಜಾಹೀರಾತು ಪ್ರದೇಶ**
18 ಮೀಟರ್‌ಗಿಂತ ಕಡಿಮೆ ಇರದ ಆದರೆ 24 ಮೀಟರ್‌ಗಿಂತ ಕಡಿಮೆ ಇರುವ ರಸ್ತೆ ಅಗಲ ಅಥವಾ ದಾರಿಹಕ್ಕು (RoW).	ಪ್ರತಿ **200 ಮೀಟರ್** ರಸ್ತೆಯ ಉದ್ದಕ್ಕೆ 1000 ಚದರಡಿ (ಎರಡು ಬದಿ ಸೇರಿ):
24 ಮೀಟರ್‌ಗಿಂತ ಕಡಿಮೆ ಇರದ ಆದರೆ 30 ಮೀಟರ್‌ಗಿಂತ ಕಡಿಮೆ ಇರುವ ರಸ್ತೆ ಅಗಲ ಅಥವಾ ದಾರಿಹಕ್ಕು (RoW).	ಪ್ರತಿ **200ಮೀಟರ್**. ರಸ್ತೆಯ ಉದ್ದಕ್ಕೆ 1200 ಚದರಡಿ (ಎರಡು ಬದಿ ಸೇರಿ):
30 ಮೀಟರ್‌ಗಿಂತ ಕಡಿಮೆ ಇರದ ಆದರೆ 60 ಮೀಟರ್‌ಗಿಂತ ಕಡಿಮೆ ಇರುವ ರಸ್ತೆ ಅಗಲ ಅಥವಾ ದಾರಿಹಕ್ಕು (RoW).	ಪ್ರತಿ **200ಮೀಟರ್**. ರಸ್ತೆಯ ಉದ್ದಕ್ಕೆ 1500 ಚದರಡಿ (ಎರಡು ಬದಿ ಸೇರಿ):
60 ಮೀಟರ್‌ಗಿಂತ ಕಡಿಮೆಯಲ್ಲದ ರಸ್ತೆ ಅಗಲ ಅಥವಾ ದಾರಿಹಕ್ಕು (RoW).	ಪ್ರತಿ **200ಮೀಟರ್**. ರಸ್ತೆಯ ಉದ್ದಕ್ಕೆ 1600 ಚದರಡಿ (ಎರಡು ಬದಿ ಸೇರಿ):
ವೃತ್ತ	ಪ್ರತಿ ಐವತ್ತು ಸಾವಿರ ಚದರಡಿ ವರ್ತುಲ ಪ್ರದೇಶಕ್ಕೆ 3000 ಚದರ ಅಡಿ:

ವಾಣಿಜ್ಯ ಅಥವಾ ಕೈಗಾರಿಕಾ ಪ್ರದೇಶವೆಂದು ಮಾಸ್ಟರ್ ಪ್ಲಾನ್ ನಲ್ಲಿ ಅಥವಾ ಆಯುಕ್ತರಿಂದ ಘೋಷಿಸಲ್ಪಟ್ಟ ಇತರೆ ಯಾವುದೇ ಪ್ರದೇಶ/ಸ್ಥಳ	i. 18 ಮೀ. ಅಥವಾ ಹೆಚ್ಚಿನ ಅಗಲದ ರಸ್ತೆಗೆ – ಮೇಲಿನಂತೆ. ii. 12 ಮೀ. ಗಿಂತ ಕಡಿಮೆ ಅಲ್ಲದ ಆದರೆ 18 ಮೀ. ಗಿಂತ ಕಡಿಮೆ ಅಗಲ ಇರುವ ರಸ್ತೆಗಳಿಗೆ – ಪ್ರತಿ 200 ಮೀ.ಗೆ 600 ಚದರ ಅಡಿ (ಎರಡು ಬದಿ ಸೇರಿ) ii. 6 ಮೀ. ಗಿಂತ ಕಡಿಮೆ ಅಲ್ಲದ ಆದರೆ 12 ಮೀ. ಗಿಂತ ಕಡಿಮೆ ಅಗಲ ಇರುವ ರಸ್ತೆಗಳಿಗೆ – ಪ್ರತಿ 200 ಮೀ.ಗೆ 500 ಚದರ ಅಡಿ (ಎರಡು ಬದಿ ಸೇರಿ)

ಪರಂತು ಆಯುಕ್ತರ ಆದೇಶದ ಮೇರೆಗೆ ಯಾವುದೇ ನಿರ್ದಿಷ್ಟಪಡಿಸಿದ ಪ್ರದೇಶಗಳು ಹಾಗೂ ರಸ್ತೆಗಳನ್ನು "ವಿಶೇಷ ವ್ಯವಹಾರ ಅಥವಾ ವಾಣಿಜ್ಯ ಕೇಂದ್ರ/ರಸ್ತೆ"ಗಳೆಂದು ಘೋಷಿಸಬಹುದು. ಮತ್ತು ಇಂತಹ ಪ್ರದೇಶ ಹಾಗೂ ರಸ್ತೆಗಳಲ್ಲಿ ಮೇಲಿನ ಕೋಷ್ಟಕದಲ್ಲಿ ಗರಿಷ್ಠ ಅನುಮತಿಸಲಾದ ಪಾವತಿಸಿದ ಜಾಹೀರಾತು ಪ್ರದೇಶದ ಮಿತಿಯೊಳಗೆ 200 ಮೀ ಬದಲಾಗಿ 100 ಮೀ. ಗಳೆಂದು ಪರಿಗಣಿಸತಕ್ಕದ್ದು.

ಪರಂತು ಈ ನಿಯಮಗಳಿಗೆ ಒಳಪಟ್ಟು, 2 ವಾಣಿಜ್ಯ ಹೊರ್ಡಿಂಗ್ಸ್ ಗಳ ಮಧ್ಯದ ಅಂತರವು ಒಂದು ಹೋರ್ಡಿಂಗ್‌ನ ತುದಿಯಿಂದ ಇನ್ನೊಂದು ಹೋರ್ಡಿಂಗ್‌ನ ತುದಿಯವರೆಗೆ ಅಳೆದಾಗ ಐವತ್ತು (50) ಮೀ.ಗಿಂತ ಕಡಿಮೆ ಇರತಕ್ಕದ್ದಲ್ಲ. ಇದು ವಿರುದ್ಧ ದಿಕ್ಕುಗಳಲ್ಲಿ ಮುಖಮಾಡಿರುವ, ಒಂದರ ಹಿಂಬದಿಯಲ್ಲಿ ಇನ್ನೊಂದರಂತೆ ಎರಡು ಹೋರ್ಡಿಂಗ್‌ಗಳನ್ನು ಹೊಂದಿರುವ V-ಆಕಾ್ರ ಹೋರ್ಡಿಂಗ್‌ಗೆ ಅನ್ವಯಿಸತಕ್ಕದ್ದಲ್ಲ.

(iv) ಆಯುಕ್ತರು, **200ಮೀಟರ್** ಉದ್ದದ ರಸ್ತೆ ಅಥವಾ ವರ್ತುಲ ಪ್ರದೇಶ ಅಥವಾ ಖಾಲಿಯಿರುವ ನಿವೇಶನ (Plot) ಅಥವಾ ಸ್ಥಳದ ಮೇಲೆ ಅನುಮತಿಸಲಾದ ಗರಿಷ್ಠ ಜಾಹೀರಾತು ಪ್ರದೇಶದ ಮಿತಿಗಳೊಳಗೆ ಹೆಚ್ಚಿನ ಸಾರ್ವಜನಿಕ ಹಿತಾಸಕ್ತಿಯಲ್ಲಿ ಮತ್ತು ನಗರದ ಸೌಂದರ್ಯ ಮತ್ತು ದೃಶ್ಯವನ್ನು ಸಂರಕ್ಷಿಸಲು, ಜಾಹಿರಾತು ಪ್ರದರ್ಶನಗಳ ನಡುವಿನ ಕನಿಷ್ಠ ಪರಸ್ಪರ ಅಂತರವನ್ನು ಹೆಚ್ಚಿಸುವುದು, ಪ್ರತಿ 200 ಮೀಟರ್‌ಗಳಿಗೆ ಅನುಮತಿಸಲಾದ ಜಾಹೀರಾತು ಪ್ರದರ್ಶನ ಜಾಗವನ್ನು ಕಡಿಮೆ ಮಾಡುವುದನ್ನೂ ಒಳಗೊಂಡಂತೆ ಇತರೆ ನಿರ್ಬಂಧಗಳನ್ನು ಬದಲಾಯಿಸಬಹುದು.

(v) ನಗರ ಪಾಲಿಕೆಯು, ಮುಖ್ಯ ಆಯುಕ್ತರ ಅನುಮೋದನೆ ಪಡೆದು ಕಾಲಕಾಲಕ್ಕೆ ಹೊರಡಿಸಬಹುದಾದ ಮತ್ತು ಮಾರ್ಪಡಿಸಬಹುದಾದ ಅಧಿಸೂಚನೆ ಮುಖಾಂತರ ರಸ್ತೆಗಳನ್ನು, ವೃತ್ತಗಳನ್ನು ಹಾಗೂ ಪ್ರದೇಶಗಳನ್ನು ಸೂಕ್ತ ಸೆ್ಪಚ್‌ಗಳಾಗಿ ಸಂಪೂರ್ಣ ನಗರವನ್ನು ವಿಂಗಡಿಸತಕ್ಕದ್ದು ಮತ್ತು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದಂತೆ ಈ ರಸ್ತೆಗಳು, ವೃತ್ತಗಳು ಹಾಗೂ ಪ್ರದೇಶಗಳಲ್ಲಿ ಮಾತ್ರ ಪಾವತಿ (paid) ಜಾಹೀರಾತುಗಳನ್ನು ಹಾಕಲು ಅನುಮತಿಸತಕ್ಕದ್ದು.

(vi) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ರ ಕರ್ನಾಟಕ ಅಧಿನಿಯಮ, 29) ಹಾಗೂ ಅದರಡಿಯಲ್ಲಿ ರಚಿಸಲಾದ

ನಿಯಮಗಳನುಸಾರವಾಗಿ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ಮುಖಾಂತರ ನಡೆಸಲಾದ ಮುಕ್ತ ಹರಾಜು/ಟೆಂಡರ್‌ನ ಮುಖಾಂತರ ಈ ರಸ್ತೆಗಳು, ವೃತ್ತಗಳು ಹಾಗೂ ಪ್ರದೇಶಗಳಲ್ಲಿ ಪಾವತಿ ಜಾಹೀರಾತುಗಳನ್ನು ಹಾಕುವ ಹಕ್ಕನ್ನು ಲೈಸನ್ಸ್ ಪಡೆದ ಜಾಹೀರಾತು ಏಜೆನ್ಸಿಗಳಿಗೆ ಮಾತ್ರ ನೀಡತಕ್ಕದ್ದು. ಅದಕ್ಕಾಗಿನ ಕನಿಷ್ಠ ಬೆಲೆಯು ಅನುಸೂಚಿ-2ರಲ್ಲಿ ನಿರ್ದಿಷ್ಟಪಡಿಸಲಾದ ಕನಿಷ್ಠ ದರಗಳಿಗನುಸಾರವಾಗಿ ಇರತಕ್ಕದ್ದು.

ಪರಂತು, ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ಅನುಸೂಚಿ-2ರಲ್ಲಿ ನಿಗದಿಪಡಿಸಲಾದ ಕನಿಷ್ಠ ಜಾಹೀರಾತು ಶುಲ್ಕದ ದರಗಳನ್ನು ಹೆಚ್ಚಿಸಬಹುದು ಮತ್ತು ಅನುಸೂಚಿ-2ರಲ್ಲಿನ ಕನಿಷ್ಠ ಜಾಹೀರಾತು ದರಕ್ಕೆ ಅನುಗುಣವಾಗಿ ಪಾವತಿಸಬೇಕಾದ ಪ್ರತಿಯೊಬ್ಬರೂ ಅದನ್ನು ಪಾವತಿಸತಕ್ಕದ್ದು.

ಮತ್ತೂ ಪರಂತು, ಗುತ್ತಿಗೆ ಕರಾರು ಅಥವಾ ಜಾಹೀರಾತು ಹಕ್ಕುಗಳನ್ನು ನಿಯೋಜಿಸುವ ಆದೇಶವು ನಿರ್ದಿಷ್ಟವಾಗಿ ಏರಿಕೆಯಾಗದಂತೆ ನಿಗದಿಪಡಿಸಿದ್ದರೆ ಅಥವಾ ನಿಗದಿತ ಜಾಹೀರಾತು ಶುಲ್ಕದ ದರವು ಈಗಾಗಲೇ ಪರಿಷ್ಕೃತ ದರಕ್ಕಿಂತ ಹೆಚ್ಚಾಗಿದ್ದರೆ, ಅಂಥ ಸಂದರ್ಭಗಳಲ್ಲಿ ಸದರಿ ಪರಿಷ್ಕರಣೆಯು ಅನ್ವಯವಾಗತಕ್ಕದ್ದಲ್ಲ.

(vii) ಯಾವುದೇ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶಕ್ಕೆ ಸಂಬಂಧಿಸಿದಂತೆ ಬಿಡ್ ವಿಜೇತರು ಈ ನಿಯಮಗಳಿಗೆ ಅನುಸಾರವಾಗಿ ಇತರರ ಪರವಾಗಿ ಅಥವಾ ಇತರರಿಗಾಗಿ ಜಾಹೀರಾತು ನೀಡಲು ಅದನ್ನು ಬಳಸುವ ಹಕ್ಕನ್ನು ಹೊಂದಿರತಕ್ಕದ್ದು. ಜಾಹೀರಾತು ತಾಣಗಳು, ಆವರಣಗಳು ಅಥವಾ ಸ್ಥಳಗಳು ಖಾಸಗಿ ಒಡೆತನದಲ್ಲಿರಬಹುದು ಅಥವಾ ಸರ್ಕಾರಿ ಅಥವಾ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ವಲಯದ ಘಟಕಗಳ ಅಥವಾ ನಗರ ಪಾಲಿಕೆಯ ಅಥವಾ ಯಾವುದೇ ಸರ್ಕಾರಿ ಏಜೆನ್ಸಿಯ ಒಡೆತನದಲ್ಲಿರಬಹುದು. ಯಾವುದೇ ಜಾಹೀರಾತನ್ನು ಪ್ರದರ್ಶಿಸುವ ಮೊದಲು, ಈ ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅವಶ್ಯಕತೆಗಳನ್ನು ಅನುಸರಿಸುವುದರ ಜೊತೆಗೆ, ನಿಗದಿತ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶ ಬರುವ ಸ್ಥಳಗಳು ಅಥವಾ ಕಟ್ಟಡಗಳು ಅಥವಾ ಖಾಲಿ ಭೂಮಿಯ ಮಾಲೀಕರಿಂದ ಅಗತ್ಯ ಒಪ್ಪಂದಗಳು ಮತ್ತು ಅನುಮತಿಗಳನ್ನು ಬಿಡ್ ವಿಜೇತನು ತನ್ನ ಸ್ವಂತ ಖರ್ಚಿನಲ್ಲಿ ಮತ್ತು ಈ ಸಂಬಂಧವಾಗಿ ಅನ್ವಯವಾಗುವ ಕಾನೂನುಗಳು ಮತ್ತು ನಿಯಮಗಳಿಗೆ ಅನುಸಾರವಾಗಿ ಮಾಡತಕ್ಕದ್ದು:

ಪರಂತು, ಪಾವತಿಸಿದ ಜಾಹೀರಾತಿಗೆ ಮೂಲಸೌಕರ್ಯವನ್ನು ಅಳವಡಿಸಿದ ಖಾಸಗಿ ಸ್ವತ್ತು ಅಥವಾ ಭೂಮಿಯ ಸಂಬಂಧದಲ್ಲಿ ಅಂತಹ ಜಾಹೀರಾತು ಹೋರ್ಡಿಂಗ್‌ಗಳಿಗೆ ನಿಗದಿಪಡಿಸಿರುವ ಮೊತ್ತವನ್ನು ವಿಧಿಸಲಾಗುವುದು ಮತ್ತು ಜಾಹೀರಾತಿನ ಮೂಲಸೌಕರ್ಯವು ಅಳವಡಿಕೆಯಾಗಿರುವ ಅವಧಿಯವರೆಗೆ ಜಾಹೀರಾತು

ಹೋರ್ಡಿಂಗ್‌ಗಳಿಗೆ ನಿಯಮಿಸಲಾದಂಥ ಹಣವನ್ನು ನಗರ ಪಾಲಿಕೆಯು ಹೆಚ್ಚುವರಿ ಆಸ್ತಿ ತೆರಿಗೆಯೆಂದು ಪಾವತಿಸಿಕೊಳ್ಳತಕ್ಕದ್ದು.

ಪರಂತು, ಇಂತಹ ಜಾಹೀರಾತುಗಳನ್ನು ಅನ್ಯಥಾ ಬಹು ಸಂಖ್ಯೆಯ ಸ್ವತ್ತು/ಮಾಲೀಕರು ಹೊಂದಿರುವ ಸಾಮಾನ್ಯ ಪ್ರದೇಶಗಳಲ್ಲಿ ಜಾಹೀರಾತು ಅಳವಡಿಸಿದ್ದಲ್ಲಿ ಅಂತಹ ಸಾಮಾನ್ಯ ಜಾಗದಲ್ಲಿ ಅನುಮತಿಸಲು ಸಕ್ಷಮವಾಗಿರುವ ನಿರ್ವಾಹಕರು ಅಥವಾ ಸಕ್ಷಮ ಪ್ರಾಧಿಕಾರವು ಅಂತಹ ಜಾಹೀರಾತು ಫಲಕಗಳಿಗೆ ಅನ್ವಯವಾಗುವ ಹೆಚ್ಚುವರಿ ಆಸ್ತಿ ತೆರಿಗೆಯನ್ನು ಪಾವತಿಸತಕ್ಕದ್ದು. ಸದರಿ ಜಾಹೀರಾತಿಗೆ ಸಂಬಂಧಿಸಿದಂತೆ ಯಾವುದೇ ಪ್ರದೇಶ ಅಥವಾ ರಸ್ತೆ ಅಥವಾ ವೃತ್ತದಲ್ಲಿ ವಾಣಿಜ್ಯ ಜಾಹೀರಾತುಗಳನ್ನು ಅಳವಡಿಸಿ ಪ್ರದರ್ಶಿಸಲು ಹಕ್ಕನ್ನು ಹೊಂದಿರುವ ಪರವಾನಗಿ ಪಡೆದ ಜಾಹೀರಾತುದಾರರಿಗೂ ಕೂಡ ಈ ನಿಯಮಗಳ ಪ್ರಕಾರ ವಸತಿ ಸ್ವತ್ತುಗಳಿಗೆ ನಿಯಮಿಸಿರುವ ಹೆಚ್ಚುವರಿ ಆಸ್ತಿ ತೆರಿಗೆಯನ್ನು ಪ್ರತಿ ಜಾಹೀರಾತು ಅಳವಡಿಕೆಗೆ ನಗರ ಪಾಲಿಕೆಗೆ ಪಾವತಿಸಲು ಬದ್ಧವಾಗಿರತಕ್ಕದ್ದು.

ಪರಂತು ಸದರಿ ಸ್ವತ್ತು ಅಥವಾ ಭೂಮಿ 'ಬಿ' ನೋಂದಣಿ ಖಾತೆಯಾಗಿದಲ್ಲಿ ಅಥವಾ ನಗರ ಪಾಲಿಕೆಯಿಂದ ಯಾವುದೇ ಖಾತೆಯನ್ನು ಹೊಂದಿರದಿದ್ದಲ್ಲಿ ಅದರ ಮೇಲೆ ವಾಣಿಜ್ಯ ಜಾಹೀರಾತಿಗೆ ಅನುಮತಿಸತಕ್ಕದ್ದಲ್ಲ ಮತ್ತು ಅಂಥ ಸ್ವತ್ತು ನಿಯಮಿಸಲಾದ ಅಗತ್ಯತೆಗಳ ಯುಕ್ತ ಅನುಪಾಲನೆಯ ತರುವಾಯ ಎ-ಖಾತೆಯನ್ನು ಹೊಂದುವ ಮತ್ತು ಆ ನಂತರ ಈ ನಿಯಮಗಳ ಅನುಸಾರವಾಗಿ ವಾಣಿಜ್ಯ ಜಾಹೀರಾತುಗಳ ಅಳವಡಿಕೆಗೆ ಉಪಯೋಗಿಸುವ ಆಯ್ಕೆಯನ್ನು ಯಾವಾಗಲೂ ಹೊಂದಿರುತ್ತದೆ.

ನಗರ ಪಾಲಿಕೆಯು, ಖಾತೆಯನ್ನು ಹೊಂದಿರದ ಅಥವಾ ಆಸ್ತಿ ತೆರಿಗೆ ಪಟ್ಟಿಯ ಹೊರಗಿರುವ ಅಂಥ ಯಾವುದೇ ಸ್ವತ್ತುಗಳು ಅಥವಾ ಜಾಗಗಳ ಮೇಲಿನ ಜಾಹೀರಾತುಗಳನ್ನು ಅವುಗಳು ನಗರ ಪಾಲಿಕೆಯ ಗಮನಕ್ಕೆ ಬಂದ ತಕ್ಷಣ ತೆಗೆದುಹಾಕುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಮತ್ತು ಪರಂತು, ಬೆಂಗಳೂರು ಮೆಟ್ರೋ ಕಂಬಗಳು ಮತ್ತು ಬೆಂಗಳೂರು ಮೆಟ್ರೋ ನಿಲ್ದಾಣಗಳು ಮತ್ತು ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ (ಬಿಎಂಆರ್‌ಸಿಎಲ್) ಮೂಲಸೌಕರ್ಯಗಳಲ್ಲಿನ ಜಾಹೀರಾತುಗಳು ಅಥವಾ ಪ್ರದರ್ಶನಗಳನ್ನು, ಅದನ್ನು ವಹಿಸಲಾದ ಪ್ರದೇಶ ಅಥವಾ ರಸ್ತೆ ಅಥವಾ ವೃತ್ತದೊಳಗೆ ಇದ್ದರೂ ಸಹ ಯಾರೇ ಬಿಡ್ ವಿಜೇತರಿಗೆ ನಿಗದಿಪಡಿಸಿದ ಹಕ್ಕುಗಳಿಂದ ಹೊರತುಪಡಿಸಲಾಗಿರುತ್ತದೆ. ಬಿಎಂಆರ್‌ಸಿಎಲ್ ಈ ನಿಯಮಗಳ ಅನುಗುಣವಾಗಿ ಮತ್ತು ಈ ನಿಯಮಗಳಲ್ಲಿ ನಿಯಮಿಸಿದಂತೆ ಜಾಹೀರಾತು ಶುಲ್ಕ ಮತ್ತು ಇತರ ಶುಲ್ಕಗಳ ಪಾವತಿಗೆ ಒಳಪಟ್ಟು ಅದನ್ನು ಪ್ರತ್ಯೇಕವಾಗಿ ಸೂಕ್ತ ಟೆಂಡರ್‌ಗೆ ಇಡತಕ್ಕದ್ದು.

ಟಿಪ್ಪಣಿ: ನಗರ ಪಾಲಿಕೆಗೆ ಪಾವತಿಸಬೇಕಾದ ಜಾಹೀರಾತು ಶುಲ್ಕವು ಇತರರ ಪರವಾಗಿ ಅಥವಾ ಪರವಾಗಿ ಜಾಹೀರಾತುಗಳನ್ನು ಮಾಡುವ ಹಕ್ಕುಗಳಿಗೆ ಮಾತ್ರವಾಗಿರುತ್ತದೆ. ಕೇವಲ ಜಾಹೀರಾತು ಶುಲ್ಕವನ್ನು ನಗರ ಪಾಲಿಕೆಗೆ ಪಾವತಿಸುವ

ಮೂಲಕ ಅಂತಹ ಜಾಹೀರಾತುದಾರರಿಗೆ ಯಾವುದೇ ಜಾಹೀರಾತು ಅಥವಾ ಪ್ರದರ್ಶನವನ್ನು ನಿಗದಿಪಡಿಸಿದ ರಸ್ತೆ ಅಥವಾ ಪ್ರದೇಶ ಅಥವಾ ವೃತ್ತದ ಮೇಲೆ ಇರುವ ಯಾವುದೇ ಆಸ್ತಿ ಅಥವಾ ಭೂಮಿಯಲ್ಲಿ ಪ್ರತ್ಯೇಕವಾಗಿ ಅದರ ಮಾಲೀಕರ ಅನುಮತಿಯನ್ನು ಪಡೆಯದೆ ಮತ್ತು ಅದಕ್ಕೆ ಸೂಕ್ತ ಒಪ್ಪಂದವನ್ನು ಮಾಡಿಕೊಳ್ಳದೆ ಸ್ಥಾಪಿಸಲು ಅಥವಾ ಪ್ರದರ್ಶಿಸಲು ಯಾವುದೇ ಹಕ್ಕು ಇರುವುದಿಲ್ಲ. ಪರವಾನಗಿ ಪಡೆದ ಜಾಹೀರಾತುದಾರನು ಅಂತಹ ಬಳಕೆಗಾಗಿ ಆಸ್ತಿ ಅಥವಾ ಭೂಮಿಯ ಮಾಲೀಕರಿಗೆ ಪಾವತಿಸಬೇಕಾದ ಮೊತ್ತವು ನಗರ ಪಾಲಿಕೆಗೆ ಪಾವತಿಸಬೇಕಾದ ಜಾಹೀರಾತು ಶುಲ್ಕದಿಂದ ಹೊರತಾಗಿರುತ್ತದೆ ಮತ್ತು ಪರವಾನಗಿ ಪಡೆದ ಜಾಹೀರಾತುದಾರನ ಮತ್ತು ಆಸ್ತಿ ಮಾಲೀಕನ ನಡುವೆ ನಿರ್ಧರಿಸಲು ಬಿಡಲಾಗುತ್ತದೆ.

(viii) ಪರವಾನಗಿ ಪಡೆದ ಜಾಹೀರಾತುದಾರರಿಗೆ ನಿಗದಿಪಡಿಸಿದ ರಸ್ತೆಗಳು, ವೃತ್ತಗಳು ಮತ್ತು ಪ್ರದೇಶಗಳು ಸೇರಿದಂತೆ ಯಾವುದೇ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶದಲ್ಲಿ ಯಾವುದೇ ಅನಧಿಕೃತ ಜಾಹೀರಾತು ಬರದಂತೆ ನೋಡಿಕೊಳ್ಳಲು ನಗರ ಪಾಲಿಕೆಯು ತನ್ನ ವಿಶೇಷ ಆಯುಕ್ತರು(ಜಾಹೀರಾತು) ಅಥವಾ ವಲಯ ಜಂಟಿ ಆಯುಕ್ತರು ಮತ್ತು ಅಧಿಕೃತ ಅಧಿಕಾರಿಗಳ ಮೂಲಕ ಈ ನಿಯಮಗಳನ್ನು ಜಾರಿಗೊಳಿಸತಕ್ಕದ್ದು. ಯಾವುದೇ ಅನಧಿಕೃತ ಜಾಹೀರಾತನ್ನು ತಕ್ಷಣವೇ ತೆಗೆದುಹಾಕತಕ್ಕದ್ದು ಮತ್ತು ಅಂತಹ ಅನಧಿಕೃತ ಜಾಹೀರಾತಿಗೆ ಸಂಬಂಧಿಸಿದಂತೆ ಯಾವುದೇ ಜಾಹೀರಾತು ಶುಲ್ಕ ಅಥವಾ ದಂಡ ಅಥವಾ ಇತರ ಬಾಕಿಗಳನ್ನು ಈ ನಿಯಮಗಳಿಗೆ ಅನುಗುಣವಾಗಿ ನಗರ ಪಾಲಿಕೆಯಿಂದ ಸಂಗ್ರಹಿಸತಕ್ಕದ್ದು ಮತ್ತು ಉಳಿಸಿಕೊಳ್ಳತಕ್ಕದ್ದು. ನಗರ ಪಾಲಿಕೆಯು ಜಾರಿಗೊಳಿಸುವ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶಕ್ಕೆ ನಿಯೋಜಿಸಲಾದ ಪರವಾನಗಿ ಪಡೆದ ಜಾಹೀರಾತುದಾರನು, ಅನಧಿಕೃತ ಜಾಹೀರಾತುಗಳ ಜಾರಿ ಮತ್ತು ತೆಗೆದುಹಾಕುವಲ್ಲಿ ನಗರ ಪಾಲಿಕೆಗೆ ಸಹಾಯ ಮಾಡಲು ಬದ್ಧರಾಗಿರತಕ್ಕದ್ದು.

(ix) ರಸ್ತೆಗಳು, ವೃತ್ತಗಳು ಮತ್ತು ಪ್ರದೇಶಗಳ ಮುಕ್ತ ಹರಾಜು/ಟೆಂಡರ್ ಅನ್ನು ಪ್ರತ್ಯೇಕವಾಗಿ ಅಥವಾ ಅವುಗಳನ್ನು ಸೂಕ್ತವಾದ ಲಾಟ್‌ಗಳಲ್ಲಿ ಒಟ್ಟುಗೂಡಿಸಿದ ನಂತರ ಮಾಡಬಹುದು. ಈ ಸಂಬಂಧದಲ್ಲಿ ಪಾಲಿಕೆಯು ಹಿತದೃಷ್ಟಿಯಿಂದ ಆಯುಕ್ತರು ನಿರ್ಧಾರ ತೆಗೆದುಕೊಳ್ಳತಕ್ಕದ್ದು.

(x) ರೈಲ್ವೆ ಅಥವಾ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಅಥವಾ ಬಸ್ ನಿಲ್ದಾಣಗಳು ಅಥವಾ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಅಥವಾ ಬೆಂಗಳೂರು ಮೆಟ್ರೋ ಸಾರಿಗೆ ನಿಗಮ (ಬಿಎಂಟಿಸಿ) ಅಥವಾ ಇತರ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ವಲಯದ ಘಟಕಗಳ ಸ್ವತ್ತುಗಳೊಳಗಿನ ಜಾಹೀರಾತುಗಳಿಗೆ ಸಂಬಂಧಿಸಿದ ನಿಯೋಜನೆ ಮತ್ತು ಎಲ್ಲಾ ಹರಾಜು/ಟೆಂಡರ್‌ಗಳನ್ನು, ಈ ಸ್ವತ್ತುಗಳ ಒಳಗೆ ಭೇಟಿ ನೀಡುವ ಸಾರ್ವಜನಿಕರಿಗೆ ಗೋಚರವಾಗುವಂತೆ, ಸಂಬಂಧಿತ ಏಜೆನ್ಸಿಗಳು ತಮ್ಮ ಸ್ವಂತ ನಿಯಮಗಳು ಮತ್ತು ಕಾರ್ಯವಿಧಾನಗಳ ಪ್ರಕಾರ

ನಿರ್ಧರಿಸತಕ್ಕದ್ದು ಮತ್ತು ಅದರ ಆದಾಯವನ್ನು ಈ ಏಜೆನ್ಸಿಗಳು ಸಂಪೂರ್ಣವಾಗಿ ಉಳಿಸಿಕೊಳ್ಳತಕ್ಕದ್ದು:

(xi) ತೆರೆದ ಸಾರ್ವಜನಿಕ ಸ್ಥಳಗಳಿಗೆ ಗೋಚರಿಸುವ ಬಿಎಂಆರ್‌ಸಿಎಲ್ ಕಂಬಗಳು, ಸೇತುವೆಯ ಕಂಬಗಳು ಇತ್ಯಾದಿಗಳ ಮೇಲೆ ಜಾಹೀರಾತಿನ ಹಕ್ಕುಗಳನ್ನು ನೀಡುವ ಟೆಂಡರ್ ಅನ್ನು ಬಿಎಂಆರ್‌ಸಿಎಲ್ ಕರೆಯಬಹುದು. ಹಾಗೆ ಬಿಎಂಆರ್‌ಸಿಎಲ್‌ನ ಈ ನೀಡುವಿಕೆಯು ಈ ನಿಯಮಗಳಿಗೆ ಅನುಗುಣವಾಗಿರತಕ್ಕದ್ದು ಮತ್ತು ನಗರ ಪಾಲಿಕೆಗಳ ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು. ಸ್ಥಳವನ್ನು ನಿಜವಾಗಿ ಜಾಹೀರಾತಿಗಾಗಿ ಬಳಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಗಣಿಸದೆ, ಅನುಮತಿಸಲಾದ ಸ್ಥಳಕ್ಕೆ ನಿಗದಿಪಡಿಸಿದ ಜಾಹೀರಾತು ಹಕ್ಕುಗಳಿಗಾಗಿ ಜಾಹೀರಾತು ಆದಾಯಗಳನ್ನು ಮಾರಾಟಗಾರರು ಪಾವತಿಸಲು ಹೊಣೆಗಾರರಾಗಿರತಕ್ಕದ್ದು. ಜಾಹೀರಾತು ಹಕ್ಕುಗಳ ನಿಯೋಜನೆಯಿಂದ ಸಂಗ್ರಹಿಸಲಾದ ಜಾಹೀರಾತು ಆದಾಯಗಳನ್ನು (ಜಾಹೀರಾತು ಶುಲ್ಕದಿಂದ ವಿನಾಯಿತಿ ಪಡೆದಿರುವ ಬಿಎಂಆರ್‌ಸಿಎಲ್‌ನ ಸ್ವತ್ತುಗಳೊಳಗಿನ ಆಂತರಿಕ ಜಾಹೀರಾತುಗಳಿಗೆ ಜಾಹೀರಾತು ಆದಾಯವನ್ನು ಹೊರತುಪಡಿಸಿ) ಈ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ತೆರೆಯಲಾದ ನಗರ ಪಾಲಿಕೆ ಮತ್ತು ಬಿಎಂಆರ್‌ಸಿಎಲ್‌ನ ಜಂಟಿ ಬ್ಯಾಂಕ್ ಖಾತೆಯಲ್ಲಿ ಇಡತಕ್ಕದ್ದು. ಮತ್ತು ಅದನ್ನು ನಗರ ಪಾಲಿಕೆ ಮತ್ತು ಬಿಎಂಆರ್‌ಸಿಎಲ್ ನಡುವೆ ಸಮಾನವಾಗಿ ಹಂಚಿಕೆ ಮಾಡತಕ್ಕದ್ದು. ಪರಂತು, ಬಿಎಂಆರ್‌ಸಿಎಲ್ ಈ ಉಪಬಂಧದ ಅಡಿಯಲ್ಲಿ ಯಾರಿಗಾದರೂ ಎರಡನೇ ಅನುಸೂಚಿ-2 ರಲ್ಲಿ ನಿಗದಿಪಡಿಸಿದ ದರಕ್ಕಿಂತ ಕಡಿಮೆ ದರದಲ್ಲಿ ಜಾಹೀರಾತು ಹಕ್ಕುಗಳನ್ನು ನಿಯೋಜಿಸತಕ್ಕದ್ದಲ್ಲ.

(xii) ಯಾವುದೇ ಸರ್ಕಾರಿ ಇಲಾಖೆ, ಸಾರ್ವಜನಿಕ ವಲಯ ಘಟಕ ಅಥವಾ ಸರ್ಕಾರಿ ಸ್ವಾಮ್ಯದ ಏಜೆನ್ಸಿಯ ಸ್ವತ್ತುಗಳು ಸೇರಿದಂತೆ ಸಾರ್ವಜನಿಕ ಬೀದಿಗಳು ಅಥವಾ ರಸ್ತೆಗಳಲ್ಲಿ ಗೋಚರಿಸುವ ಯಾವುದೇ ಜಾಹೀರಾತನ್ನು ಪ್ರದರ್ಶಿಸುವ ಹಕ್ಕನ್ನು ನಗರ ಪಾಲಿಕೆಯ ಮೂಲಕ ಮತ್ತು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಸಾರ್ವಜನಿಕ ಹರಾಜು/ಟೆಂಡರ್ ಮೂಲಕ ಮಾತ್ರ ನಿಯೋಜಿಸತಕ್ಕದ್ದು ಹಾಗೂ ಅದರ ಜಾಹೀರಾತು ಶುಲ್ಕವನ್ನು ನಗರ ಪಾಲಿಕೆಗೆ ಸಂಪೂರ್ಣವಾಗಿ ಪಾವತಿಸತಕ್ಕದ್ದು.

(xiii) ಈ ನಿಯಮಗಳ ಅನುಸಾರ ಜಾಹೀರಾತುದಾರನು ಪಾವತಿಸಲು ಬದ್ಧವಾಗಿರುವ ಜಾಹೀರಾತು ಶುಲ್ಕಗಳನ್ನು ಪಾವತಿಸುವುದರ ಜೊತೆಗೆ, ಸರ್ಕಾರಿ ಏಜೆನ್ಸಿ ಅಥವಾ ಸಾರ್ವಜನಿಕ ವಲಯ ಘಟಕ ಅಥವಾ ಸರ್ಕಾರಿ ಇಲಾಖೆಯು, ನಗರ ಪಾಲಿಕೆಯು ಅನುಮೋದಿಸಿದ ಮತ್ತು ನಿಯೋಜಿಸಿದ ತರುವಾಯ ಜಾಹೀರಾತಿಗಾ ತಮ್ಮ ಸ್ವತ್ತುಗಳನ್ನು ಬಳಸಲು ಅನುಮತಿಸುವುದಕ್ಕಾಗಿ ನೆಲಬಾಡಿಗೆ (ಗ್ರೌಂಡ್ ರೆಂಟ್) ಸಂಗ್ರಹಿಸಲು ಸ್ವಾತಂತ್ರ್ಯವನ್ನು ಹೊಂದಿದೆ ಎಂದು ಸ್ಪಷ್ಟಪಡಿಸಲಾಗಿದೆ.

(xiv) ಯಾವುದೇ ಪ್ರವರ್ಗದ ಉಚಿತ ಅಥವಾ ಸ್ವಯಂ-ಜಾಹೀರಾತು ಈ ನಿಯಮಗಳ ಉಪಬಂಧಗಳ ಅನುಸಾರ ನಿರ್ದಿಷ್ಟಪಡಿಸಿದ ಗರಿಷ್ಠ ಗಾತ್ರವನ್ನು ಮೀರಿದರೆ, ಅದು ಜಾಹೀರಾತಿನ ಪೂರ್ಣ ಪ್ರದೇಶಕ್ಕೆ ಅನ್ವಯವಾಗುವ ಅನುಸೂಚಿ-2 ರಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಠ ಜಾಹೀರಾತು ದರಗಳಲ್ಲಿ ನಗರ ಪಾಲಿಕೆಗೆ ಪಾವತಿಸಲು ಬದ್ಧವಾಗಿರತಕ್ಕದ್ದು.

ದೃಷ್ಟಾಂತ: ಒಂದು ಅಂಗಡಿಯು ಈ ನಿಯಮಗಳ ಅಡಿಯಲ್ಲಿ 150 ಚದರ ಅಡಿಗಳವರೆಗೆ ಉಚಿತ ಸ್ವಯಂ-ಜಾಹೀರಾತಿಗೆ ಅನುಮತಿ ನೀಡಿದ್ದರೆ, ಆದರೆ 175 ಚದರ ಅಡಿಗಳ ಸ್ವಯಂ-ಜಾಹೀರಾತನ್ನು ಸ್ಥಾಪಿಸಿದಲ್ಲಿ ಸ್ವಯಂ-ಜಾಹೀರಾತಿನ ಸಂಪೂರ್ಣ 175 ಚದರ ಅಡಿಗಳಿಗೆ ಅನುಸೂಚಿ-2 ರಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಠ ಜಾಹೀರಾತು ದರಗಳಲ್ಲಿ ಜಾಹೀರಾತು ಶುಲ್ಕವನ್ನು ಪಾವತಿಸಲು ಬದ್ಧವಾಗಿರತಕ್ಕದ್ದು. ಈ ನಿಯಮಗಳಲ್ಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ನಗರ ಪಾಲಿಕೆಯು ಅವುಗಳನ್ನು ತೆಗೆದು ಹಾಕುವುದಕ್ಕೆ ಸಂಬಂಧಪಟ್ಟವರು ಹೊಣೆಗಾರರಾಗಿರತಕ್ಕದ್ದು.

ಪರಂತು "ಮಾಲ್ಗಳ" ಸಂದರ್ಭಗಳಲ್ಲಿ "ಮಾಲ್" ಎಂಬುವುದು ಒಂದು ದೊಡ್ಡ ಒಳಾಂಗಣ ಅಥವಾ ಶಾಪಿಂಗ್ ಸೆಂಟರ್ ಆವೃತ್ತವನ್ನು ಒಳಗೊಂಡಿರುವುದಾಗಿ ಭಾವಿಸತಕ್ಕದ್ದು, ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ಅಧಿಸೂಚನೆ ಸಂಖ್ಯೆ:Commr/BBMP-DC(Rev)/5675/15-16 ದಿನಾಂಕ: 09-03-2016 ರ ಪ್ರವರ್ಗ-VI ರಡಿಯಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸುತ್ತಿರುವ ಮತ್ತು ತಹಲ್ವರೆಗೂ ಆಸ್ತಿ ತೆರಿಗೆಯನ್ನು ಪಾವತಿಸಲಾಗಿರುವ ಮಾಲ್ಗಳ ಆವರಣಗಳ ಘಟಕಗಳಲ್ಲಿ, ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ಅಳತೆಯ ನಿರ್ಬಂಧನೆಗಳಿಗೆ ಒಳಪಟ್ಟು ಸ್ವ-ಜಾಹೀರಾತುಗಳನ್ನು ಉಚಿತವಾಗಿ ಪ್ರದರ್ಶಿಸಬಹುದಾಗಿದ್ದುಮತ್ತು ಸಾರ್ವಜನಿಕ ರಸ್ತೆಗಳಿಗೆ ಎದುರಾಗಿರುವ ಮಾಲ್ನ ಕಟ್ಟಡಗಳಲ್ಲಿ ಮತ್ತು ಆವರಣಗಳಲ್ಲಿ ಈ ಉಪವಿಧಿಗಳಲ್ಲಿ ವಾಣಿಜ್ಯ ಜಾಹೀರಾತುಗಳ ಪ್ರದರ್ಶನಕ್ಕೆ ವಿಧಿಸಿರುವ ಅಳತೆಯ ಹಾಗೂ ಇತರೆ ನಿರ್ಬಂಧನೆಗೆ ಒಳಪಟ್ಟು ವಾಣಿಜ್ಯ ಜಾಹೀರಾತುಗಳನ್ನು ಪ್ರದರ್ಶಿಸಲು ಅನುಮತಿಸಲಾಗುವುದು, ಇಂತಹ ಸಮಯದಲ್ಲಿ ಸ್ವ ಜಾಹೀರಾತುಗಳನ್ನು ಹೊರತುಪಡಿಸಿ ವಾಣಿಜ್ಯ ಜಾಹೀರಾತುಗಳು ನಗರ ಪಾಲಿಕೆಗೆ ಅನುಸೂಚಿ–2 ರಲ್ಲಿ ನಿಗದಿಪಡಿಸಿರುವ ಕನಿಷ್ಠ ಜಾಹೀರಾತು ಶುಲ್ಕದಂತೆ ವಾಣಿಜ್ಯ ಜಾಹೀರಾತು ಶುಲ್ಕವನ್ನು ಪಾವತಿಸತಕ್ಕದ್ದು. ಈ ರೀತಿಯ ಮಾಲ್ ಗಳಲ್ಲಿ ಪ್ರದರ್ಶಿಸಲಾದ ವಾಣಿಜ್ಯ ಜಾಹೀರಾತನ್ನು ಸದರಿ "ಮಾಲ್" ಇರುವ ಪ್ರದೇಶ/ರಸ್ತೆ/ವೃತ್ತದ ಬಿಡ್ ವಿಜೇತರಿಗೆ ಅನುಮತಿಸಲಾದ ವಾಣಿಜ್ಯ ಜಾಹೀರಾತಿನ ಪ್ರಮಾಣಕ್ಕೆ ಪರಿಗಣಿಸಲಾಗುವುದಿಲ್ಲ.ಸಾರ್ವಜನಿಕ ರಸ್ತೆಗಳಿಗೆ ಎದುರಾಗಿರುವ "ಮಾಲ್" ನಲ್ಲಿನ ವಾಣಿಜ್ಯ ಜಾಹೀರಾತುಗಳ ಗಾತ್ರ ಮತ್ತು ನಿರ್ಬಂಧಗಳಿಗೆ ಸಂಬಂಧಿಸಿದಂತೆ ಯಾವುದೇ ವಿವಾದ ಉದ್ಭವಿಸಿದರೆ, ಆಯುಕ್ತರ ನಿರ್ಧಾರವೇ ಅಂತಿಮವಾಗಿರುತ್ತದೆ.

(xv) ಯಾವುದೇ ಅನಧಿಕೃತ ಅಥವಾ ಕಾನೂನುಬಾಹಿರ ಜಾಹೀರಾತು ತಮ್ಮ ಗಮನಕ್ಕೆ ಬಂದಾಗ ತಕ್ಷಣವೇ ತೆಗೆದುಹಾಕತಕ್ಕದ್ದು, ಆದರೆ ಅನಧಿಕೃತ ಜಾಹೀರಾತನ್ನು ಪ್ರದರ್ಶಿಸಿದ ಆವರಣದ ಅಥವಾ ಭೂಮಿಯ ಮಾಲೀಕರು ಮತ್ತು ಜಾಹೀರಾತುದಾರನು ಆ ಜಾಹೀರಾತನ್ನು ತೆಗೆದುಹಾಕುವವರೆಗಿನ ಅವಧಿಗಾಗಿ ಸದರಿ ರಸ್ತೆ ಅಥವಾ ವೃತ್ತಕ್ಕಾಗಿ ಹರಾಜು/ ಟೆಂಡರ್‌ನಲ್ಲಿ ನಿಗದಿಪಡಿಸಿದ ಜಾಹೀರಾತು ಶುಲ್ಕದ ಎರಡು ಪಟ್ಟು ದರದಲ್ಲಿ ದಂಡವನ್ನು ಪಾವತಿಸಲು ಹೊಣೆಗಾರರಾಗಿರತಕ್ಕದ್ದು. ಆದ್ದರಿಂದ, ಅನಧಿಕೃತ ಅಥವಾ ಕಾನೂನುಬಾಹಿರ ಜಾಹೀರಾತುಗಳಿಗೆ ದಂಡವನ್ನು ಜಾಹೀರಾತುಗಾಗಿ ಮೂಲಸೌಕರ್ಯವನ್ನು ನಿರ್ಮಿಸಿದ ದಿನಾಂಕದಿಂದ, ಜಾಹೀರಾತಿನ ನಿಜವಾದ ಪ್ರದರ್ಶನವನ್ನು ಮಾಡಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಗಣಿಸದೆ, ಅದನ್ನು ತೆಗೆದುಹಾಕುವವರೆಗೆ ಪಾವತಿಸಲು ಜವಾಬ್ದಾರರಾಗಿರತಕ್ಕದ್ದು.

ಪರಂತು, ಅಂತಹ ಯಾವುದೇ ದರವನ್ನು ನಿಗದಿಪಡಿಸಿರದಿದ್ದಲ್ಲಿ, ಹತ್ತಿರದ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶಕ್ಕಾಗಿ ಹರಾಜು/ಟೆಂಡರ್‌ನಲ್ಲಿ ನಿಗದಿಪಡಿಸಿದ ದರದಲ್ಲಿ ಅಥವಾ ಅನುಸೂಚಿ-2ರಲ್ಲಿ ಸದರಿ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶಕ್ಕಾಗಿ ನಿಗದಿಪಡಿಸಿದ ಕನಿಷ್ಠ ದರದಲ್ಲಿ ಯಾವುದು ಹೆಚ್ಚಾಗಿರುವುದೋ ಅದು ಆಗಿರುತ್ತದೆ.

(xvi) ಅಧಿಕೃತ ಜಾಹೀರಾತುಗಳು ಅಥವಾ ಪ್ರದರ್ಶನಗಳಿಗೆ ಸಂಬಂಧಿಸಿದ ಜಾಹೀರಾತು ಶುಲ್ಕವನ್ನು, ಒಂದು ವೇಳೆ ನಿರ್ದಿಷ್ಟ ಬಿಡ್‌ನಲ್ಲಿ ನೀಡಲಾದ ಜಾಹೀರಾತು ಹಕ್ಕುಗಳು 2000 ಚದರ ಅಡಿಗಳನ್ನು ಮೀರಿದರೆ, ಈ ನಿಯಮಗಳ ಅಡಿಯಲ್ಲಿ ಜಾಹೀರಾತು ಹಕ್ಕುಗಳ ನಿಯೋಜನೆಯ ದಿನಾಂಕದಿಂದ ಆರು ತಿಂಗಳ ಪೂರ್ವಸಿದ್ಧತಾ ಅವಧಿಯನ್ನು ಪೂರ್ಣಗೊಳಿಸಿದ ನಂತರ ಪಾವತಿಸಬೇಕಾಗುತ್ತದೆ ಆದರೆ ನೀಡಲಾದ ಬಿಡ್‌ನಲ್ಲಿ ನಿಗದಿಪಡಿಸಿದ ಜಾಹೀರಾತು ಸ್ಥಳವು 2000 ಚದರ ಅಡಿಗಳನ್ನು ಮೀರಿಲ್ಲದಿದ್ದರೆ, ಮೂರು ತಿಂಗಳುಗಳು ಪೂರ್ಣಗೊಂಡ ನಂತರ ಪಾವತಿಸಬೇಕಾಗುತ್ತದೆ. ಸದರಿ ಪೂರ್ವಸಿದ್ಧತಾ ಅವಧಿಯನ್ನು ನಗರ ಪಾಲಿಕೆಯ ಆಯುಕ್ತನು ಅಂಥ ವಿಸ್ತರಣೆಗೆ ಅನುಮತಿಸಲು ಒದಗಿಬಂದಿರುವ ವಿಶೇಷ ಸಂದರ್ಭವನ್ನು ಆದೇಶದ ಮೂಲಕ ಸ್ಪಷ್ಟಪಡಿಸಿ, ಅವಧಿಯನ್ನು ಹೆಚ್ಚುವರಿ ಮೂರು ತಿಂಗಳುಗಳಿಗೆ ಮೀರಿ ಯಾವುವೇ ಸಂದರ್ಭಗಳಲ್ಲೂ ವಿಸ್ತರಿಸತಕ್ಕದ್ದಲ್ಲ. ಪರಂತು ಪೂರ್ವಸಿದ್ಧತಾ ಅವಧಿಯು ಮುಗಿಯುವ ಪೂರ್ವದಲ್ಲಿ ನಿರ್ಮಿಸಲಾದ ಮತ್ತು ವಾಣಿಜ್ಯ ಜಾಹೀರಾತಿಗೆ ಇಡಲಾದ ಯಾವುದೇ ಜಾಹೀರಾತು ಮೂಲಸೌಕರ್ಯವು, ಅನ್ವಯವಾಗುವ ಜಾಹೀರಾತು ಶುಲ್ಕವನ್ನು ಪಾವತಿಸಲು ಬದ್ಧವಾಗಿರತಕ್ಕದ್ದು ಮತ್ತು ಪೂರ್ವಸಿದ್ಧತಾ ಅವಧಿಯು ಮುಕ್ತಾಯಗೊಂಡ ನಂತರ ನಿರ್ಮಾಣ ಅಥವಾ ಜಾಹಿರಾತು ಪ್ರದರ್ಶನವನ್ನು ಪ್ರಾರಂಭಿಸಿರಲಿ ಅಥವಾ ಪ್ರಾರಂಭಿಸದೇ ಇರಲಿ, ಜಾಹೀರಾತು ಶುಲ್ಕವನ್ನು ಸಂಪೂರ್ಣವಾಗಿ ಪಾವತಿಸತಕ್ಕದ್ದು. ಸದರಿ ದಿನಾಂಕವನ್ನು ಜಾಹೀರಾತು ಶುಲ್ಕಗಳ ಸಂದಾಯದ ಉದ್ದೇಶಕ್ಕಾಗಿ ಜಾರಿ ದಿನಾಂಕವೆಂದು ಕರೆಯತಕ್ಕದ್ದು. ಜಾಹೀರಾತು ಶುಲ್ಕಗಳು ಅಥವಾ ದಂಡಗಳನ್ನು ಸಂದರ್ಭಾನುಸಾರ ಅವುಗಳು ಬಾಕಿಯಿರುವ ದಿನಾಂಕದಿಂದ ಪೂರ್ಣಗೊಂಡ ಪ್ರತಿ

ತಿಂಗಳಿಗೆ ಪಾವತಿಸತಕ್ಕದ್ದು. ಅಧಿಕೃತ ಜಾಹೀರಾತು ಬಾಕಿಗಳ ಪಾವತಿಯಲ್ಲಿನ ಯಾವುದೇ ವಿಳಂಬಿತ ಪಾವತಿಗಳಿಗೆ ಸಂಬಂಧಿಸಿದಂತೆ ಶೇಕಡಾ ಹದಿನೆಂಟರಷ್ಟು (ಶೇಕಡ ೧೮) ದರದಲ್ಲಿ ಬಡ್ಡಿ ಶುಲ್ಕವನ್ನು ವಿಧಿಸತಕ್ಕದ್ದು.

ದೃಷ್ಟಾಂತ: ಅಧಿಕೃತ ಜಾಹೀರಾತಿನ ಹಕ್ಕನ್ನು 17.5.2023ರಲ್ಲಿ ನಿಗದಿಪಡಿಸಿದರೆ, ಜಾಹೀರಾತು ಶುಲ್ಕ ಸಂದಾಯದ ಜಾರಿ ದಿನಾಂಕವು 17.11.2023 ಆಗಿರುತ್ತದೆ ಮತ್ತು ಅದರ ಮೊದಲ ತಿಂಗಳ ಪಾವತಿಯನ್ನು 17.12.2023 ಒಳಗೆ ಮತ್ತು ಎರಡನೇ ತಿಂಗಳ ಪಾವತಿಯನ್ನು 17.01.2024 ಒಳಗೆ ಮಾಡತಕ್ಕದ್ದು ಮತ್ತು ಹಾಗೆ ಮುಂದುವರೆಯತಕ್ಕದ್ದು. ದಿನಾಂಕ: 24.12.2023ರವರೆಗೆ ಯಾವುದೇ ಪಾವತಿ ಮಾಡದಿದ್ದರೆ (ಸಂದಾಯಕ್ಕಾಗಿ ನೀಡಿದ ಗಡುವನ್ನು ಮೀರಿ 07 ದಿನಗಳು ಮುಕ್ತಾಯಗೊಂಡ ನಂತರ) ಮೊದಲನೆ ತಿಂಗಳ ಸಂದಾಯಕ್ಕೆ ಶೇಕಡಾ 18ರಷ್ಟು ದರದಲ್ಲಿ ಬಡ್ಡಿಯನ್ನು ವಿಧಿಸತಕ್ಕದ್ದು ಮತ್ತು ಹಾಗೆ ಮುಂದುವರೆಯತಕ್ಕದ್ದು.

(xvii) ಪರವಾನಗಿ ಪಡೆದ ಜಾಹೀರಾತುದಾರರಿಂದ ಅಥವಾ ಜಾಹೀರಾತು ಶುಲ್ಕ ಅಥವಾ ದಂಡ ಅಥವಾ ಬಡ್ಡಿಯನ್ನು ಪಾವತಿಸಲು ಹೊಣೆಗಾರನಾಗಿರುವ ಯಾರಿಂದಲೂ ಜಾಹೀರಾತಿಗಾಗಿ ಯಾವುದೇ ಬಾಕಿ ಅಥವಾ ಪಾವತಿಸದ ಬೇಡಿಕೆಯನ್ನು, ಅದು ಬಾಕಿ ಇದ್ದರೂ ಪಾವತಿಸದೇ ಇದ್ದರೆ, ಚರಾಸ್ತಿಗಳನ್ನು ವಶಪಡಿಸಿಕೊಳ್ಳುವುದು ಅಥವಾ ಜಪ್ತಿ ಮಾಡುವುದು ಮತ್ತು ಮಾರಾಟ ಮಾಡುವುದು, ಬ್ಯಾಂಕ್ ಖಾತೆಗಳು ಅಥವಾ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಮತ್ತು ಅದನ್ನು ಪಾವತಿಸಲು ಹೊಣೆಗಾರನಾಗಿರುವ ವ್ಯಕ್ತಿಯ ಸ್ಥಿರಾಸ್ತಿಗಳ ಮಾರಾಟವನ್ನು ಒಳಗೊಂಡಂತೆ ಆಸ್ತಿ ತೆರಿಗೆಯ ಬೇಡಿಕೆ ಅಥವಾ ಬಾಕಿಗಳನ್ನು ವಸೂಲಿ ಮಾಡಲು ನಿಯಮಿಸಲಾದ ರೀತಿಯಲ್ಲಿ ಯಥೋಚಿತ ಬದಲಾವಣೆಯೊಂದಿಗೆ ವಸೂಲಿ ಮಾಡತಕ್ಕದ್ದು. ಅಂತಹ ಸುಸ್ತಿದಾರನು ಅಧಿನಿಯಮದ ಸಂಬಂಧಪಟ್ಟ ಪ್ರಕರಣಗಳ ಅಡಿಯಲ್ಲಿ ಕ್ರಿಮಿನಲ್ ಕ್ರಮಕ್ಕೆ ಗುರಿಯಾಗತಕ್ಕದ್ದು.

(xviii) ನಗರ ಪಾಲಿಕೆಯು ಸೂಕ್ತ ತಂತ್ರಾಶದ ಮೂಲಕ ಸಾಧ್ಯವಾದಷ್ಟು ತ್ವರಿತವಾಗಿ ಎಲ್ಲಾ ಜಾಹೀರಾತು ಚಟುವಟಿಕೆಗಳ ಅನುಷ್ಠಾನ ಮತ್ತು ನಿರ್ವಹಣೆ, ಪರವಾನಗಿಗಳ ನೀಡಿಕೆ ಮತ್ತು ಅನುಮೋದನೆ ಅಥವಾ ನಿರ್ಧಾರವನ್ನು ಆನ್‌ಲೈನ್‌ನಲ್ಲಿ (Online) ತರಲು ಪ್ರಯತ್ನಿಸಬೇಕು. ಒಮ್ಮೆ ಇದನ್ನು ಮಾಡಿದ ನಂತರ, ಈ ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಸಂಬಂಧಿತ ಚಟುವಟಿಕೆಗಳು ಮತ್ತು ಕ್ರಮಗಳನ್ನು ಸದರಿ ತಂತ್ರಾಂಶದಲ್ಲಿ ಮತ್ತು ಅದರ ಮೂಲಕ ಮಾಡತಕ್ಕದ್ದು.

ಟಿಪ್ಪಣಿ: (i) ನಗರ ಪಾಲಿಕೆ ಅಧಿಕಾರ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜಾಹೀರಾತು ಪ್ರದರ್ಶನಗಳಿಗಾಗಿ ನಗರ ಪಾಲಿಕೆಯು ಟೆಂಡರ್‌ಗಳನ್ನು ಆಹ್ವಾನಿಸತಕ್ಕದ್ದು ಮತ್ತು ಪ್ರಕ್ರಿಯೆಗೊಳಿಸತಕ್ಕದ್ದು.

(ii) ನಗರ ಪಾಲಿಕೆಯು ಈ ನಿಯಮಗಳ ಅನುಸಾರ ಆಯುಕ್ತರವರ ನಿರ್ಧಾರಕ್ಕೆ ಒಳಪಟ್ಟು ಪ್ರಮಾಣ ಮತ್ತು ಅಳತೆಗೆ ಅನುಗುಣವಾಗಿ ಟೆಂಡರ್‌ಗಳನ್ನು ಕರೆಯತಕ್ಕದ್ದು.

(xix.) ಸರ್ಕಾರ ಅಥವಾ ನಗರ ಪಾಲಿಕೆಯ ನಿರ್ದೇಶನದ ಮೇರೆಗೆ ಯಾವುದೇ ಪ್ರದೇಶ, ರಸ್ತೆ ವೃತ್ತಗಳಲ್ಲಿ ಬಿಡ್ ವಿಜೇತರು ತಾವು ಅಳವಡಿಸುವ ಪ್ರತಿ ವಿದ್ಯುನ್ಮಾನ ಪ್ರದರ್ಶಕದಲ್ಲಿನ ಶೇ.10% ರಷ್ಟು ಜಾಹೀರಾತು ಸಮಯವನ್ನು ಪ್ರತಿ ದಿನ ಮತ್ತು ಪ್ರತಿ ವಿದ್ಯುನ್ಮಾನವಲ್ಲದ ಪ್ರದರ್ಶಕದಲ್ಲಿ ವರ್ಷದ 20 ದಿನಗಳಂತೆ ಸಾರ್ವಜನಿಕ ಉದ್ದೇಶಕ್ಕಾಗಿ ಪ್ರಚುರಪಡಿಸುವ ಜಾಹೀರಾತುಗಳನ್ನು ಉಚಿತವಾಗಿ ಪ್ರದರ್ಶಿಸತಕ್ಕದ್ದು. ಪರಂತು, ಈ ನಿಯಮಗಳ ಅಡಿಯಲ್ಲಿ ನಗರ ಪಾಲಿಕೆ ಅಥವಾ ಸರ್ಕಾರವು ಪ್ರದರ್ಶಿಸಿದ ಜಾಹೀರಾತಿನ ಅವಧಿಗೆ ಸಂಬಂಧಿಸಿದಂತೆ ಮತ್ತು ನೈಜವಾಗಿ ಬಳಸಿದ ಜಾಹೀರಾತು ಸ್ಥಳದ ಪ್ರಮಾಣಕ್ಕೆ ಸಂಬಂಧಿಸಿದಂತೆ ಯಾವುದೇ ಜಾಹೀರಾತು ಶುಲ್ಕವನ್ನು ಸಂದಾಯ ಮಾಡಲು ಹೊಣೆಗಾರರಾಗಿರತಕ್ಕದ್ದಲ್ಲ.

(xx) ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರು ಯುಕ್ತವಾಗಿ ಪ್ರಕಟಿಸಿದ ಇತ್ತೀಚಿನ ರಾಷ್ಟ್ರೀಯ ಜನಸಂಖ್ಯಾ ಗಣತಿಯ ಅನುಸಾರ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟಿನ ಜನಸಂಖ್ಯೆಯ ಶೇಕಡವಾರು ಅನುಸಾರ ಇತರರ ಪರವಾಗಿ ಜಾಹೀರಾತುಗಳನ್ನು/ ಪ್ರದರ್ಶನಗಳನ್ನು ಮಾಡುವ ಜಾಹೀರಾತು ಹಕ್ಕುಗಳನ್ನು ನಿಯೋಜಿಸುವಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಮೀಸಲಾತಿಯನ್ನು ನಿಗದಿಪಡಿಸತಕ್ಕದ್ದು.

4. **ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರರು.-** (1) ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರನನ್ನು ಹೊರತುಪಡಿಸಿ ಯಾರೇ ವ್ಯಕ್ತಿಗೆ, ಇತರ ವ್ಯಕ್ತಿಗಳು ಅಥವಾ ಏಜೆನ್ಸಿಗಳ ಪರವಾಗಿ ಜಾಹೀರಾತುಗಳನ್ನು ಪ್ರದರ್ಶಿಸಲು ಅಥವಾ ನಗರ ಪಾಲಿಕೆಯು ಅಧಿಸೂಚಿಸಬಹುದಾದ ರಸ್ತೆಗಳು ಅಥವಾ ವೃತ್ತಗಳಲ್ಲಿ ಜಾಹೀರಾತು ಹಕ್ಕುಗಳಿಗಾಗಿ ಸಾರ್ವಜನಿಕ ಹರಾಜು/ಟೆಂಡರ್‌ನಲ್ಲಿ ಭಾಗವಹಿಸಲು ಅನುಮತಿಸತಕ್ಕದ್ದಲ್ಲ. ಈ ವ್ಯಕ್ತಿಗಳು ಅಥವಾ ಏಜೆನ್ಸಿಗಳು ಆಯುಕ್ತರು ನಿರ್ಧರಿಸಬಹುದಾದಂತೆ ಅಗತ್ಯ ಮಾಹಿತಿ, ದಸ್ತಾವೇಜುಗಳು, ಭದ್ರತೆಯನ್ನು ಒದಗಿಸುವ ಮೂಲಕ ತಾವೇ ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರರಾಗಿ ನಗರ ಪಾಲಿಕೆಯಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳತಕ್ಕದ್ದು ಮತ್ತು ಕಾಲಕಾಲಕ್ಕೆ ಆಯುಕ್ತರು ನಿರ್ಧರಿಸಬಹುದಾದ ಪರವಾನಗಿ ಶುಲ್ಕ ಅಥವಾ ನೋಂದಣಿ ಶುಲ್ಕ ಮತ್ತು ಭದ್ರತಾ ಠೇವಣಿಯನ್ನು ಪಾವತಿಸತಕ್ಕದ್ದು.

(2) ತಮ್ಮ ಪರವಾಗಿ ಜಾಹೀರಾತನ್ನು ಪ್ರದರ್ಶಿಸುವ ಕೆಲಸವನ್ನು ವಹಿಸಿಕೊಳ್ಳಲು ಬಯಸುವ ವ್ಯಕ್ತಿಗಳು ಈ ನಿಯಮಗಳಡಿಯಲ್ಲಿ ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರರನ್ನು ಹೊರತುಪಡಿಸಿ ಬೇರೆ ಯಾರಿಗೂ ಅದನ್ನು ವಹಿಸತಕ್ಕದ್ದಲ್ಲ.

(3) ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರನಿಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ರ ಕರ್ನಾಟಕ ಅಧಿನಿಯಮ, 29) ರ ಪ್ರಕಾರ ನಡೆಸಲಾದ ಇ-ಸಂಗ್ರಹಣೆ ಮುಖಾಂತರ ಮುಕ್ತ ಹರಾಜು/ಟೆಂಡರ್ ಮೂಲಕ ಆಯುಕ್ತರು ಕ್ರಮಬದ್ಧವಾಗಿ ಅಧಿಸೂಚಿಸಿದ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶವನ್ನು ನೀಡತಕ್ಕದ್ದು, ಅಲ್ಲಿ ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರನು ಜಾಹೀರಾತುಗಳನ್ನು ಪ್ರದರ್ಶಿಸಬಹುದು ಅಥವಾ ಪ್ರದರ್ಶಿಸುವಂತೆ ಮಾಡಬಹುದು ಮತ್ತು ಈ ನಿಯಮಗಳ ಪ್ರಕಾರ ನಗರ ಪಾಲಿಕೆಗೆ ಅದರ ಮೇಲೆ ಬಾಕಿ ಇರುವ ಇಂದಿನವರೆಗೆ (up to date) ಮತ್ತು ನಿಯಮಿತ ಶುಲ್ಕವನ್ನು ಪಾವತಿಸಲಾಗಿದೆಯೇ ಎಂಬುದನ್ನು ಆತ ಖಚಿತಪಡಿಸಿಕೊಳ್ಳತಕ್ಕದ್ದು.

(4) ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರನು ತಾನು ಪ್ರದರ್ಶಿಸಿದ ಜಾಹೀರಾತುಗಳ ಸರಿಯಾದ ದಾಖಲೆಯನ್ನು ಇಟ್ಟುಕೊಳ್ಳತಕ್ಕದ್ದು ಮತ್ತು ಆಯುಕ್ತರು ಅಥವಾ ವಿಶೇಷ/ಹೆಚ್ಚುವರಿ ಆಯುಕ್ತರು (ಜಾಹೀರಾತುಗಳು), ವಲಯ ಜಂಟಿ ಆಯುಕ್ತರು ಅಥವಾ ಈ ಸಂಬಂಧದಲ್ಲಿ ಅವರಲ್ಲಿ ಯಾರೊಬ್ಬರಿಂದಲೂ ಅಧಿಕಾರ ಪಡೆದ ಇತರ ಯಾರೇ ಅಧಿಕಾರಿಯು ಪರಿಶೀಲನೆಗಾಗಿ ಅಗತ್ಯಪಡಿಸಿದ್ದಾಗಲೆಲ್ಲಾ ಅವುಗಳನ್ನು ಹಾಜರುಪಡಿಸತಕ್ಕದ್ದು.

(5) ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರನನ್ನು ಹೊರತುಪಡಿಸಿ ಬೇರೆ ಯಾರಾದರೂ ಮಾಡುವ ಪಾವತಿಸಿದ ಜಾಹೀರಾತು ಪ್ರದರ್ಶನ ಅಥವಾ ಇತರರ ಪರವಾಗಿ ಪಾವತಿಸಿದ ಜಾಹೀರಾತಿನ ಯಾವುದೇ ಪ್ರದರ್ಶನವನ್ನು ಅನಧಿಕೃತವೆಂದು ಪರಿಗಣಿಸತಕ್ಕದ್ದು ಮತ್ತು ಅದನ್ನು ತಕ್ಷಣವೇ ತೆಗೆದುಹಾಕತಕ್ಕದ್ದು ಮತ್ತು 319ನೇ ಪ್ರಕರಣದ ಅಡಿಯಲ್ಲಿ ಕ್ರಿಮಿನಲ್ ಪ್ರಕರಣವನ್ನು ದಾಖಲಿಸುವುದು ಸೇರಿದಂತೆ ಅಧಿಸೂಚನೆಯ ಸಂಬಂಧಿತ ಅವಕಾಶಗಳ ಅನ್ವಯ ಮುಂದಿನ ಕ್ರಮಕ್ಕೆ ಹೊಣೆಗಾರನಾಗಿರತಕ್ಕದ್ದು.

5. **ಪರವಾನಗಿ ನೀಡಿಕೆ.**-(1) ನೋಂದಣಿಗಾಗಿ ಏಜೆನ್ಸಿಗೆ ಪರವಾನಗಿಗಾಗಿ ಸಲ್ಲಿಸುವ ಪ್ರತಿಯೊಂದುಅರ್ಜಿಯನ್ನು ಐದು ವರ್ಷಗಳ ಅವಧಿಗೆ ಐದು ಲಕ್ಷ ರೂಪಾಯಿಗಳ ನೋಂದಣಿ ಅಥವಾ ಪರವಾನಗಿ ಶುಲ್ಕವನ್ನು ಪಾವತಿಸಲು ಚಲನ್ ಜೊತೆಗೆ ಅಗತ್ಯವಾದ ಲಗತ್ತುಗಳೊಂದಿಗೆ ನಮೂನೆ-I ರಲ್ಲಿ ಆಯುಕ್ತರಿಗೆ ಸಲ್ಲಿಸತಕ್ಕದ್ದು. ನೋಂದಣಿ ಅಥವಾ ಪರವಾನಗಿ ಶುಲ್ಕವನ್ನು ಆಯುಕ್ತರು ಕಾಲಕಾಲಕ್ಕೆ ಪರಿಷ್ಕರಿಸಬಹುದು ಮತ್ತು ಅವರು ಪರವಾನಗಿ ಪಡೆದ ಜಾಹೀರಾತುದಾರರ ವಿವಿಧ ವರ್ಗಗಳನ್ನು ರಚಿಸಬಹುದು ಮತ್ತು ಅವರು ಪಾವತಿಸಬೇಕಾದ ವಿವಿಧ ಪರವಾನಗಿ ಶುಲ್ಕಗಳನ್ನು ನಿರ್ದಿಷ್ಟಪಡಿಸಬಹುದು.

(2) ಪರವಾನಗಿಯನ್ನು ನಮೂನೆ-IIರಲ್ಲಿ ನೀಡತಕ್ಕದ್ದು.

(3) ಪರವಾನಗಿ ಅವಧಿಯು ಐದು ವರ್ಷಗಳ ಅವಧಿಯದ್ದಾಗಿರತಕ್ಕದ್ದು:

ಪರಂತು, ಐದು ಲಕ್ಷ ರೂಪಾಯಿಗಳ ಪಾವತಿಯೊಂದಿಗೆ ಅದನ್ನು ಕಾಲಕಾಲಕ್ಕೆ ಇನ್ನೂ ಐದು ವರ್ಷ ಅವಧಿಗೆ ವಿಸ್ತರಿಸಬಹುದು.

(4) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಯಾವುದೇ ಒಂದು ನಗರ ಪಾಲಿಕೆಯ ಪರವಾನಗಿ ಅಥವಾ ನೋಂದಣಿಯು ಇಡೀ ಗ್ರೇಟರ್ ಬೆಂಗಳೂರು ಪ್ರದೇಶದಾದ್ಯಂತ ಸಿಂಧುವಾಗಿರತಕ್ಕದ್ದು ಮತ್ತು ಪರವಾನಗಿದಾರನು ಪ್ರತಿಯೊಂದು ನಗರ ಪಾಲಿಕೆಯಿಂದ ಪ್ರತ್ಯೇಕ ಪರವಾನಗಿ ಅಥವಾ ನೋಂದಣಿಯನ್ನು ಪಡೆಯುವ ಅಗತ್ಯವಿರುವುದಿಲ್ಲ.

(5) ಅರ್ಜಿದಾರನು ಪರವಾನಗಿ ಅಥವಾ ನೋಂದಣಿಗೆ ಸಂಬಂಧಿಸಿದಂತೆ ಆಯುಕ್ತರ ನಿರ್ಧಾರಗಳ ವಿರುದ್ಧ ಈ ನಿಯಮಗಳಡಿಯಲ್ಲಿ ರಚಿಸಲಾದ ಜಾಹೀರಾತು ನಿಯಂತ್ರಣ ಸಮಿತಿಗೆ ಮೇಲ್ಮನವಿ ಸಲ್ಲಿಸಬಹುದು.

(6) ಆಯುಕ್ತರು ಅಧಿನಿಯಮ ಮತ್ತು ಈ ನಿಯಮಗಳಡಿಯಲ್ಲಿ ನೀಡಲಾದ ಪರವಾನಗಿಗಳು ಅಥವಾ ಅನುಮತಿಗಳನ್ನು ತೋರಿಸುವ ಸಮಗ್ರ ರಿಜಿಸ್ಟರ್‌ನ್ನು ನಿರ್ವಹಿಸುವಂತೆ ಮಾಡತಕ್ಕದ್ದು. ಜಾಹೀರಾತುಗಳಿಗೆ ಪರವಾನಗಿಗಳು ಮತ್ತು ಅನುಮತಿಗಳ ನೀಡಿಕೆಯನ್ನು ಶೂನ್ಯ ಭೌತಿಕ ಸಂಪರ್ಕದ ಮೂಲಕ, ನೇರ ನವೀಕರಣದೊಂದಿಗೆ ಆನ್‌ಲೈನ್ ಏಕಗವಾಕ್ಷಿ ವ್ಯವಸ್ಥೆಯ ಮೂಲಕ ನಡೆಸತಕ್ಕದ್ದು, ಇದನ್ನು ಈ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ತೊಂಬತ್ತು ದಿನಗಳಲ್ಲಿ ಸ್ಥಾಪಿಸತಕ್ಕದ್ದು. ಆನ್‌ಲೈನ್ ಏಕಗವಾಕ್ಷಿ ವ್ಯವಸ್ಥೆಯು ನೀಡಲಾದ ಪರವಾನಗಿಗಳು ಅಥವಾ ಅನುಮತಿಗಳನ್ನು ತೋರಿಸುವ ಮೇಲೆ ತಿಳಿಸಲಾದ ರಿಜಿಸ್ಟರ್ ಅನ್ನು ಸಹ ಒಳಗೊಂಡಿರತಕ್ಕದ್ದು ಮತ್ತು ಅದನ್ನು ನಿರಂತರವಾಗಿ ಅಪಡೇಟ್ ಮಾಡತಕ್ಕದ್ದು ಮತ್ತು ಅಡಚಣೆರಹಿತ ಸಾರ್ವಜನಿಕ ವೀಕ್ಷಣೆಗೆ ಲಭ್ಯವಾಗುವಂತೆ ಮಾಡತಕ್ಕದ್ದು.

(7) ಹಿಂದಿನ ಯಾವುದೇ ನಿಯಮಗಳಡಿಯಲ್ಲಿ ಈಗಾಗಲೇ ನೋಂದಾಯಿಸಲಾದ ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರನನ್ನು ಈ ನಿಯಮಗಳಡಿಯಲ್ಲಿ ನೋಂದಾಯಿಸಲಾಗಿದೆ ಅಥವಾ ಪರವಾನಗಿ ಪಡೆಯಲಾಗಿದೆ ಎಂದು ಭಾವಿಸತಕ್ಕದ್ದು:

ಪರಂತು, ಯಾವುದೇ ಪರವಾನಗಿ ಅಥವಾ ನೋಂದಣಿಯು ಮೂರು ವರ್ಷಗಳಿಗಿಂತ ಹಳೆಯದಾಗಿದ್ದ ಸಂದರ್ಭದಲ್ಲಿ, ಅದನ್ನು ಈ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಮೂರು ತಿಂಗಳೊಳಗೆ ನವೀಕರಿಸತಕ್ಕದ್ದು, ತಪ್ಪಿದಲ್ಲಿ ಸದರಿ ಪರವಾನಗಿ ಅಥವಾ ನೋಂದಣಿಯ ಅವಧಿ ಮುಗಿದಿದೆ ಎಂದು ಭಾವಿಸತಕ್ಕದ್ದು.

ಪರಂತು, ಆಯುಕ್ತರು, ಅರ್ಜಿ ಅಥವಾ ಪರವಾನಗಿಗಳ ನೀಡಿಕೆಯು ತಂತ್ರಾಂಶದ ಮೂಲಕ ಆನ್‌ಲೈನ್ ಆಗಿರತಕ್ಕದ್ದದೆಂದು, ಆ ತರುವಾಯ ಜಾಹೀರಾತು ಪರವಾನಗಿಗಳಿಗೆ

ಅರ್ಜಿ ಸಲ್ಲಿಸುವ ಮತ್ತು ಪರವಾನಗಿ ಪಡೆಯುವ ವಿಧಾನವಾಗಿರತಕ್ಕದ್ದೆಂದು ನಿರ್ದಿಷ್ಟಪಡಿಸಬಹುದು.

(8) ಆಯುಕ್ತರು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರೊಂದಿಗೆ ಸಮಾಲೋಚಿಸಿ ಒಂದು ವರ್ಷದಲ್ಲಿ ಶೇಕಡ 5 ರಷ್ಟು ಮೀರದಂತೆ ಪರವಾನಗಿ ಅಥವಾ ನೋಂದಣಿ ಶುಲ್ಕವನ್ನು ಹೆಚ್ಚಿಸಬಹುದು. ಪರಂತು, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಎಲ್ಲಾ ನಗರ ಪಾಲಿಕೆಗಳಾದ್ಯಂತ ಅದೇ ದರವು ಇರತಕ್ಕದ್ದು.

(9) ಈ ನಿಯಮಗಳಲ್ಲಿ ಅಥವಾ ಇತರ ಯಾವುದೇ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಆಯುಕ್ತರು ಸಾರ್ವಜನಿಕ ಹಿತದೃಷ್ಟಿಯಿಂದ, ಮಹಾನಗರ ಪಾಲಿಕೆಯ ಮೂಲಸೌಕರ್ಯಗಳ ಮೇಲಿನ ಜಾಹೀರಾತು ಹಕ್ಕುಗಳನ್ನು ಒಳಗೊಂಡ ಸಾರ್ವಜನಿಕ-ಖಾಸಗಿ ಸಹಭಾಗಿತ್ವ (PPP) ಯೋಜನೆಗಳಿಗಾಗಿ ಟೆಂಡರ್‌ಗಳನ್ನು ಕರೆಯಲು ಪಾಲಿಕೆ ಮತ್ತು ವಾರ್ತಾ ಇಲಾಖೆಯ ನಡುವೆ ಪರಸ್ಪರ ಒಪ್ಪಿಗೆಯಾದ ಷರತ್ತುಗಳಿಗೆ ಒಳಪಟ್ಟು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ (DIPR) ಅಧಿಕಾರ ನೀಡಬಹುದು. ಅಂಥ ಸಂದರ್ಭಗಳಲ್ಲಿ, ಜಾಹೀರಾತು ದರಗಳು ಮತ್ತು ಕನಿಷ್ಠ ಹರಾಜು ಬೆಲೆಗಳು (upset price) ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ದರಗಳಿಗೆ ಮತ್ತು ಕಾಲಕಾಲಕ್ಕೆ ಆಗುವ ಪರಿಷ್ಕರಣೆಗಳಿಗೆ ಅನುಗುಣವಾಗಿ ನಿಗದಿಪಡಿಸತಕ್ಕದ್ದು.

6. ಪರವಾನಗಿ ನೀಡಿಕೆ ನಿರಾಕರಣೆ.-(1) ಆಯುಕ್ತರು,-

(i) ವ್ಯಕ್ತಿ ಅಥವಾ ಏಜೆನ್ಸಿ, ಅದರ ಯಾವುದೇ ನಿರ್ದೇಶಕರು, ಮಾಲೀಕರು ಅಥವಾ ಪ್ರವರ್ತಕರನ್ನು ಸರ್ಕಾರವು ಅಥವಾ ಯಾವುದೇ ನಿಗಮವು ಅಥವಾ ಸರ್ಕಾರದ ಒಡೆತನದಲ್ಲಿರುವ ಮತ್ತು/ಅಥವಾ ನಿಯಂತ್ರಣದಲ್ಲಿರುವ ಯಾವುದೇ ಏಜೆನ್ಸಿಯು ಜಾಹೀರಾತನ್ನು ಪ್ರದರ್ಶಿಸದಂತೆ ನಿರ್ಬಂಧಿಸಲಾಗಿದ್ದಲ್ಲಿ;

(ii) ವ್ಯಕ್ತಿ ಅಥವಾ ಏಜೆನ್ಸಿ, ಅದರ ನಿರ್ದೇಶಕರು, ಮಾಲೀಕರು ಅಥವಾ ಪ್ರವರ್ತಕರು ನಗರ ಪಾಲಿಕೆಗೆ ಯಾವುದೇ ಬಾಕಿಗಳನ್ನು ಪಾವತಿಸದಿದ್ದಲ್ಲಿ;

(iii) ಏಜೆನ್ಸಿಯ ಅಧಿಕೃತ ಸಹಿದಾರನು ಈ ಹಿಂದೆ ನಗರ ಪಾಲಿಕೆಗೆ ಯಾವುದೇ ಬಾಕಿ ಪಾವತಿಸಲು ಬಾಕಿಯಿರುವ ಯಾವುದೇ ಕಂಪನಿಯ ಅಧಿಕೃತ ಸಹಿದಾರರಾಗಿದ್ದಲ್ಲಿ; ಅಥವಾ

(iv) ಇದು ನಗರ ಪಾಲಿಕೆಯ ಅಥವಾ ಸರ್ಕಾರದ ಸ್ಥಿರ ಆಸ್ತಿಯನ್ನು ಅನಧಿಕೃತವಾಗಿ ಆಕ್ರಮಿಸಿಕೊಂಡಿದ್ದಲ್ಲಿ – ಅಂತಹ ಏಜೆನ್ಸಿಗೆ ಪರವಾನಗಿ ನೀಡಲು ನಿರಾಕರಿಸತಕ್ಕದ್ದು.

7. ಅಧಿಸೂಚಿತ ರಸ್ತೆಗಳು, ವೃತ್ತಗಳು ಮತ್ತು ಪ್ರದೇಶಗಳಿಗೆ ಜಾಹೀರಾತು ಹಕ್ಕುಗಳನ್ನು ನೀಡಲು ಸಾರ್ವಜನಿಕ ಹರಾಜು ಅಥವಾ ಟೆಂಡರ್ ಕರೆಯುವುದು;- (1) ಜಾಹೀರಾತುಗಳ ಪ್ರಭಾರ ಹೊಂದಿರುವ ವಿಶೇಷ ಆಯುಕ್ತರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ದ ಕರ್ನಾಟಕ ಅಧಿನಿಯಮ,

29) ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಜಾಹೀರಾತು ಹಕ್ಕುಗಳನ್ನು ಮಂಜೂರು ಮಾಡಲು, ಆಯುಕ್ತರು ಅಧಿಸೂಚಿಸಿದಂತೆ ನಗರ ಪಾಲಿಕೆಯ ವ್ಯಾಪ್ತಿಯೊಳಗಿನ ರಸ್ತೆಗಳು, ವೃತ್ತಗಳು ಮತ್ತು ಇತರ ಪ್ರದೇಶಗಳು ಅಥವಾ ಸ್ಥಳಗಳನ್ನು ಸಾರ್ವಜನಿಕ ಹರಾಜಿಗೆ ಇಡತಕ್ಕದ್ದು ಅಥವಾ ಟೆಂಡರ್ ಕರೆಯುವಂತೆ ಮಾಡತಕ್ಕದ್ದು.

(2) ನಗರ ಪಾಲಿಕೆಯಿಂದ ಸಿಂಧುವಾದ ಪರವಾನಗಿ ಅಥವಾ ನೋಂದಣಿಯನ್ನು ಹೊಂದಿರುವಂಥ ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರನು ಮಾತ್ರ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಾಗಿ ಲಭ್ಯವಿರುವ ಕಾರ್ಯವಿಧಾನದ ಅನುಸಾರ ಹರಾಜು/ ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾನೆ. ಪರಂತು, ಆರ್ಥಿಕ ಇಲಾಖೆಯು ಈ ನಿಟ್ಟಿನಲ್ಲಿ ಕಾಲಕಾಲಕ್ಕೆ ಹೊರಡಿಸಿರುವ ಪ್ರಮಾಣಿತ ಟೆಂಡರ್ ಮಾರ್ಗಸೂಚಿಗಳ ಅನುಸಾರ ಪಾಲಿಕೆಯು ಅಂತಹ ವಹಿವಾಟು ಮತ್ತು ಇತರ ಅವಶ್ಯಕತೆಗಳನ್ನು ನಿಯಮಿಸತಕ್ಕದ್ದು.

(3) ಯಾರೇ ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರನು, ನಗರ ಪಾಲಿಕೆಗೆ ಜಾಹೀರಾತು ಅಥವಾ ಭೂ ಬಾಡಿಗೆ ಅಥವಾ ಯಾವುದೇ ಇತರ ಜಾಹೀರಾತು ಸಂಬಂಧಿತ ಬಾಕಿಗಳನ್ನು ಪಾವತಿಸದೇ ಇದ್ದರೆ, ಹರಾಜು/ಟೆಂಡರ್ ನಲ್ಲಿ ಭಾಗವಹಿಸಲು ಅರ್ಹರಾಗಿರತಕ್ಕದ್ದಲ್ಲ. ಈ ಸಂಬಂಧದಲ್ಲಿ ಬಿಡ್‌ದಾರನು ಅಥವಾ ಪರವಾನಗಿ ಹೊಂದಿರುವವನು ಸಂಬಂಧಪಟ್ಟ, ಸರ್ಕಾರಿ ಇಲಾಖೆ ಅಥವಾ ನಗರ ಪಾಲಿಕೆಯ ಜಾಹೀರಾತು ಅಥವಾ ಇತರ ವಿಭಾಗದಿಂದ ಏಜೆನ್ಸಿ/ವ್ಯಕ್ತಿ/ಸಂಸ್ಥೆ/ಮಾಲೀಕ ಜಾಹೀರಾತು ಅಥವಾ ಭೂ ಬಾಡಿಗೆ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಬಾಕಿ ಇರುವುದಿಲ್ಲವೆಂದು ತೋರಿಸುವ "ನಿರಾಕ್ಷೇಪಣಾ ಪ್ರಮಾಣ ಪತ್ರ" ವನ್ನು ಅಪಲೋಡ್ ಮಾಡತಕ್ಕದ್ದು.

(4) ಅಂತಹ ಪ್ರತಿಯೊಂದು ರಸ್ತೆ ಅಥವಾ ವೃತ್ತಕ್ಕೆ ಅಥವಾ ಹರಾಜು/ಟೆಂಡರ್‌ಗೆ ಇಡಲಾದ ಪ್ರದೇಶಕ್ಕೆ ಜಾಹೀರಾತಿಗೆ ಕನಿಷ್ಠ ಬೆಲೆ ಎಂದು ಕರೆಯಲಾಗುವ ಒಂದು ನಿಗದಿತ ಕನಿಷ್ಠ ಬೆಲೆ ಇರತಕ್ಕದ್ದು. ಸದರಿ ರಸ್ತೆ ಅಥವಾ ವೃತ್ತ ಅಥವಾ ಸಂದರ್ಭಾನುಸಾರ ಪ್ರದೇಶಕ್ಕಾಗಿ ಸದರಿ ಬೆಲೆಗಿಂತ ಕಡಿಮೆ ಬೆಲೆಯ ಯಾವುದೇ ಹರಾಜು/ಟೆಂಡರ್ ಬಿಡ್ ಅನ್ನು ಸ್ವೀಕರಿಸತಕ್ಕದ್ದಲ್ಲ.

(5) ಸದರಿ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶದ ಜಾಹೀರಾತಿಗಾಗಿ ಪ್ರತಿ ಚದರ ಮೀಟರ್‌ಗೆ ಅಥವಾ ಪ್ರತಿ ಚದರ ಅಡಿಗೆ ದರವನ್ನು, ಅದರಲ್ಲಿ ಜಾಹೀರಾತಿಗಾಗಿ ಲಭ್ಯವಿರುವ ಒಟ್ಟು ಸಂಭಾವ್ಯ ಪ್ರದೇಶದೊಂದಿಗೆ ಗುಣಿಸುವ ಮೂಲಕ ಆ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶದ ಕನಿಷ್ಠ ಬೆಲೆಯನ್ನು ಲೆಕ್ಕ ಹಾಕತಕ್ಕದ್ದು. ಪ್ರತಿ ಚದರ ಮೀಟರ್ ಅಥವಾ ಅಡಿ ದರಕ್ಕೆ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶವಾರು **ಅನುಸೂಚಿ-II**ರಲ್ಲಿ ನೀಡಲಾಗಿರುವಂತೆ

ಇರತಕ್ಕದ್ದು. ನಿಯಮ 3ರಲ್ಲಿನ ಕೋಷ್ಟಕವು ರಸ್ತೆಯ ಅಥವಾ ವೃತ್ತ ಅಥವಾ ಪ್ರದೇಶದ ನಿರ್ದಿಷ್ಟ ಉದ್ದದ ಸಂಭಾವ್ಯತೆಯನ್ನು ತಿಳಿಸುತ್ತದೆ.

ದೃಷ್ಟಾಂತ: 83 ಅಡಿ ಅಗಲ ಅಂದರೆ 24 ಮೀಟರ್‌ಗಿಂತ ಹೆಚ್ಚಾಗಿರುವ ಮತ್ತು 3 ಕಿ.ಮೀ ಉದ್ದದ ರಸ್ತೆಯು ಅನುಸೂಚಿ-2ರ ಪ್ರಕಾರ ಪ್ರತಿ ಚದರ ಅಡಿಗೆ ತಿಂಗಳಿಗೆ ರೂ.50 ರೂಪಾಯಿಗಳ ದರವನ್ನು ಹೊಂದಿರುತ್ತದೆ. ನಂತರ ನಿಯಮ 3ರ ಖಂಡ (iii) ಯಲ್ಲಿರುವ ಕೋಷ್ಟಕದ ಪ್ರಕಾರ, ಈ 83 ಅಡಿ ರಸ್ತೆಗೆ, 200 ಮೀಟರ್ ಉದ್ದಕ್ಕೆ ಗರಿಷ್ಠ 1000 ಚದರ ಅಡಿ ಪಾವತಿಸಿದ ಜಾಹೀರಾತುಗಳನ್ನು ಅನುಮತಿಸಲಾಗಿದೆ. ಆದ್ದರಿಂದ, 3ಕಿ.ಮೀ. ಉದ್ದದ ರಸ್ತೆಗೆ ಇದು 3000/200 x 1000 = 15000 ಚದರ ಅಡಿ ಅನುಮತಿಸಲಾದ ಪಾವತಿಸಿದ ಜಾಹೀರಾತು ಆಗಿರುತ್ತದೆ. ಸದರಿ ರಸ್ತೆಗೆ ತಿಂಗಳಿಗೆ ಕನಿಷ್ಠ ಹರಾಜು ಬೆಲೆ ರೂ. 50 x 15000 = 7.50 ಲಕ್ಷ ಆಗಿರುತ್ತದೆ.

(6) ಒಬ್ಬ ಬಿಡ್‌ದಾರನು ತಾನು ಬಯಸಿದಷ್ಟು ರಸ್ತೆ ವಿಸ್ತರಣೆಗಳು ಅಥವಾ ವೃತ್ತಗಳು ಅಥವಾ ಪ್ರದೇಶಗಳಿಗೆ ಬಿಡ್ ಮಾಡಬಹುದು. ಸಬ್-ಲೆಟಿಂಗ್ ಅನ್ನು ಅನುಮತಿಸಲಾಗುವುದಿಲ್ಲ.

(7) ಆಯುಕ್ತರು, ಅಧಿಸೂಚಿಸಬಹುದಾದಂತೆ ಪ್ರತಿಯೊಂದು ಪ್ರತ್ಯೇಕ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶಕ್ಕೆ ಅಥವಾ ಸೂಕ್ತವಾದ ಸ್ಥಳಗಳಿಗೆ ಹರಾಜು/ಟೆಂಡರ್ ಮಾಡತಕ್ಕದ್ದು ಮತ್ತು ತಿಂಗಳಿಗೆ ಅತೀ ಹೆಚ್ಚು ಜಾಹೀರಾತು ಶುಲ್ಕ ದರವನ್ನು ಬಿಡ್ ಮಾಡುವ ಬಿಡ್‌ದಾರನು ಹರಾಜು ವಿಜೇತನಾಗಿರತಕ್ಕದ್ದು.

(8) ಹರಾಜು/ಟೆಂಡರ್ ವಿಜೇತರು, ಆರು ತಿಂಗಳುಗಳ ವಿಜೇತ ಮಾಸಿಕ ಪಾವತಿ ಜಾಹೀರಾತು ಶುಲ್ಕದ ಮೊತ್ತಕ್ಕೆ ಸಮನಾದ ಮೊತ್ತವನ್ನು ಸಂಬಂಧಪಟ್ಟ ನಗರ ಪಾಲಿಕೆಗೆ ಕಾರ್ಯಕ್ಷಮತಾ ಭದ್ರತೆಯಾಗಿ ಅನುಸೂಚಿತ ವಾಣಿಜ್ಯ ಬ್ಯಾಂಕಿನಿಂದ ಕಾರ್ಯಕ್ಷಮತಾ ಬ್ಯಾಂಕ್ ಖಾತರಿಯನ್ನು (PBG) ಅಥವಾ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ (IRDA) ಯುಕ್ತವಾಗಿ ಪರವಾನಗಿ ಪಡೆದ ಸಾಮಾನ್ಯ ವಿಮಾ ಕಂಪನಿಯ ಜಾಮೀನು ಬಂಧಪತ್ರವನ್ನು (ಶ್ಯೂರಿಟಿ ಬಾಂಡ್) ನೀಡತಕ್ಕದ್ದು.

(9) ಆಶಯ ಪತ್ರವನ್ನು ನೀಡಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಮೇಲೆ ಗೊತ್ತುಪಡಿಸಿದ ಕಾರ್ಯಕ್ಷಮತಾ ಬ್ಯಾಂಕ್ ಖಾತರಿ (PBG) ಅಥವಾ ಶ್ಯೂರಿಟಿಯನ್ನು ನೀಡತಕ್ಕದ್ದು, ನೀಡುವಲ್ಲಿ ವಿಫಲವಾದರೆ ಆ ವೈಫಲ್ಯಕ್ಕಾಗಿ ಬಿಡ್ ತಿರಸ್ಕೃತವಾಗತಕ್ಕದ್ದು ಮತ್ತು ಬಿಡ್ಡುದಾರನನ್ನು ಡಿಫಾಲ್ಟರ್ ಎಂದು ಪರಿಗಣಿಸತಕ್ಕದ್ದು ಮತ್ತು ವೈಫಲ್ಯಕ್ಕಾಗಿ ಸಂಬಂಧಪಟ್ಟ ನಗರ ಪಾಲಿಕೆಗೆ ರಸ್ತೆ ಅಥವಾ ವೃತ್ತದಲ್ಲಿ ಯಾವುದೇ ಹೊರೆಯಾಗದಂತೆ ಇಎಂಡಿ ಯನ್ನು ಸ್ವಯಂಚಾಲಿತವಾಗಿ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು. ಅಂಥ ಡಿಫಾಲ್ಟರ್‌ಬಿಡ್ಡುದಾರನನ್ನು ಅವನ ಠೇವಣಿ/ ಇಎಂಡಿಯ ಮುಟ್ಟುಗೋಲು ಹಾಕಿಕೊಂಡ

ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಬಿಡ್ಡಿಂಗ್ ಮಾಡುವುದನ್ನು ನಿರ್ಬಂಧಿಸತಕ್ಕದ್ದು.

ಪರಂತು, ನಿಗದಿತ ಸಮಯದ ಮಿತಿಯೊಳಗೆ ಬಿಡ್ ವಿಜೇತನಾದ ನಂತರ ಪಿಬಿಜಿ ಅಥವಾಶ್ಯೂರಿಟಿಯನ್ನು ನೀಡುವಲ್ಲಿ ವಿಫಲರಾದಂಥ ಯಾರೇ ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರರ ಪರವಾನಗಿಯನ್ನು ಅಮಾನತ್ತಿನಲ್ಲಿಡತಕ್ಕದ್ದು ಮತ್ತು ಅಮಾನತುಗೊಳಿಸಿದ ಮೂವತ್ತು ದಿನಗಳೊಳಗೆ ಅವರು ಕಾರಣವನ್ನು ನೀಡಲು ವಿಫಲರಾದ ಸಂದರ್ಭದಲ್ಲಿ, ಪರವಾನಗಿಯನ್ನು ರದ್ದುಗೊಳಿಸತಕ್ಕದ್ದು ಮತ್ತು ಪರವಾನಗಿ ಪಡೆದ ಜಾಹೀರಾತುದಾರನನ್ನು ಮೂರು ವರ್ಷಗಳ ಅವಧಿಗೆ ಪರವಾನಗಿ ಪಡೆಯುವುದರಿಂದ ನಿಷೇಧಿಸತಕ್ಕದ್ದು.

(10) ಹರಾಜು/ ಟೆಂಡರ್‌ಗಾಗಿನ ಜಾಹೀರಾತು, ಹರಾಜು/ ಟೆಂಡರ್ ಪ್ರಕಾರ (ಆನ್‌ಲೈನ್ ಅಥವಾ ಭೌತಿಕ), ಸ್ಥಳ (ಅನ್ವಯವಾಗಿದ್ದರೆ), ಅರ್ಜಿ ಶುಲ್ಕ, ರಸ್ತೆ ಅಥವಾ ವೃತ್ತದ ವಿವರಗಳು ಅಥವಾ ಜಾಹೀರಾತು ಹಕ್ಕುಗಳಿಗಾಗಿ ಹರಾಜು/ ಟೆಂಡರ್‌ಗೆ ಇಡಲಾಗುವ ಪ್ರದೇಶದ ವಿವರಗಳು ಮತ್ತು ಕನಿಷ್ಠ ಹರಾಜು ಬೆಲೆ, ಹರಾಜು/ಟೆಂಡರ್ ನೋಡಲ್ ಅಧಿಕಾರಿಯ ಸಂಪರ್ಕ ವಿವರಗಳು ಮತ್ತು ಹರಾಜು/ಟೆಂಡರ್‌ಗಾಗಿ ಜಾಹೀರಾತನ್ನು ಹರಾಜು/ಟೆಂಡರ್ ದಿನಾಂಕದಿಂದ ಕನಿಷ್ಠ ಹದಿನೈದು ದಿನಗಳ ಮುಂಚಿತವಾಗಿ, ಬೆಂಗಳೂರು ಮತ್ತು ಕರ್ನಾಟಕದಲ್ಲಿ ವ್ಯಾಪಕ ಪ್ರಸಾರವಿರುವ ಕನಿಷ್ಠ ಒಂದು ಇಂಗ್ಲಿಷ್ ಮತ್ತು ಒಂದು ಕನ್ನಡ ಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು. ಅದರ ಪ್ರತಿಗಳನ್ನು ನಗರ ಪಾಲಿಕೆಯು ಪ್ರಧಾನ ಕಚೇರಿ, ಎಲ್ಲಾ ವಲಯ ಕಚೇರಿಗಳು ಮತ್ತು ಪ್ರಾದೇಶಿಕ ಮತ್ತು ಸಹಾಯಕ ಪ್ರಾದೇಶಿಕ ಅಧಿಕಾರಿಗಳ ಎಲ್ಲಾ ಕಚೇರಿಗಳಲ್ಲಿ ತಮ್ಮ ಕಚೇರಿ ಸೂಚನಾ ಫಲಕಗಳಲ್ಲಿ ಪ್ರದರ್ಶಿಸಬೇಕು. ಈ ಜಾಹೀರಾತನ್ನು ನಗರ ಪಾಲಿಕೆಯ ಜಾಲತಾಣದಲ್ಲೂ ಸಹ ಪ್ರಕಟಿಸತಕ್ಕದ್ದು. ಹರಾಜು/ಟೆಂಡರ್ ಸರ್ಕಾರದ ಇ-ಸಂಗ್ರಹಣೆ ಪೋರ್ಟಲ್‌ನಲ್ಲಿರತಕ್ಕದ್ದು.

(11) ಆಶಯ ಪತ್ರದ ಮುಖಾಂತರ ಹಾಗೂ ಈ ಸಂಬಂಧ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ವ್ಯವಸ್ಥೆಯ ಅನುಸಾರವೂ ಸಹ ಅರ್ಜಿದಾರರ ಅರ್ಜಿಯ ಸಂಖ್ಯೆ ಮತ್ತು ಹೆಸರು ಹಾಗೂ ಇತರ ವಿವರಗಳಿಗೆ ಸಂಬಂಧಿಸಿದಂತೆ ಅಂತಿಮ ಹರಾಜು/ಟೆಂಡರ್ ವಿಜೇತರನ್ನು ಅಧಿಸೂಚಿಸತಕ್ಕದ್ದು.

(12) ಜಾಹೀರಾತುಗಳ ಪ್ರಭಾರ ಹೊಂದಿರುವ ವಿಶೇಷ ಆಯುಕ್ತರು, ಪ್ರತಿಯೊಂದು ರಸ್ತೆಗೆ ಅಥವಾ ವೃತ್ತಕ್ಕೆ ಅಥವಾ ಸಂದರ್ಭಾನುಸಾರ, ಪ್ರದೇಶಕ್ಕೆ ಸಂಬಂಧಿಸಿದ ಹರಾಜು/ಟೆಂಡರ್ ವಿಜೇತರ ಹೆಸರು ಮತ್ತು ಎಲ್ಲಾ ಸಂಬಂಧಪಟ್ಟ ವಿವರಗಳೊಂದಿಗೆ ಹರಾಜು/ಟೆಂಡರ್ ಬಗ್ಗೆ ವಿವರವಾದ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅನುಮೋದನೆಗಾಗಿ ಆಯುಕ್ತರಿಗೆ ಸಲ್ಲಿಸತಕ್ಕದ್ದು ಮತ್ತು ಸದರಿ ಅನುಮೋದನೆಯ ನಂತರ

ಜಾಹೀರಾತುಗಳ ಪ್ರಭಾರ ಹೊಂದಿರುವ ವಿಶೇಷ ಆಯುಕ್ತರು ಹರಾಜು/ಟೆಂಡರ್ ವಿಜೇತರೊಂದಿಗೆ ಒಪ್ಪಂದ ಮಾಡಿಕೊಳ್ಳತಕ್ಕದ್ದು.

(13) ವಿಜೇತ ಬಿಡ್ ಮೊತ್ತದ ಪ್ರಕಾರ ಪ್ರತಿ ತಿಂಗಳು ಜಾಹೀರಾತು ಶುಲ್ಕವನ್ನು ಪಾವತಿಸತಕ್ಕದ್ದು ಮತ್ತು ಅದರಲ್ಲಿ ಯಾವುದೇ ಡಿಫಾಲ್ಟ್ ಅನ್ನು ಈ ನಿಯಮಗಳ ಉಪಬಂಧಗಳನುಸಾರವಾಗಿ ವ್ಯವಹರಿಸತಕ್ಕದ್ದು.

8. ಸಾರ್ವಜನಿಕ ಮೂಲಸೌಕರ್ಯ, ಪಾರಂಪರಿಕ ಜಾಹೀರಾತುಗಳು ಮತ್ತು ಅಸ್ತಿತ್ವದಲ್ಲಿರುವ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ಮತ್ತು ಇತರ ಒಪ್ಪಂದಗಳು ಅಥವಾ ಅನುಮತಿಗಳ ಬಗ್ಗೆ ಜಾಹೀರಾತು.- (1) ರಸ್ತೆ ಅಥವಾ ಪ್ರದೇಶ ಅಥವಾ ವೃತ್ತಕ್ಕೆ ಸಂಬಂಧಿಸಿದಂತೆ ನಿಯಮ 7 ಅಥವಾ ಇತರೆ ನಿಯಮಗಳ ಅನುಸಾರ ಜಾಹೀರಾತು ಹಕ್ಕುಗಳ ನಿಯೋಜನೆ ಏನೇ ಇದ್ದರೂ, ಸಾರ್ವಜನಿಕ ಮೂಲಸೌಕರ್ಯದ ಬಗ್ಗೆ ಜಾಹೀರಾತನ್ನು ಪ್ರದರ್ಶಿಸುವ ಹಕ್ಕನ್ನು ಸ್ವತಂತ್ರವಾಗಿ, ಪ್ರತ್ಯೇಕ ಸಾರ್ವಜನಿಕ ಹರಾಜು/ಟೆಂಡರ್ ರೂಪದಲ್ಲಿ ಅಥವಾ ಬಿಒಒಟಿ(boot)/ ಬಿಒಟಿ (bot) ಸೇರಿದಂತೆ ಅಥವಾ ಅದರಲ್ಲಿರುವ ಇತರ ವಿಧಾನಗಳನ್ನು ಒಳಗೊಂಡಂತೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ, ಕರ್ನಾಟಕ ಸಾರ್ವಜನಿಕ ಖರೀದಿ ಪಾರದರ್ಶಕ ಅಧಿನಿಯಮ, 1999 (2000ರ ಕರ್ನಾಟಕ ಅಧಿನಿಯಮ 29) ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಯುಕ್ತವಾಗಿ ಪಾಲಿಸಿ ನಿಯೋಜಿಸಬಹುದು.

(2) ಸಾರ್ವಜನಿಕ ಮೂಲಸೌಕರ್ಯಕ್ಕಾಗಿ ಈ ನಿಯಮದ ಅಡಿಯಲ್ಲಿ ಅನುಮತಿಸಲಾದ ಜಾಹೀರಾತು ಸ್ಥಳವನ್ನು, ರಸ್ತೆ ವಿಸ್ತರಣೆ ಅಥವಾ ವೃತ್ತ ಅಥವಾ ಅಂತಹ ಸಾರ್ವಜನಿಕ ಮೂಲಸೌಕರ್ಯ ಇರುವ ಅಥವಾ ಬರಬಹುದಾದ ಪ್ರದೇಶದ ನಿಯಮ 7ರ ಅಡಿಯ ಬಿಡ್ ವಿಜೇತರಿಗೆ ಜಾಹೀರಾತುಗಳನ್ನು ಪ್ರದರ್ಶಿಸಲು ಅನುಮತಿಸಲಾದ ಪ್ರದೇಶದ ಮೇಲಿನ ಗರಿಷ್ಠ ಮಿತಿಯನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ಪರಿಗಣನೆಗೆ ತಗೆದುಕೊಳ್ಳತಕ್ಕದ್ದಲ್ಲ.

(3) ಇದರಲ್ಲಿ ಇನ್ನೂ ಮುಂದೆ, ಜಾಹೀರಾತು ಹಕ್ಕುಗಳ ಬದಲಾಗಿ ನೂತನ ಸಾರ್ವಜನಿಕ ಮೂಲಸೌಕರ್ಯವನ್ನು ಸೃಜಿಸುವುದಕ್ಕಾಗಿ ಹರಾಜು/ ಟೆಂಡರ್ ಗಾಗಿ, ಜಾಹೀರಾತು ಶುಲ್ಕವನ್ನು ಸದರಿ ರಸ್ತೆ ಅಥವಾ ವೃತ್ತಕ್ಕೆ ಸಂಬಂಧಿಸಿದಂತೆ ಅನುಸೂಚಿ-2ರಲ್ಲಿ ನಿಗದಿಪಡಿಸಿದ ಕನಿಷ್ಠ ಜಾಹೀರಾತು ಶುಲ್ಕ ಅಥವಾ ದರಕ್ಕಿಂತ ಕಡಿಮೆಯಲ್ಲದ ದರದಲ್ಲಿ ಪಾವತಿಸತಕ್ಕದ್ದು.

ಪರಂತು, ಸಾರ್ವಜನಿಕ ಮೂಲಸೌಕರ್ಯ ಸೃಜನೆಗಾಗಿ ನೂತನ ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP) ಯೋಜನೆಯ ಸಂದರ್ಭದಲ್ಲಿ ಬಿಡ್ಡಿಂಗ್ ಮಾನದಂಡವು ಜಾಹೀರಾತು ಶುಲ್ಕವೇ ಆಗಿದ್ದರೆ, ಆಗ ಬಿಡ್ ವಿಜೇತ ಜಾಹೀರಾತು ಶುಲ್ಕದ ಮೊತ್ತವನ್ನು ಕರ್ನಾಟಕ

ಸಾರ್ವಜನಿಕ ಖರೀದಿ ಪಾರದರ್ಶಕತೆ ಅಧಿನಿಯಮ, 1999 (2000ರ ಕರ್ನಾಟಕ ಅಧಿನಿಯಮ, 29)ರ ಅನುಸರಣೆಯ ಕಾರ್ಯವಿಧಾನದ ಮೂಲಕ ಕಂಡುಕೊಳ್ಳತಕ್ಕದ್ದು, ಇದು ಅನುಸೂಚಿ-2ರ ಅಡಿಯಲ್ಲಿ ನಿಗದಿಪಡಿಸಲಾದ ಸದರಿ ರಸ್ತೆ ಅಥವಾ ವೃತ್ತಕ್ಕೆ ಕನಿಷ್ಠ ಜಾಹೀರಾತು ಶುಲ್ಕಕ್ಕಿಂತ ಕಡಿಮೆಯಿರತಕ್ಕದ್ದಲ್ಲ.

(4) ಈ ನಿಯಮಗಳನ್ನು ಹೊರಡಿಸುವ ಮೊದಲು ನಗರ ಪಾಲಿಕೆ ಅಥವಾ ಬಿಬಿಎಂಪಿಯ ಸೂಕ್ತ ಅನುಮೋದನೆಯೊಂದಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP) ಯೋಜನೆಗಳು ಸೇರಿದಂತೆ ವ್ಯಕ್ತಿಗಳು ಅಥವಾ ಏಜೆನ್ಸಿಗಳಿಗೆ ಈಗಾಗಲೇ ನಿಯೋಜಿಸಲಾಗಿರುವ ಸಾರ್ವಜನಿಕ ಜಾಗಗಳ/ಸ್ಥಳಗಳ ಮೂಲಸೌಕರ್ಯದ ಮೇಲೆ ಜಾಹೀರಾತು ನೀಡುವ ಈಗಾಗಲೇ ಇರುವ ಹಕ್ಕನ್ನು ಈ ಮೂಲಕ ಉಳಿಸಲಾಗಿದೆ.

ಇನ್ನು ಮುಂದೆ, ಒಪ್ಪಂದದಲ್ಲಿಯೇ ಜಾಹೀರಾತು ಶುಲ್ಕವನ್ನು ಪಾವತಿಸುವುದರಿಂದ ನಿರ್ದಿಷ್ಟವಾಗಿ ವಿನಾಯಿತಿ ನೀಡದ ಹೊರತು ಅಥವಾ ಒಪ್ಪಂದದಲ್ಲಿಯೇ ನಿರ್ದಿಷ್ಟವಾಗಿ ವಿಭಿನ್ನವಾದ ಜಾಹೀರಾತು ದರವನ್ನು ನಿಗದಿಪಡಿಸದ ಹೊರತು; ಸದರಿ ವ್ಯಕ್ತಿ ಅಥವಾ ಏಜೆನ್ಸಿಯು ಅನುಸೂಚಿ-2 ರಲ್ಲಿನ ಕನಿಷ್ಠ ಜಾಹೀರಾತು ಶುಲ್ಕಕ್ಕೆ ಸಮಾನವಾದ ದರದಲ್ಲಿ ಸಂಬಂಧಪಟ್ಟ ನಗರ ಪಾಲಿಕೆಗೆ ಜಾಹೀರಾತು ಶುಲ್ಕವನ್ನು ಪಾವತಿಸಲು ಹೊಣೆಗಾರನಾಗಿರತಕ್ಕದ್ದು. ಇದಕ್ಕೆ ಸಂಬಂಧಿಸಿದಂತೆ, ಈ ನಿಯಮಗಳ ಘೋಷಣೆಗೆ ಮೊದಲು ಯಾವುದೇ ಅವಧಿಗೆ ಪಾವತಿಸಬೇಕಾದ ಜಾಹೀರಾತು ದರಗಳು ಸಂಬಂಧಿತ ಉಪವಿಧಿಗಳು ಅಥವಾ ಸಂಬಂಧಿತ ಸಮಯದಲ್ಲಿ ಅನ್ವಯವಾಗುವ ನಿಯಮಗಳಲ್ಲಿ ಮತ್ತು ಅನ್ವಯವಾಗಬಹುದಾದ ನಿಯಮಗಳಲ್ಲಿ ನಿಗದಿಪಡಿಸಿದಂತೆ ಇರತಕ್ಕದ್ದು ಎಂದು ಸ್ಪಷ್ಟಪಡಿಸಲಾಗಿದೆ.

(5) ಜಾಹೀರಾತು ಹಕ್ಕುಗಳೊಂದಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಅಥವಾ ಸಾರ್ವಜನಿಕ ಮೂಲಸೌಕರ್ಯ ಟೆಂಡರ್‌ಗೆ ಬಿಡ್‌ನ ನಿಯೋಜನೆಗಾಗಿ ಅಳವಡಿಸಿಕೊಳ್ಳಬಹುದಾದ ರಿಯಾಯಿತಿ ಅವಧಿಯನ್ನು ಅಥವಾ ಯಾವುದೇ ಇತರ ಪಾರದರ್ಶಕ ಮಾನದಂಡಗಳನ್ನು ನಿರ್ಧರಿಸುವಲ್ಲಿ, ನಿರೀಕ್ಷಿತ ರಾಜಸ್ವ ಆದಾಯಗಳು, ಮೂಲಸೌಕರ್ಯ ವೆಚ್ಚ, ನಿರ್ವಹಣೆ ಮತ್ತು ರಿಯಾಯಿತಿಯ ಅವಧಿ ಮತ್ತು ರಿಯಾಯಿತಿಗಾಗಿ ಬಿಡ್‌ದಾರನು ಸಲ್ಲಿಸುವ ಮೊತ್ತ ಯಾವುದಾದರೂ ಇದ್ದರೆ ಅದನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು. ಕೆಟಿಪಿಪಿ ಅಧಿನಿಯಮದ ದೂರು ಮೌಲ್ಯಮಾಪನದಲ್ಲಿ ಯಾವುದೇ ಸಾರ್ವಜನಿಕ ಮೂಲಸೌಕರ್ಯದ ಮೇಲೆ ಅಥವಾ ಜಾಹೀರಾತು ಹಕ್ಕಿನ ಒಪ್ಪಂದ ಆಧಾರಿತ ನಿಯೋಜನೆಗಾಗಿ ಬಿಡ್‌ದಾರರಿಗೆ ಬರುವ ನಿರೀಕ್ಷಿತ ಆಂತರಿಕ ಆದಾಯ ದರ ಮತ್ತು ನಿವ್ವಳ ಪ್ರಸ್ತುತ ಮೌಲ್ಯವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಯೋಜನೆಯ ತಾಂತ್ರಿಕ ಮೌಲ್ಯಮಾಪನದ ಭಾಗವಾಗಿ ಮೌಲ್ಯಮಾಪನ ಮಾಡತಕ್ಕದ್ದು.

(6) ವಾಣಿಜ್ಯ ಪ್ರತಿಫಲಗಳ ಮೇಲೆ ಪಾವತಿ ಜಾಹೀರಾತನ್ನು ಪ್ರದರ್ಶಿಸಲು ಈ ಕೆಳಕಂಡ ಪ್ರವರ್ಗಗಳ ಸಾರ್ವಜನಿಕ ಮೂಲಸೌಕರ್ಯಗಳನ್ನು ಬಳಸಬಹುದು, ಎಂದರೆ:-

(i) ಮೆಟ್ರೋ ನಿಲ್ದಾಣಗಳು ಮತ್ತು ಡಿಪೋಗಳ ನಿಲ್ದಾಣಗಳು, ರಸ್ತೆಗಳು ಮತ್ತು ಹೊರಭಾಗಗಳಂಥ ಮೆಟ್ರೋ ಮೂಲಸೌಕರ್ಯ;

(ii) ಪ್ರಯಾಣ ಮತ್ತು ಸಾರಿಗೆ ನಿರ್ವಹಣಾ ಕೇಂದ್ರಗಳು;

(iii) ಬಸ್ ತಂಗುದಾಣ;

(iv) ಪಾದಚಾರಿ ಮೇಲಸೇತುವೆಗಳು ಅಥವಾ ಸ್ಕೈವಾಕ್‌ಗಳು.

(v) ಇ-ಶೌಚಾಲಯಗಳು ಸೇರಿದಂತೆ ಸಾರ್ವಜನಿಕ ಶೌಚಾಲಯಗಳು;

(vi) ಸೂಕ್ತ ಸ್ಥಳಗಳು/ ಪ್ರದೇಶಗಳಲ್ಲಿ ಕಸದ ತೊಟ್ಟಿಗಳು;

(vii) ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳು ಮತ್ತು ಸಂಚಾರ ಪೊಲೀಸ್ ಚೌಕಿ; ಮತ್ತು

(viii) ಸಾರ್ವಜನಿಕ ಮೂಲಸೌಕರ್ಯವನ್ನು ಸೃಷ್ಟಿಸುವ ಯಾವುದೇ ಇತರೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆ;

(ix) ಸಾರ್ವಜನಿಕ ಅಥವಾ ನಾಗರಿಕ ಮೂಲಸೌಕರ್ಯಗಳ ಸೃಜನೆಗೆ ಸಂಬಂಧಿಸಿದಂತೆ ಜಾಹೀರಾತು ಹಕ್ಕುಗಳನ್ನು ನಿಗದಿಪಡಿಸಲಾಗಿರುವ ಯಾವುದೇ ಟೆಂಡರ್.

(7) ಸಿಂಧುವಾದ ಗುತ್ತಿಗೆ ಅವಧಿಯೊಳಗಡೆ ಇರುವ ಅನಧಿಕೃತ ಜಾಹೀರಾತುಗಳು ಅಥವಾ ಬಿಬಿಎಂಪಿ ನೀಡಿರುವ ಅನುಮತಿ ಹೊಂದಿರುವ ಮತ್ತು ಜಾಹೀರಾತು ತೆರಿಗೆ ಪಾವತಿಸಿರುವ ಪರಂಪರಾಗತ ಜಾಹೀರಾತುಗಳಾಗಿರುವ ಸಂದರ್ಭದಲ್ಲಿ:–

(i) ಒಂದು ನಿರ್ದಿಷ್ಟ ಸ್ಥಳದಲ್ಲಿರುವ ಪರಂಪರಾಗತ ಜಾಹೀರಾತು ಅಥವಾ ಜಾಹೀರಾತು ಫಲಕ ಈ ಕೆಳಗಿನ ಷರತ್ತುಗಳನ್ನು ಪೂರೈಸಿದ್ದಲ್ಲಿ: (ಎ) ಬಿಬಿಎಂಪಿ ಜಾಹೀರಾತು ಉಪವಿಧಿಗಳು 2006 ರ ಅಡಿಯಲ್ಲಿ ಖಾಸಗಿ ಆಸ್ತಿಯ ಮೇಲೆ ಅಳವಡಿಸಲು ಬಿಬಿಎಂಪಿಯಿಂದ ಲಿಖಿತವಾಗಿ ಅನುಮತಿ ಪಡೆದಿದ್ದರೆ; (ಬಿ) ಕನಿಷ್ಠ 31.12.2015 ರವರೆಗೆ (ಅದರ ನಂತರ ಬಿಬಿಎಂಪಿ ನವೀಕರಣಗಳನ್ನು ನಿಲ್ಲಿಸಿದೆ) ಅಥವಾ ಅದು ಪ್ರದರ್ಶನವನ್ನು ಮುಂದುವರಿಸಿದವರೆಗೆ, ಇವುಗಳಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ ಜಾಹೀರಾತು ತೆರಿಗೆಯನ್ನು ಪಾವತಿಸಿದ್ದರೆ; ಮತ್ತು (ಸಿ) 31.12.2015 ರ ನಂತರವೂ ಮಾನ್ಯವಾದ ಪ್ರದರ್ಶನ ಅನುಮತಿಯನ್ನು ಹೊಂದಿದ್ದರೆ ಅಥವಾ ದಿನಾಂಕ 06.08.2015 ಅಥವಾ 09.10.2015 ರ ಬಿಬಿಎಂಪಿ ಪತ್ರಿಕಾ ಜಾಹೀರಾತುಗಳಿಗೆ ಪ್ರತಿಕ್ರಿಯೆಯಾಗಿ ಆನ್‌ಲೈನ್ ನವೀಕರಣಕ್ಕೆ ಅರ್ಜಿ ಸಲ್ಲಿಸಿದ್ದು ಮತ್ತು ಅದಕ್ಕೆ ಸೂಕ್ತ ಸ್ವೀಕೃತಿ ಪತ್ರವನ್ನು ಹೊಂದಿದ್ದರೆ; ಅಂತಹ ಜಾಹೀರಾತು ಫಲಕ ಅಥವಾ ಪರಂಪರಾಗತ ಜಾಹೀರಾತಿಗಾಗಿ, ಈ ನಿಯಮಗಳ ಅಧಿಸೂಚನೆಯ ದಿನಾಂಕದಿಂದ 3 ತಿಂಗಳೊಳಗೆ ಅನುಮತಿಗಾಗಿ ಅರ್ಜಿ ಸಲ್ಲಿಸಲು ಒಂದು ಬಾರಿಯ ಅವಕಾಶವನ್ನು (OTO) ನೀಡತಕ್ಕದ್ದು. ಪುನರಾರಂಭಿಸಲು ಕೋರಲಾದ ಸದರಿ ಜಾಹೀರಾತಿನ ಮೇಲೆ ಯಾವುದೇ ಪಾವತಿಸದ ಜಾಹೀರಾತು ತೆರಿಗೆ ಅಥವಾ ಶುಲ್ಕದ ಬಾಕಿ ಇರತಕ್ಕದ್ದಲ್ಲ ಮತ್ತು ನಗರ ಪಾಲಿಕೆಯ ಜಾಹೀರಾತು ವಿಭಾಗದಿಂದ ಬೇ ಬಾಕಿ ಪ್ರಮಾಣಪತ್ರವನ್ನು

ಪಡೆಯತಕ್ಕದ್ದು. ಅಂತಹ ಅರ್ಜಿಯನ್ನು ಸಂಬಂಧಪಟ್ಟ ನಗರ ಪಾಲಿಕೆಯ ಆಯುಕ್ತರು ಅರ್ಹತಾನುಸಾರ ಪರಿಶೀಲಿಸಿ ಅನುಮೋದಿಸತಕ್ಕದು ಮತ್ತು ಅನುಮೋದನೆಯ ಆದೇಶವನ್ನು ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ವಾಣಿಜ್ಯ ಜಾಹೀರಾತುಗಳನ್ನು ಪ್ರದರ್ಶಿಸಲು ಅನುಮತಿಸತಕ್ಕದ್ದು.

ಪರಂತು, 5 ವರ್ಷಗಳ ತರುವಾಯ ಅದನ್ನು ಸ್ಥಗಿತಗೊಳಿಸತಕ್ಕದ್ದು.

ಅಲ್ಲದೆ, ಅನುಮೋದನೆಯ ತರುವಾಯ, ಈ ನಿಯಮಗಳ ಅಡಿಯಲ್ಲಿ ನಿಯಮಿಸಲಾದ ಅಳತೆ, ಎತ್ತರ, ಭೂ ಅಂತರ ಮತ್ತು ಇತರ ಅಗತ್ಯತೆಗಳ ಅನುಸಾರ ಜಾಹೀರಾತನ್ನು ಪ್ರದರ್ಶಿಸತಕ್ಕದ್ದು.

(ii) ಈ ಒಂದು ಬಾರಿಯ ಅವಕಾಶವು (OTO)ಈ ನಿಯಮಗಳ ಅಂತಿಮ ಅಧಿಸೂಚನೆಯ ದಿನಾಂಕದಿಂದ ಮೂರು ತಿಂಗಳ ಅವಧಿಯವರೆಗೆ ಇರತಕ್ಕದ್ದು.

(iii) ಜಾಹೀರಾತುದಾರನು ಈ ನಿಯಮಗಳು ಜಾರಿಗೆ ಬಂದ ಮೂರು ತಿಂಗಳೊಳಗೆ ನಮೂನೆ-IV ರಲ್ಲಿ ಅರ್ಜಿ ಸಲ್ಲಿಸತಕ್ಕದ್ದು ಮತ್ತು ನಮೂನೆ-IVಎ ನಲ್ಲಿ ಜಾಹೀರಾತು ಪ್ರದರ್ಶನಕ್ಕೆ ಅನುಮೋದನೆಯನ್ನು ಪಡೆಯತಕ್ಕದು. ಮೂರು ತಿಂಗಳ ತರುವಾಯ ಈ ಸಂಬಂಧ ಯಾವುದೇ ಅರ್ಜಿಯನ್ನು ಸ್ವೀಕರಿಸತಕ್ಕದ್ದಲ್ಲ. ಹಾಗೂ ಅನಧಿಕೃತ ಜಾಹೀರಾತುಗಳಿಗಾಗಿ ಯಾವುದೇ ಜಾಹೀರಾತು ಫಲಕವನ್ನು ಅಳವಡಿಸಿದ್ದರೆ ಅಥವಾ ಅಸ್ತಿತ್ವದಲ್ಲಿದ್ದರೆ, ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ಕ್ರಮ ಕೈಗೊಳ್ಳತಕ್ಕದ್ದು.

(iv) ಈ ಎಲ್ಲಾ ಜಾಹೀರಾತುಗಳಿಗೆ, ಅನುಸೂಚಿ-2 ರ ಅಡಿಯಲ್ಲಿ ಸದರಿ ರಸ್ತೆ, ವೃತ್ತ ಅಥವಾ ಪ್ರದೇಶಕ್ಕೆ ನಿಯಮಿಸಲಾದ ದರ ಅಥವಾ ನಿಯಮ 7 ರ ಅಡಿಯಲ್ಲಿ ಟೆಂಡರ್ ಮೂಲಕ ಅಂಥ ರಸ್ತೆ, ವೃತ್ತ ಅಥವಾ ಪ್ರದೇಶಕ್ಕೆ ಪಡೆದ ದರ - ಇವೆರಡರಲ್ಲಿ ಯಾವುದು ಹೆಚ್ಚಾಗಿರುತ್ತದೆಯೋ ಆ ದರದಲ್ಲಿ ಜಾಹೀರಾತು ಶುಲ್ಕವನ್ನು ಪಾವತಿಸಕ್ಕದ್ದು.

ಪರಂತು, ಈ ನಿಯಮಗಳು ಜಾರಿಗೆ ಬರುವ ಮುಂಚಿನ ಅವಧಿಗೆ ಪಾವತಿಸಬೇಕಾದ ಜಾಹೀರಾತು ದರಗಳು, ಆಯಾ ಸಮಯದಲ್ಲಿ ಜಾರಿಯಲ್ಲಿದ್ದ ಸುಸಂಗತ ಉಪ-ವಿಧಿಗಳು ಅಥವಾ ನಿಯಮಗಳಲ್ಲಿ ನಿಯಮಿಸಲಾದಂತೆಯೇ ಇರತಕ್ಕದ್ದು.

ಪರಂತು ಕನಿಷ್ಠ ಜಾಹೀರಾತು ಶುಲ್ಕ ಅಥವಾ ಸ್ಥಳದ ಬಿಡ್ ದರದ ಯಾವುದೇ ಪರಿಷ್ಕರಣೆಯು, ಅಂಥ ಪರಿಷ್ಕರಣೆಯ ದಿನಾಂಕದಿಂದಲೇ ಪಾವತಿ ಮಾಡುವುದಕ್ಕೆ ಹೊಣೆಯಾಗಿರತಕ್ಕದ್ದು. ನಗರಪಾಲಿಕೆ ಆಯುಕ್ತರು ಒಂದು ಬಾರಿಯ ಅವಕಾಶದ (OTO) ಅಡಿಯಲ್ಲಿ ಅನುಮೋದನೆ ನೀಡಿದ ದಿನಾಂಕದಿಂದ ಮಾಸಿಕ ಜಾಹೀರಾತು ಶುಲ್ಕವನ್ನು ವಿಧಿಸತಕ್ಕದ್ದು.

ಆದ್ದರಿಂದ, ಈ ಒಂದು ಬಾರಿಯ ಅವಕಾಶದ (OTO) ಅಡಿಯಲ್ಲಿ ಜಾಹೀರಾತಿಗೆ ಅನುಮತಿ ನೀಡಿದ ಆದೇಶದ ದಿನಾಂಕದಿಂದ ಒಂದು ತಿಂಗಳು ಪೂರ್ಣಗೊಂಡ

ಕೂಡಲೇ, ಮೊದಲ ತಿಂಗಳ ಮಾಸಿಕ ಜಾಹೀರಾತು ಶುಲ್ಕದ ಪಾವತಿಯನ್ನು ಮಾಡತಕ್ಕದ್ದು. ಮಾಸಿಕ ಜಾಹೀರಾತು ಶುಲ್ಕವನ್ನು ಪಾವತಿಸಬೇಕಾದ ದಿನಾಂಕದಿಂದ 30 ದಿನಗಳು ಪೂರ್ಣಗೊಂಡ ನಂತರವೂ ಅಂಥ ಶುಲ್ಕವನ್ನು ಪಾವತಿಸದಿದ್ದಲ್ಲಿ, ಅನುಮತಿಯು ತಾನಾಗಿಯೇ ರದ್ದುಗೊಳ್ಳತಕ್ಕದ್ದು. ಅಂತಹ ರದ್ದಾದ ಜಾಹೀರಾತಿನ ಪ್ರದರ್ಶನ ಮತ್ತು ಸಂಬಂಧಿತ ಮೂಲಸೌಕರ್ಯಗಳನ್ನು ಮಾಲೀಕರು ತಕ್ಷಣವೇ ತೆಗೆದುಹಾಕದಿದ್ದಲ್ಲಿ, ನಗರಪಾಲಿಕೆಯು ಅದನ್ನು ತೆಗೆದುಹಾಕತಕ್ಕದ್ದು ಅಥವಾ ಕೆಡವಿ ಹಾಕತಕ್ಕದ್ದು ಮತ್ತು ಅದರ ವೆಚ್ಚವನ್ನು ಯಾರ ಹೆಸರಿನಲ್ಲಿ ಅನುಮೋದನೆ ನೀಡಲಾಗಿದೆಯೋ ಆ ವ್ಯಕ್ತಿಯಿಂದ ವಸೂಲಿ ಮಾಡತಕ್ಕದ್ದು.

(v) ಈ ಉಪ-ನಿಯಮದ ಅಡಿಯಲ್ಲಿ ಪ್ರದರ್ಶಿಸಲು ಅನುಮತಿಸಲಾದ ಪರಂಪರಾಗತ ಜಾಹೀರಾತುಗಳಿಗೆ ಸಂಬಂಧಪಟ್ಟಂತೆ ನಗರಪಾಲಿಕೆಗೆ ಕಾರ್ಯಕ್ಷಮತಾ ಭದ್ರತೆಯಾಗಿ ಆರು ತಿಂಗಳ ಮಾಸಿಕ ಜಾಹೀರಾತು ಶುಲ್ಕಕ್ಕೆ ಸಮನಾದ ಮೊತ್ತದ, ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ನಿಂದ ಪಡೆದ 'ಕಾರ್ಯಕ್ಷಮತಾ ಬ್ಯಾಂಕ್ ಖಾತರಿ'ಯನ್ನು (PBG) ಅಥವಾ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ (IRDA) ಪರವಾನಗಿ ಪಡೆದ ಸಾಮಾನ್ಯ ವಿಮಾ ಕಂಪನಿಯ 'ಜಾಮೀನು ಬಂಧಪತ್ರ (Surety Bond)' ಅನ್ನು ನೀಡತಕ್ಕದ್ದು.

(vi) ಒಂದು ಬಾರಿಯ ಅವಕಾಶದ (OTO) ಅಡಿಯಲ್ಲಿ ಅನುಮತಿಸಲಾದ ಈ ಜಾಹೀರಾತುಗಳನ್ನು, ನಿಯಮ 7 ರ ಅಡಿಯಲ್ಲಿ ಜಾಹೀರಾತುಗಳ ಪ್ರದರ್ಶನಕ್ಕೆ ಅನುಮತಿಸಲಾದ ಗರಿಷ್ಠ ಜಾಹೀರಾತು ಪ್ರದೇಶದ ಮಿತಿಯನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ ಪರಿಗಣಿಸತಕ್ಕದ್ದಲ್ಲ.

(vii) ಯಾವುದೇ ಹಿಂದಿನ ಜಾಹೀರಾತು ಉಪ-ವಿಧಿಗಳ ಅಡಿಯಲ್ಲಿ ಎಲ್‌ಇಡಿ ಪ್ರದರ್ಶನ ಫಲಕಕ್ಕಾಗಿ ಪಡೆಯಲಾದ ಮತ್ತು ಪ್ರಸ್ತುತ ಚಾಲ್ತಿಯಲ್ಲಿರುವ ಹಾಗೂ ಅನುಮತಿ ಅವಧಿಯೊಳಗಿರುವ ಸ್ವಯಂ ಜಾಹೀರಾತು ಆಧರಿತ ಅನುಮತಿಗಳನ್ನು ವಾಣಿಜ್ಯ ಜಾಹೀರಾತು ಫಲಕಗಳಾಗಿ ಪರಿವರ್ತಿಸಲು ಒಂದು ಬಾರಿಯ ಅವಕಾಶವನ್ನು (OTO) ನೀಡತಕ್ಕದ್ದು. ಈ ಒಂದು ಬಾರಿಯ ಅವಕಾಶವು, ಈ ನಿಯಮಗಳ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯವರೆಗೆ ಲಭ್ಯವಿರತಕ್ಕದ್ದು.

ಪರಂತು, ವಾಣಿಜ್ಯ ಜಾಹೀರಾತು ಫಲಕವಾಗಿ ಪರಿವರ್ತಿಸಲು ಕೋರಿರುವ ಸದರಿ ಎಲ್‌ಇಡಿ ಗೆ ಸಂಬಂಧಪಟ್ಟಂತೆ, ಈ ನಿಯಮಗಳ ಅಧಿಸೂಚನೆಯ ದಿನಾಂಕದಂದು ಯಾವುದೇ ಜಾಹೀರಾತು ತೆರಿಗೆ ಅಥವಾ ಶುಲ್ಕ ಬಾಕಿ ಇರತಕ್ಕದ್ದಲ್ಲ ಮತ್ತು ನಗರ ಪಾಲಿಕೆಯ ಜಾಹೀರಾತು ವಿಭಾಗದಿಂದ ಬೇಬಾಕಿ ಪ್ರಮಾಣಪತ್ರವನ್ನು ಪಡೆಯತಕ್ಕದ್ದು. ಸಂಬಂಧಪಟ್ಟ ನಗರ ಪಾಲಿಕೆಯ ಆಯುಕ್ತರು ಅರ್ಹತೆಯನ್ವಯ ಇಂತಹ ಅರ್ಜಿಯನ್ನು ಒಮ್ಮೆ ಅನುಮೋದಿಸಿದರೆ, ಅನುಮೋದನೆ ಆದೇಶದ ದಿನಾಂಕದಿಂದ 5 ವರ್ಷಗಳ ಅವಧಿಗೆ ವಾಣಿಜ್ಯ ಜಾಹೀರಾತುಗಳನ್ನು ಪ್ರದರ್ಶಿಸಲು ಅನುಮತಿಸಕ್ಕದ್ದು.

ಪರಂತು, ಐದು ವರ್ಷಗಳ ತರುವಾಯ, ಆಯುಕ್ತರ ಅನುಮತಿಯೊಂದಿಗೆ ಇದನ್ನು ಗರಿಷ್ಠ 5 ವರ್ಷಗಳ ಇನ್ನೊಂದು ಅವಧಿಗೆ (ಈ ಉಪಬಂಧದ ಅಡಿಯಲ್ಲಿ ಒಟ್ಟು ಅವಧಿಯನ್ನು ಗರಿಷ್ಠ ಹತ್ತು ವರ್ಷಗಳಾಗಿ ತೆಗೆದುಕೊಂಡು) ಕಾಲಕಾಲಕ್ಕೆ ಪರಿಷ್ಕರಿಸಬಹುದಾದ, ಅನುಸೂಚಿ-2 ರಲ್ಲಿ ನಿಯಮಿಸಲಾದ ದರಗಳಲ್ಲಿ ನವೀಕರಿಸತಕ್ಕದ್ದು.

ಅಲ್ಲದೆ, ಅನುಮೋದನೆಯ ತರುವಾಯ, ಈ ನಿಯಮಗಳ ಅಡಿಯಲ್ಲಿ ನಿಗದಿಪಡಿಸಲಾದ ಅಳತೆ, ಎತ್ತರ ಮತ್ತು ಭೂ ಅಂತರ ಹಾಗೂ ಇತರೆ ಅಗತ್ಯತೆಗಳಿಗೆ ಅನುಗುಣವಾಗಿಯೇ ಜಾಹೀರಾತನ್ನು ಪ್ರದರ್ಶಿಸತಕ್ಕದ್ದು. ಒಂದು ಬಾರಿಯ ಅವಕಾಶದ (OTO) ಅಡಿಯಲ್ಲಿ ಅಂತಹ ಎಲ್ಇಡಿ ಪರದೆಗೆ ಸಂಬಂಧಿಸಿದ ವಾಣಿಜ್ಯ ಜಾಹೀರಾತು ಹಕ್ಕುಗಳನ್ನು ಪಡೆಯುವ ವ್ಯಕ್ತಿಯು, ಸಂಬಂಧಪಟ್ಟ ನಗರಪಾಲಿಕೆಗೆ ಅನುಸೂಚಿ-2 ರಲ್ಲಿ ನಿಗದಿಪಡಿಸಿದ ಮತ್ತು ಕಾಲಕಾಲಕ್ಕೆ ಪರಿಷ್ಕರಿಸಬಹುದಾದ ದರದಲ್ಲಿ ಜಾಹೀರಾತು ಶುಲ್ಕವನ್ನು ಪಾವತಿಸತಕ್ಕದ್ದು.

ಪರಂತು ನಿಗದಿತ ಸ್ಥಳಕ್ಕೆ ಕನಿಷ್ಠ ಜಾಹೀರಾತು ಶುಲ್ಕ ಅಥವಾ ಬಿಡ್ ದರದಲ್ಲಿ ಯಾವುದೇ ರೀತಿಯ ಪರಿಷ್ಕರಣೆಯಾದಲ್ಲಿ, ಅದನ್ನು ಪಾವತಿಸಲು ಬದ್ಧರಾಗಿರತಕ್ಕದ್ದು. ಒಟಿಒ ಅಡಿಯಲ್ಲಿ ವಾಣಿಜ್ಯ ಜಾಹೀರಾತು ಅನುಮೋದನೆ ನೀಡಿದ ದಿನಾಂಕದಿಂದ ಮಾಸಿಕ ಜಾಹೀರಾತು ಶುಲ್ಕವನ್ನು ವಿಧಿಸತಕ್ಕದ್ದು.

ಆದ್ದರಿಂದ, ಒಂದು ಬಾರಿಯ ಅವಕಾಶದ (OTO) ಅಡಿಯಲ್ಲಿ ವಾಣಿಜ್ಯ ಜಾಹೀರಾತಿಗೆ ಅನುಮತಿ ನೀಡಿದ ಆದೇಶದ ದಿನಾಂಕದಿಂದ ಒಂದು ತಿಂಗಳು ಪೂರ್ಣಗೊಂಡ ತಕ್ಷಣವೇ ಮೊದಲ ತಿಂಗಳ ಮಾಸಿಕ ಜಾಹೀರಾತು ಶುಲ್ಕವನ್ನು ಪಾವತಿಸತಕ್ಕದ್ದು. ಮಾಸಿಕ ಜಾಹೀರಾತು ಶುಲ್ಕವನ್ನು ಪಾವತಿಸಬೇಕಾದ ದಿನಾಂಕದ ತರುವಾಯ 30 ದಿನಗಳು ಪೂರ್ಣಗೊಂಡರೂ ಶುಲ್ಕ ಪಾವತಿಸದಿದ್ದಲ್ಲಿ, ಅನುಮತಿಯು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು. ಹೀಗೆ ರದ್ದುಗೊಂಡ ವಾಣಿಜ್ಯ ಜಾಹೀರಾತಿನ ಎಲ್ಇಡಿ ಪರದೆ ಮತ್ತು ಸಂಬಂಧಿತ ಮೂಲಸೌಕರ್ಯಗಳನ್ನು ಅದರ ಮಾಲೀಕನು ತಕ್ಷಣವೇ ತೆರವುಗೊಳಿಸದಿದ್ದಲ್ಲಿ, ನಗರಪಾಲಿಕೆಯು ಅದನ್ನು ತೆರವುಗೊಳಿಸತಕ್ಕದ್ದು ಅಥವಾ ಕೆಡವಿ ಹಾಕತಕ್ಕದ್ದು ಹಾಗೂ ಅದರ ವೆಚ್ಚವನ್ನು ಯಾರ ಹೆಸರಿನಲ್ಲಿ ಅನುಮೋದನೆ ನೀಡಲಾಗಿದೆಯೋ ಆ ವ್ಯಕ್ತಿಯಿಂದ ವಸೂಲಿ ಮಾಡತಕ್ಕದ್ದು. ಒಂದು ಬಾರಿಯ ಅವಕಾಶದ (OTO) ಅಡಿಯಲ್ಲಿ ಅನುಮತಿಸಲಾದ ಈ ಜಾಹೀರಾತುಗಳನ್ನು, ನಿಯಮ 7 ರ ಅಡಿಯಲ್ಲಿ ಜಾಹೀರಾತುಗಳ ಪ್ರದರ್ಶನಕ್ಕೆ ಅನುಮತಿಸಲಾದ ಗರಿಷ್ಠ ಮಿತಿಯ ಜಾಹೀರಾತು ಪ್ರದೇಶವನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಪರಿಗಣಿಸತಕ್ಕದ್ದಲ್ಲ. ಜಾಹೀರಾತುದಾರನು ಈ ನಿಯಮಗಳು ಜಾರಿಗೆ ಬಂದ ಮೂರು ತಿಂಗಳೊಳಗೆ ನಮೂನೆ-IV ರಲ್ಲಿ ಅರ್ಜಿ ಸಲ್ಲಿಸತಕ್ಕದ್ದು ಮತ್ತು ನಮೂನೆ-IVಎ ನಲ್ಲಿ ಜಾಹೀರಾತು ಪ್ರದರ್ಶನಕ್ಕೆ ಅನುಮೋದನೆ ಪಡೆಯತಕ್ಕದ್ದು ಮತ್ತು ಮೂರು ತಿಂಗಳ ತರುವಾಯ ಈ ಸಂಬಂಧ ಯಾವುದೇ ಅರ್ಜಿಯನ್ನು ಸ್ವೀಕರಿಸತಕ್ಕದ್ದಲ್ಲ. ಈ ಉಪ-ನಿಯಮದ ಅಡಿಯಲ್ಲಿ ಪ್ರದರ್ಶಿಸಲು ಅನುಮತಿಸಲಾದ ವಾಣಿಜ್ಯ ಎಲ್ಇಡಿ ಜಾಹೀರಾತಿಗೆ, ಆರು ತಿಂಗಳುಗಳಿಗೆ ಮಾಸಿಕವಾಗಿ ಪಾವತಿಸಬೇಕಾದ ಜಾಹೀರಾತು

ಶುಲ್ಕದ ಮೊತ್ತಕ್ಕೆ ಸಮನಾದ ಮೊತ್ತವನ್ನು ಕಾರ್ಯಕ್ಷಮತಾ ಭದ್ರತೆಯಾಗಿ ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್‌ನಿಂದ ಕಾರ್ಯಕ್ಷಮತಾ ಬ್ಯಾಂಕ್ ಖಾತರಿ (PGB) ರೂಪದಲ್ಲಿ ಅಥವಾ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ (IRDA) ಪರವಾನಗಿ ಪಡೆದ ಜನರಲ್ ಇನ್ಶೂರೆನ್ಸ್ ಕಂಪನಿಯ ಜಾಮೀನು ಬಂಧಪತ್ರ (Surety Bond) ಮೂಲಕ ಸಂಬಂಧಪಟ್ಟ ನಗರಪಾಲಿಕೆಗೆ ನೀಡತಕ್ಕದ್ದು.

9. ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರರಿಂದ ಯಾವುದೇ ಪಾವತಿಸಿದ ಜಾಹೀರಾತಿನ ಅಳವಡಿಕೆ ಅಥವಾ ಪ್ರದರ್ಶನ ಮತ್ತು ಅದರ ಅನುಮೋದನೆಗೆ ಸಂಬಂಧಿಸಿದ ಮಾಹಿತಿ.-(1) ಯಾವುದೇ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶದಲ್ಲಿ ಪಾವತಿಸಿದ ಜಾಹೀರಾತು ಹಕ್ಕುಗಳನ್ನು ಹಸ್ತಾಂತರಿಸಲಾಗಿರುವ ಪ್ರತಿಯೊಬ್ಬ ಪರವಾನಗಿ ಪಡೆದ ಅಥವಾ ನೋಂದಾಯಿತ ಜಾಹೀರಾತುದಾರನು,-

(ಎ) ಆತನು ನಮೂನೆ-IIIರಲ್ಲಿ ಜಾಹೀರಾತಿಗಾಗಿ ಅಥವಾ ಪ್ರದರ್ಶನಕ್ಕಾಗಿ ಯಾವುದೇ ಹೊಸ ಅಥವಾ ನೂತನ ಮೂಲಸೌಕರ್ಯವನ್ನು ನಿರ್ಮಿಸುವ ಮೊದಲು; ಮತ್ತು

(ಬಿ) ಖಂಡದ (ಎ) ಅಡಿಯಲ್ಲಿ ಹೊಸ ಜಾಹೀರಾತಿಗೆ ಸಂಬಂಧಿಸಿದಂತೆ ಈ ಹಿಂದೆ ಅನುಮೋದಿಸಲಾದ ಅಸ್ತಿತ್ವದಲ್ಲಿರುವ ಜಾಹೀರಾತಿನ ನವೀಕರಣಕ್ಕಾಗಿ ನಮೂನೆ-IV ರಲ್ಲಿ;

ಜಾಹೀರಾತುಗಳ ಪ್ರಭಾರ ಹೊಂದಿರುವ ವಿಶೇಷ ಆಯುಕ್ತರಿಗೆ ಲಿಖಿತದಲ್ಲಿ ಅಥವಾ ಆನ್ಲೈನ್ ಮೂಲಕ ಮಾಹಿತಿ ನೀಡತಕ್ಕದ್ದು ಮತ್ತು ಅರ್ಜಿ ಸಲ್ಲಿಸತಕ್ಕದ್ದು:

(2) ಜಾಹೀರಾತುಗಳ ಪ್ರಭಾರ ಹೊಂದಿರುವ ವಿಶೇಷ ಆಯುಕ್ತರು, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಅದನ್ನು ಅನುಮೋದಿಸತಕ್ಕದ್ದು ಅಥವಾ ತಿರಸ್ಕರಿಸತಕ್ಕದ್ದು:

ಪರಂತು, ಜಾಹೀರಾತುದಾರರಿಂದ ಅರ್ಜಿಯನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗೆ ಅನುಮೋದಿಸಲು ಅಥವಾ ತಿರಸ್ಕರಿಸಲು ಯಾವುದೇ ಆದೇಶವನ್ನು ಹೊರಡಿಸದಿದ್ದ ಸಂದರ್ಭದಲ್ಲಿ, ಅದನ್ನು ಅನುಮೋದಿಸಲಾಗಿದೆ ಎಂದು ಭಾವಿಸತಕ್ಕದ್ದು. ಅಂತಹ ಸಂದರ್ಭದಲ್ಲಿ, ತಂತ್ರಾಶದ ಮೂಲಕ ಸ್ವಯಂಚಾಲಿತವಾಗಿ ಅನುಮೋದನೆಗೊಂಡು ಮತ್ತು ಡಿಜಿಟಲ್ ಸಹಿಯೊಂದಿಗೆ ಅನುಮೋದನೆ ನೀಡಲಾಗುತ್ತದೆ.ಆಗ ಜಾಹೀರಾತುದಾರರು ಕೈಯಿಂದ ಸಹಿ ಮಾಡಿದ ಅನುಮೋದನೆಗೆ ಕಾಯದೆ "ಭಾವಿತ ಅನುಮೋದನೆ (Deemed permission)" ಖಂಡದ ಮೇಲೆ ಕಾರ್ಯನಿರ್ವಹಿಸಬಹುದು.

ಟಿಪ್ಪಣಿ: ಈ ನಿಯಮಗಳ ಅಡಿಯಲ್ಲಿ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶದ ವ್ಯಾಪ್ತಿಯನ್ನುಯುಕ್ತವಾಗಿ ಹಂಚಿಕೆ ಮಾಡಲಾಗಿರುವ ಮತ್ತು ಸದರಿ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶದ ಜಾಹೀರಾತುಗಳಿಗೆ ಸಂಬಂಧಿಸಿದಂತೆ ಪರವಾನಗಿ ಪಡೆದ ಜಾಹೀರಾತುದಾರರಿಗೆ ಮಾತ್ರ ಈ ಖಂಡ ಅನ್ವಯಿಸುತ್ತದೆ.

(3) ಹೊಸ ಅಥವಾ ನೂತನ ಜಾಹೀರಾತಿಗಾಗಿನ ಅರ್ಜಿಯ ಅನುಮೋದನೆಯು ಸಂಬಂಧಪಟ್ಟ ನಮೂನೆಯಲ್ಲಿರತಕ್ಕದ್ದು ಮತ್ತು ಅದರ ನಿರಾಕರಣೆಯು ಸಂಬಂಧಪಟ್ಟ

ನಮೂನೆಯಲ್ಲಿರತಕ್ಕದ್ದು. ಅಸ್ತಿತ್ವದಲ್ಲಿರುವ ಜಾಹೀರಾತಿನ ನವೀಕರಣಕ್ಕಾಗಿ ಅರ್ಜಿಯ ಅನುಮೋದನೆಯು ನಮೂನೆ-VI-ಎ ನಲ್ಲಿರತಕ್ಕದ್ದು ಮತ್ತು ಅದರ ನಿರಾಕರಣೆಯು ನಮೂನೆ-VI-ಬಿ ನಲ್ಲಿರತಕ್ಕದ್ದು.

(4) (1)ನೇ ಖಂಡದ ಅಡಿಯಲ್ಲಿನ ಪ್ರತಿಯೊಂದು ಅರ್ಜಿಯು ಈ ಕೆಳಕಂಡವುಗಳಿಂದಲಗತ್ತಾಗಿರತಕ್ಕದ್ದು, ಎಂದರೆ:–

(i) ಅರ್ಹ ಅಭಿಯಂತರರು ಅನುಮೋದಿಸಿದಂತೆ ನಿಲ್ಲಿಸುವ ಅಥವಾಪ್ರದರ್ಶಿಸಿರುವ ಜಾಹೀರಾತಿನ ಎತ್ತರ ಮತ್ತು ಇತರೆ ಅಳತೆ ಮತ್ತು ಬಳಸಲು ಉದ್ದೇಶಿಸಿರುವ ಸಾಮಗ್ರಿಯನ್ನು ತೋರಿಸುವ ಜಾಹೀರಾತು ಯೋಜನೆ;

(ii) ಖಾಸಗಿ ಭೂಮಿ ಅಥವಾ ಕಟ್ಟಡದ ಮೇಲೆ ಜಾಹೀರಾತನ್ನು ಹಾಕಬೇಕಾದಲ್ಲಿ ಅಂಥ ಭೂಮಿ ಅಥವಾ ಕಟ್ಟಡದ ಮಾಲೀಕರಿಂದ ಯಾವುದೇ ನಿರಾಕ್ಷೇಪಣಾ ಪ್ರಮಾಣಪತ್ರ ಮತ್ತು ಒಪ್ಪಂದದ ಪ್ರತಿ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರದ ಭೂಮಿಯಲ್ಲಿ ಜಾಹೀರಾತನ್ನು ಹಾಕಬೇಕಾದರೆ ಸಂಬಂಧಿತ ರಾಜ್ಯ ಅಥವಾ ಕೇಂದ್ರ ಸರ್ಕಾರದ ಇಲಾಖೆಯಿಂದ ಯಾವುದೇ ನಿರಾಕ್ಷೇಪಣಾ ಪ್ರಮಾಣಪತ್ರ ಮತ್ತು/ಅಥವಾ ಒಪ್ಪಂದ ಪ್ರತಿ ಅಥವಾ ಸಂಬಂಧಪಟ್ಟ ನಗರ ಪಾಲಿಕೆಯ ಭೂಮಿ ಅಥವಾ ಕಟ್ಟಡದಲ್ಲಿ ಜಾಹೀರಾತನ್ನು ಹಾಕಬೇಕಾದರೆ ಸಂಬಂಧಪಟ್ಟ ನಗರಪಾಲಿಕೆಯ ಆಯುಕ್ತರಿಂದ ಯಾವುದೇ ನಿರಾಕ್ಷೇಪಣಾ ಪ್ರಮಾಣಪತ್ರ:

ಪರಂತು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಭೂಮಿ ಅಥವಾ ಕಟ್ಟಡಕ್ಕೆ ಸಂಬಂಧಿಸಿದಂತೆ, ಯಾವುದೇ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಸಹಾಯಕ ಕಾರ್ಯಪಾಲಕಅಭಿಯಂತರರ ದರ್ಜೆಗಿಂತ ಕಡಿಮೆಯಲ್ಲದ ಅಧಿಕಾರಿಯು ನೀಡತಕ್ಕದ್ದು.

ಟಿಪ್ಪಣಿ:ಸಂಬಂಧಪಟ್ಟ ನಗರಪಾಲಿಕೆಗೆ ಪಾವತಿಸಬೇಕಾದ ಜಾಹೀರಾತು ಶುಲ್ಕವು ತನಗಾಗಿ ಅಥವಾ ಇತರರ ಪರವಾಗಿ ಜಾಹೀರಾತುಪಡಿಸುವ ಹಕ್ಕುಗಳಿಗೆ ಮಾತ್ರ ಅನ್ವಯಿಸುತ್ತದೆ. ಕೇವಲ ಜಾಹೀರಾತು ಶುಲ್ಕವನ್ನು ಸಂಬಂಧಪಟ್ಟ ನಗರಪಾಲಿಕೆಗೆ ಪಾವತಿಸುವ ಮೂಲಕ ಅಂತಹ ಜಾಹೀರಾತುದಾರರಿಗೆ ಯಾವುದೇ ಜಾಹೀರಾತು ಅಥವಾ ಪ್ರದರ್ಶನವನ್ನು ನಿಗದಿಪಡಿಸಿದ ರಸ್ತೆ ಅಥವಾ ಪ್ರದೇಶ ಅಥವಾ ವೃತ್ತದ ಮೇಲೆ ಇರುವ ಯಾವುದೇ ಆಸ್ತಿ ಅಥವಾ ಭೂಮಿಯಲ್ಲಿ ಪ್ರತ್ಯೇಕವಾಗಿ ಅದರ ಮಾಲೀಕರ ಅನುಮತಿಯನ್ನು ಪಡೆಯದೆ ಮತ್ತು ಅದಕ್ಕೆ ಸೂಕ್ತ ಒಪ್ಪಂದವನ್ನು ಮಾಡಿಕೊಳ್ಳದೆ ಅಳವಡಿಸಲು ಅಥವಾ ಪ್ರದರ್ಶಿಸಲು ಯಾವುದೇ ಹಕ್ಕು ಇರುವುದಿಲ್ಲ. ಪರವಾನಗಿ ಪಡೆದ ಜಾಹೀರಾತುದಾರರು ಅಂತಹ ಬಳಕೆಗಾಗಿ ಆಸ್ತಿ ಅಥವಾ ಭೂಮಿಯ ಮಾಲೀಕರಿಗೆ ಪಾವತಿಸಬೇಕಾದ ಮೊತ್ತವು ಸಂಬಂಧಪಟ್ಟ ನಗರಪಾಲಿಕೆಗೆ ಪಾವತಿಸಬೇಕಾದ ಜಾಹೀರಾತು ಶುಲ್ಕದಿಂದ ಹೊರತಾಗಿರುತ್ತದೆ ಮತ್ತು ಪರವಾನಗಿ ಪಡೆದ ಜಾಹೀರಾತುದಾರರು ಮತ್ತು ಆಸ್ತಿ ಮಾಲೀಕರ ನಡುವೆ ನಿರ್ಧರಿಸಲು ಬಿಡಲಾಗುತ್ತದೆ.

(iii) ಸ್ಥಳದ ಅಕ್ಷಾಂಶ ಮತ್ತು ರೇಖಾಂಶದೊಂದಿಗೆ ಜಾಹೀರಾತಿನ ಉದ್ದೇಶಿತ ಸ್ಥಳವನ್ನು ಸೂಚಿಸುವ ಗೂಗಲ್ ನಕ್ಷೆ ಮತ್ತು ದಿಶಾಂಕ್ ನಕ್ಷೆ;

(iv) ಅಸ್ತಿತ್ವದಲ್ಲಿರುವ ಯಾವುದೇ ಕಟ್ಟಡದ ಮೇಲೆ ಅಳವಡಿಸುವುದಕ್ಕಾಗಿ ಪ್ರಸ್ತಾಪಿಸಲಾದ ಜಾಹೀರಾತಿನ ಸಂದರ್ಭದಲ್ಲಿ ಕಟ್ಟಡದ ರಚನಾತ್ಮಕ ಸ್ಥಿರತೆಯ ಪ್ರಮಾಣಪತ್ರ ಮತ್ತು ಸ್ವಾಧೀನ ಪ್ರಮಾಣಪತ್ರ (ಅಂತಹ ಕಟ್ಟಡಕ್ಕೆ ಸ್ವಾಧೀನ ಪ್ರಮಾಣಪತ್ರವನ್ನು ಪಡೆಯುವುದು ಕಡ್ಡಾಯವಾಗಿರುವಲ್ಲಿ); ಮತ್ತು

(v)ಯಾವುದೇ ಬಿ-ನೋಂದಣಿ ಆಸ್ತಿಯ ಮೇಲೆ ವಾಣಿಜ್ಯ ಜಾಹೀರಾತುಗಳಿಗೆ ಅನುಮತಿ ಇರುವುದಿಲ್ಲ.

(5) ಈ ನಿಯಮಗಳಿಗೆ ಅನುಸಾರವಾಗಿ ಪೂರ್ವ ಮಾಹಿತಿ ನೀಡದೆ ಅಳವಡಿಸಲಾದ ಅಥವಾ ಪ್ರದರ್ಶಿಸಲಾದ ಯಾವುದೇ ಜಾಹೀರಾತನ್ನು ಅನಧಿಕೃತವೆಂದು ಪರಿಗಣಿಸತಕ್ಕದ್ದು ಮತ್ತು ಪಾವತಿಸಬೇಕಾದ ಮಾಸಿಕ ಜಾಹೀರಾತು ಶುಲ್ಕಕ್ಕಿಂತ ಪ್ರತಿ ಚದರ ಅಡಿಗೆ ಎರಡು ಪಟ್ಟು ಹೆಚ್ಚಿನ ದಂಡಕ್ಕೆ ಗುರಿಯಾಗತಕ್ಕದ್ದು ಮತ್ತು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ಆ ಜಾಹೀರಾತನ್ನು ತಕ್ಷಣವೇ ತೆಗೆದುಹಾಕತಕ್ಕದ್ದು.

(6) ಜಾಹೀರಾತು ಏಜೆನ್ಸಿಯು ಕ್ಯೂಆರ್-ಕೋಡ್‌ನೊಂದಿಗೆ ತನ್ನ ವಿವರಗಳು ಮತ್ತು ಅನುಮತಿ ಅಥವಾ ಅನುಮೋದನೆ ಸಂಖ್ಯೆಯನ್ನು ಜಾಹೀರಾತಿನಲ್ಲಿ ಸಂಬಂಧಪಟ್ಟ ನಗರಪಾಲಿಕೆಯು ನಿರ್ದಿಷ್ಟಪಡಿಸಬಹುದಾದ ರೀತಿಯಲ್ಲಿ ಹಾಕತಕ್ಕದ್ದು. ತಪ್ಪಿದಲ್ಲಿ ಅಂಥ ಜಾಹೀರಾತನ್ನು ಅನಧಿಕೃತವೆಂದು ಪರಿಗಣಿಸತಕ್ಕದ್ದು ಮತ್ತು ಅದನ್ನು ತಕ್ಷಣವೇ ತೆಗೆದುಹಾಕತಕ್ಕದ್ದು ಮತ್ತು ಪ್ರತಿ ಚದರ ಅಡಿ ದರಕ್ಕಿಂತ ಎರಡು ಪಟ್ಟು ದಂಡವನ್ನು ಪಾವತಿಸಲು ಹೊಣೆಗಾರರಾಗಿರತಕ್ಕದ್ದು.

(7) ಜಾಹೀರಾತುದಾರನು ತನಗೆ ಗೊತ್ತುಪಡಿಸಿದ ಪ್ರದೇಶದೊಳಗೆ ಪರಂಪರಾಗತ ಜಾಹೀರಾತು ಸೇರಿದಂತೆ ಜಾಹೀರಾತು ಫಲಕಗಳ ಪ್ರದರ್ಶನದ ಸ್ಥಳದ ಯಾವುದೇ ಬದಲಾವಣೆಯನ್ನು ಖಂಡ (1), (2) ಮತ್ತು (3)ರಲ್ಲಿ ನೀಡಲಾಗಿರುವಂಥ ಪ್ರಕ್ರಿಯೆಯನ್ನು ಅನುಸರಿಸಿ ಮಾಡಬಹುದು.

10. ಮೇಲ್ಮನವಿ ಮತ್ತು ಪುನರ್ ಪರಿಶೀಲನೆ.-(1) ಈ ನಿಯಮಗಳ ಅಡಿಯಲ್ಲಿ ಜಂಟಿ ಆಯುಕ್ತರ ಯಾವುದೇ ನಿರ್ಣಯ ಅಥವಾ ಆದೇಶದ ವಿರುದ್ಧ ಯಾವುದೇ ಮೇಲ್ಮನವಿಯನ್ನು ನಗರಪಾಲಿಕೆಯ ಜಾಹೀರಾತುಗಳ ಪ್ರಭಾರ ಹೊಂದಿರುವ ವಿಶೇಷ/ಅಪರ ಆಯುಕ್ತರಿಗೆ ಸಲ್ಲಿಸತಕ್ಕದ್ದು ಮತ್ತು ಆಯುಕ್ತರ ಯಾವುದೇ ನಿರ್ಣಯದ ಬಗ್ಗೆ ಪುನರ್ ಪರಿಶೀಲನೆಯನ್ನು ಜಾಹೀರಾತು ನಿಯಂತ್ರಣ ಸಮಿತಿಗೆ ಸಲ್ಲಿಸತಕ್ಕದ್ದು.

(2) ಮೇಲ್ಮನವಿಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವು ಈ ಕೆಳಗಿನಂತಿರಬೇಕು, ಎಂದರೆ:-

(i) ಪ್ರಾಧಿಕಾರದ ಆದೇಶವನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗೆ ಅಥವಾ ಕ್ರಮವು ಉದ್ಭವಿಸಿದಾಗ, ಇವುಗಳಲ್ಲಿ ಯಾವುದು ನಂತರವೋ, ಅದರೊಳಗೆ ಆ ಆದೇಶದ ಪ್ರತಿಯೊಂದಿಗೆ ಸಂಬಂಧಪಟ್ಟ ನಗರಪಾಲಿಕೆಯು ನಿರ್ದಿಷ್ಟಪಡಿಸಬಹುದಾದ ಮೇಲ್ಮನವಿ ಶುಲ್ಕದೊಂದಿಗೆ ಮೇಲ್ಮನವಿಯನ್ನು ಸಲ್ಲಿಸತಕ್ಕದ್ದು:

ಪರಂತು, ಜಾಹೀರಾತು ಶುಲ್ಕ ಮತ್ತು/ಅಥವಾ ಬಡ್ಡಿ ಅಥವಾ ಯಾವುದೇ ದಂಡದ ಪಾವತಿ ಅಥವಾ ವಸೂಲಿಗಾಗಿ ನೀಡಲಾದ ತಗಾದೆ ನೋಟಿಸ್‌ಗೆ ಸಂಬಂಧಿಸಿದಂತೆ,

ಅಪೀಲುದಾರನು ಬೇಡಿಕೆಯ ಮೊತ್ತದ ಕನಿಷ್ಠ ಶೇಕಡಾ ಐವತ್ತರಷ್ಟನ್ನು ಸಂಬಂಧಪಟ್ಟ ನಗರಪಾಲಿಕೆಯಲ್ಲಿ ಮುಂಚಿತವಾಗಿ ಠೇವಣಿ ಮಾಡದ ಹೊರತು ಯಾವುದೇ ಮೇಲ್ಮನವಿಯನ್ನು ಅಂಗೀಕರಿಸತಕ್ಕದ್ದಲ್ಲ.

ಇದಲ್ಲದೆ, ಈಗಾಗಲೇ ಠೇವಣಿ ಮಾಡಲಾದ ಮೊತ್ತದ ಭಾಗಶಃ ಅಥವಾ ಪೂರ್ಣ ಮರುಪಾವತಿಗೆ ಕಾರಣವಾಗುವ ಮೇಲ್ಮನವಿ ಯಶಸ್ವಿಯಾದ ಸಂದರ್ಭದಲ್ಲಿ, ಅದನ್ನು ತಕ್ಷಣವೇ ಸಂಬಂಧಪಟ್ಟ ನಗರಪಾಲಿಕೆಯಿಂದ ಮರುಪಾವತಿ ಮಾಡತಕ್ಕದ್ದು ಅಥವಾ ಬಾಕಿ ಇರುವ ಅಥವಾ ಭವಿಷ್ಯದ ಯಾವುದೇ ಜಾಹೀರಾತು ಶುಲ್ಕ ಅಥವಾ ಇತರ ಸುಂಕಗಳಿಗೆ ಹೊಂದಾಣಿಕೆ ಮಾಡತಕ್ಕದ್ದು.

(ii) ಸಾಕಷ್ಟು ಕಾರಣಕ್ಕಾಗಿ, ಮೇಲ್ಮನವಿ ಪ್ರಾಧಿಕಾರವು ತನ್ನ ವಿವೇಚನೆ ಅನುಸಾರ ಮೂವತ್ತು ದಿನಗಳವರೆಗೆ ಮೇಲ್ಮನವಿಯನ್ನು ಸಲ್ಲಿಸುವ ವಿಳಂಬವನ್ನು ಕ್ಷಮಿಸಬಹುದು;

(iii) ಮೇಲ್ಮನವಿ ಪ್ರಾಧಿಕಾರವು, ಸಾಧ್ಯವಾದಷ್ಟರ ಮಟ್ಟಿಗೆ, ನಾಲ್ಕು ವಾರಗಳೊಳಗೆ ಮೇಲ್ಮನವಿಯನ್ನು ತೀರ್ಮಾನಿಸತಕ್ಕದ್ದು; ಮತ್ತು

(iv) ಯಾವುದೇ ವೇದಿಕೆಯಲ್ಲಿ ಮೇಲ್ಮನವಿ ಬಾಕಿ ಇರುವ ಸಮಯದಲ್ಲಿ, ಜಾಹೀರಾತು ಫಲಕಗಳ ಮಾಲೀಕನು ಅಥವಾ ಪರವಾನಗಿ ಧಾರಕನು ಸಂಬಂಧಪಟ್ಟ ಜಾಹೀರಾತು ಫಲಕದ ಮೇಲೆ ಯಾವುದೇ ಜಾಹೀರಾತನ್ನು ಪ್ರದರ್ಶಿಸತಕ್ಕದ್ದಲ್ಲ.

11. ಪರವಾನಗಿ ನವೀಕರಣ.-ಈ ನಿಯಮಗಳಡಿಯಲ್ಲಿ ನೀಡಲಾದ ಪ್ರತಿಯೊಂದು ಪರವಾನಗಿಯನ್ನು ಅದರ ಅವಧಿ ಮುಗಿಯುವ ಮೂರು ತಿಂಗಳ ಮೊದಲು ನವೀಕರಿಸಬಹುದು ಮತ್ತು ಅದು ಈಗಾಗಲೇ ಅವಧಿ ಮುಗಿದಿದ್ದರೆ ತಕ್ಷಣವೇ ನವೀಕರಿಸಬಹುದು. ಪರವಾನಗಿ ನವೀಕರಣಕ್ಕಾಗಿ ಅರ್ಜಿಯನ್ನು ಪರವಾನಗಿ ಅವಧಿ ಮುಗಿಯುವ ದಿನಾಂಕಕ್ಕೆ ಮೂರು ತಿಂಗಳ ಮೊದಲು ಆಯುಕ್ತರಿಗೆ ನಮೂನೆ-1ರಲ್ಲಿ ಸಲ್ಲಿಸತಕ್ಕದ್ದು ಮತ್ತು ಪರವಾನಗಿ ನೀಡಿಕೆಗೆ ಅನ್ವಯವಾಗುವ ಉಪಬಂಧಗಳು ಪರವಾನಗಿ ನವೀಕರಣಕ್ಕೆ ಯಥೋಚಿತವಾಗಿ ಅನ್ವಯವಾಗತಕ್ಕದ್ದು. ಪರವಾನಗಿಗಾಗಿ ನಿರ್ದಿಷ್ಟಪಡಿಸಿದ ಶುಲ್ಕ ಮತ್ತು ಭದ್ರತಾ ಠೇವಣಿಯೂ ನವೀಕರಣಕ್ಕೂ ಸಹ ಅನ್ವಯವಾಗತಕ್ಕದ್ದು.

12. ವಾಹನಗಳ ಮೇಲೆ/ಸಂಚಾರಿ ಪ್ರದರ್ಶನಗಳಲ್ಲಿ ಜಾಹೀರಾತನ್ನು ಪ್ರದರ್ಶಿಸುವ ವಿಧಾನ.-(1) ಆಯುಕ್ತರ ಅಥವಾ ಅವರ ಅಧಿಕೃತ ಅಧಿಕಾರಿಯ ಲಿಖಿತ ಅನುಮತಿಯಿಲ್ಲದೆ ಯಾವುದೇ ಜಾಹೀರಾತನ್ನು ಪ್ರದರ್ಶಿಸತಕ್ಕದ್ದಲ್ಲ. ಸಂಬಂಧಪಟ್ಟ ನಗರಪಾಲಿಕೆಯ ಜಾಹೀರಾತು ವಿಭಾಗಕ್ಕೆ (ಅಥವಾ ಆನ್ಲೈನ್ ವ್ಯವಸ್ಥೆಯ ಮೂಲಕ) ಸಂಚಾರಿ ಪ್ರದರ್ಶನಗಳಿಗಾಗಿ ನಮೂನೆ-V ರಲ್ಲಿ ಅರ್ಜಿಯನ್ನು ಸಲ್ಲಿಸಿದ ನಂತರ ಅನುಮೋದನೆಯನ್ನು ಪಡೆಯತಕ್ಕದ್ದು. ಗರಿಷ್ಠ ಗಾತ್ರವು ಈ ನಿಯಮಗಳು ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು. ಅನುಮೋದನೆಯನ್ನು ನಮೂನೆ-V ಎ ನಲ್ಲಿ ನೀಡತಕ್ಕದ್ದು ಮತ್ತು ನಮೂನೆ-V-ಬಿ ನಲ್ಲಿ ಕಾರಣಗಳೊಂದಿಗೆ ಅನುಮೋದನೆಯನ್ನು ತಿರಸ್ಕರಿಸತಕ್ಕದ್ದು.

(2) ಜಾಹೀರಾತನ್ನು ಸಾಗಿಸುವ (ಪ್ರದರ್ಶಿಸುವ) ಯಾವುದೇ ವಾಹನವು ಯಾವುದೇ ಜಾಹೀರಾತನ್ನು ಆಯುಕ್ತರು ಅನುಮೋದಿಸಿದ ವಿಧಾನಕ್ಕಿಂತ ಭಿನ್ನವಾದ ರೀತಿಯಲ್ಲಿ, ರೂಪದಲ್ಲಿ ಅಥವಾ ವಿಧಾನದಲ್ಲಿ ಪ್ರದರ್ಶಿಸತಕ್ಕದ್ದಲ್ಲ:

ಪರಂತು, ಅದು ಮೋಟಾರು ವಾಹನ ಅಧಿನಿಯಮ, 1988 (1988ರ ಕೇಂದ್ರ ಅಧಿನಿಯಮ 59) ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಗೆ ಅನುಗುಣವಾಗಿರತಕ್ಕದ್ದು.

(3) ಯಾವುದೇ ರಸ್ತೆ-ಮೇಲ್ಸೇತುವೆ, ರಸ್ತೆ-ಕೆಳಸೇತುವೆ ಅಥವಾ ಮೇಲ್ಸೇತುವೆ ಅಥವಾ ಸಂಚಾರ ಜಂಕ್ಷನ್ನಿನ ಹತ್ತು ಮೀಟರ್‌ಗಳ ಒಳಗೆ ಯಾವುದೇ ಸಂಚಾರಿ ಪ್ರದರ್ಶನವನ್ನು ನಿಲ್ಲಿಸಲು ಅನುಮತಿಸತಕ್ಕದ್ದಲ್ಲ.

(4) ಬಿಎಂಟಿಸಿ ಬಸ್ಸುಗಳು ಅಥವಾ ಸರ್ಕಾರಿ ಅಥವಾ ಅರೆ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಿಗೆ ಸೇರಿದ ಇತರೆ ವಾಹನಗಳಂಥ ಇತರೆ ಸಂಚಾರಿ ಮಾಧ್ಯಮಗಳಲ್ಲಿ ಜಾಹೀರಾತುಗಳನ್ನು ಪ್ರದರ್ಶಿಸುವ ಏಜೆನ್ಸಿಗಳು ಜಾಹೀರಾತನ್ನು ಪ್ರದರ್ಶಿಸುವ ಮೊದಲು ವಾಹನಗಳ ನೋಂದಣಿ ಸಂಖ್ಯೆಗಳೊಂದಿಗೆ ವಾಹನಗಳ ಪಟ್ಟಿಯನ್ನು ಮತ್ತು ಪ್ರದರ್ಶನದ ಉದ್ದೇಶಿತ ಅವಧಿಯನ್ನು ಸಂಬಂಧಪಟ್ಟ ನಗರಪಾಲಿಕೆಯ ಜಾಹೀರಾತು ವಿಭಾಗಕ್ಕೆ ಸಲ್ಲಿಸತಕ್ಕದ್ದು. ಅರ್ಜಿಯು ವಾಹನಗಳ ಸಂಖ್ಯೆ ಮತ್ತು ಪ್ರದರ್ಶನ ಅವಧಿಯನ್ನು ನೀಡುವ ವಾಹನದ ಮಾಲೀಕರಿಂದ (ಉದಾ: ಬಿ.ಎಂ.ಟಿ.ಸಿ) ನಿರಾಕ್ಷೇಪಣ ಪ್ರಮಾಣ ಪತ್ರದೊಂದಿಗೆ ಲಗತ್ತಾಗಿರತಕ್ಕದ್ದು. ಸಂಬಂಧಪಟ್ಟ ನಗರಪಾಲಿಕೆಯು ನಂತರ ಅನ್ವಯವಾಗುವ ತೆರಿಗೆಗಳನ್ನು ಲೆಕ್ಕ ಹಾಕಿ, ಅದನ್ನು ಏಜೆನ್ಸಿಗೆ ಲಿಖಿತದಲ್ಲಿ ತಿಳಿಸುತ್ತದೆ. ಈ ಮಾಹಿತಿಯನ್ನು ವಾಹನದ ಮಾಲೀಕರು ಸಹ ಸಲ್ಲಿಸಬಹುದು ಮತ್ತು ಪಾವತಿಸಬೇಕಾದ ಜಾಹೀರಾತು ಶುಲ್ಕವನ್ನು ವಾಹನದ ಮಾಲೀಕರಾಗಲಿ ಅಥವಾ ಜಾಹೀರಾತುದಾರರಾಗಲಿ ಪಾವತಿಸಬಹುದು.

(5) ಜಾಹೀರಾತು ಶುಲ್ಕವು ಈ ಸಂಬಂಧದಲ್ಲಿನ ಅನುಮತಿಗನುಸಾರವಾಗಿಇರತಕ್ಕದ್ದು ಮತ್ತು ಜಾಹೀರಾತುದಾರ ಅಥವಾ ವಾಹನದ ಮಾಲೀಕರು ಜಾಹೀರಾತು ಶುಲ್ಕವನ್ನು ಪಾವತಿಸಲು ಹೊಣೆಗಾರರಾಗತಕ್ಕದ್ದು ಮತ್ತು ಪ್ರತಿ ತಿಂಗಳ ಅದನ್ನು ಬಾಕಿಯಾಗುವ ಏಳು ದಿನಗಳೊಳಗೆ ಅದನ್ನು ಜಮಾ ಮಾಡತಕ್ಕದ್ದು. ಜಾಹೀರಾತು ಶುಲ್ಕವನ್ನು ಪಾವತಿಸುವಲ್ಲಿ ವಿಫಲವಾದರೆ, ಈ ನಿಯಮಗಳ ಅಡಿಯಲ್ಲಿ ಜಾಹೀರಾತು ಶುಲ್ಕವನ್ನು ಬಡ್ಡಿಯೊಂದಿಗೆ ವಸೂಲಿ ಮಾಡುವ ಉಪಬಂಧಗಳಿಗನುಸಾರವಾಗಿ ಅದನ್ನು ವಸೂಲಿ ಮಾಡತಕ್ಕದ್ದು.

(6) ಈ ನಿಯಮಗಳ ಅನುಸಾರ ಜಾಹೀರಾತುಗಳನ್ನು ಪ್ರದರ್ಶಿಸಲು ಅನುಮತಿಸಲಾದ ವಾಹನಗಳು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಅದರ ಸಂಖ್ಯೆ ಮತ್ತು ಏಜೆನ್ಸಿಯ ಹೆಸರಿನೊಂದಿಗೆ ಅನುಮತಿ ಆದೇಶವನ್ನು ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

(7) ಸಂಚಾರಿ ಜಾಹೀರಾತುಗಳು ತಯಾರಕರ ಉತ್ಪನ್ನಗಳನ್ನು ಸಾಗಿಸುವ ವಾಹನಗಳನ್ನು ಒಳಗೊಂಡಿರುತ್ತವೆ. ಆದಾಗ್ಯೂ, ಅಂತಹ ಸಂದರ್ಭಗಳಲ್ಲಿ, ಜಾಹೀರಾತುಗಳನ್ನು ಸ್ವಯಂ-ಜಾಹೀರಾತುಗಳಾಗಿ ಪರಿಗಣಿಸತಕ್ಕದ್ದು:

ಪರಂತು, ಅಂತಹ ಸ್ವಯಂ-ಜಾಹೀರಾತಿಗೆ ಆಯುಕ್ತರ ಪೂರ್ವಾನುಮತಿ ಅಗತ್ಯವಿರುತ್ತದೆ ಮತ್ತು ಜಾಹೀರಾತು ತೆರಿಗೆಯ ದರವು ಸಂಚಾರಿ ಜಾಹೀರಾತುಗಳಿಗೆ ಸಮನಾಗಿರುತ್ತದೆ.

(8) ಸಂಚಾರಿ ಜಾಹೀರಾತುಗಳು, ಆಯುಕ್ತರ ವಿವೇಚನಾನುಸಾರ, ಅವರ ಅಭಿಪ್ರಾಯದಲ್ಲಿ ಸಂಚಾರ ದಟ್ಟಣೆ ಅಥವಾ ಅಡಚಣೆಗೆ ಕಾರಣವಾಗುತ್ತವೆ ಅಥವಾ ಅರ್ಜಿ ಸಲ್ಲಿಸಲಾದ ಸ್ಥಳಗಳು ಜನದಟ್ಟಣೆಯ ವಾಣಿಜ್ಯ ಸ್ಥಳಗಳಲ್ಲಿವೆ ಎಂದು ಅಭಿಪ್ರಾಯಪಟ್ಟರೆ, ಅವುಗಳನ್ನು ನಿರಾಕರಿಸಬಹುದು.

13. ಅನುಮತಿಯಿಲ್ಲದೆ ಜಾಹೀರಾತಿನ ಪ್ರದರ್ಶನ ಫಲಕದ ಅಳವಡಿಕೆ, ಪ್ರದರ್ಶನ, ಸ್ಥಾಪಿಸುವುದು ಮತ್ತು ಉಳಿಸಿಕೊಂಡಿರುವುದರ ಮೇಲೆ ನಿರ್ಬಂಧ.-ಯಾರೇ ವ್ಯಕ್ತಿಯು ಆಯುಕ್ತರ ಪೂರ್ವ ಲಿಖಿತ ಅನುಮತಿಯಿಲ್ಲದೆ ಸಂಬಂಧಪಟ್ಟ ನಗರಪಾಲಿಕೆಯ ಅಧಿಕಾರ ವ್ಯಾಪ್ತಿಯೊಳಗಿನ ಯಾವುದೇ ಸ್ಥಳದಲ್ಲಿ ಯಾವುದೇ ರೀತಿಯಲ್ಲಿ ಸಾರ್ವಜನಿಕ ವೀಕ್ಷಣೆಗೆ ಯಾವುದೇ ಜಾಹೀರಾತು ಅಥವಾ ಪ್ರದರ್ಶನಗಳನ್ನು ಯಾವುದೇ ಭೂಮಿ, ಕಟ್ಟಡ, ಗೋಡೆ, ಹೋರ್ಡಿಂಗ್, ಫ್ರೇಮ್, ಪೋಸ್ಟ್, ಕಿಯೋಸ್ಕ್, ರಚನೆ, ವಾಹನ, ನಿಯಾನ್-ಸೈನ್ ಅಥವಾ ಸ್ಕೈ-ಸೈನ್ ಮೇಲೆ ಪ್ರದರ್ಶಿಸತಕ್ಕದ್ದಲ್ಲ, ನಿರ್ಮಿಸತಕ್ಕದ್ದಲ್ಲ, ಅಥವಾ ಇಟ್ಟುಕೊಳ್ಳತಕ್ಕದ್ದಲ್ಲ:

ಪರಂತು, ಆಯುಕ್ತರು ಈ ಸಂಬಂಧದಲ್ಲಿನ ಆದೇಶಗಳ ಮೂಲಕ ನಿರ್ದಿಷ್ಟವಾಗಿ ನಿಯೋಜಿಸಲಾಗಿರುವಂಥ ಅಧಿಕೃತ ಅಧಿಕಾರಿಯು ಅನುಮತಿಯನ್ನುನೀಡಬಹುದು.

14. ಜಾಹೀರಾತುಗಳ ಪ್ರದರ್ಶನ ಫಲಕಗಳ ಅಳವಡಿಕೆ, ಪ್ರದರ್ಶನ, ಸ್ಥಾಪನೆ ಉಳಿಸಿಕೊಳ್ಳುವಿಕೆಯ ನಿಷೇಧ.-(1) ಈ ಕೆಳಕಂಡ ಜಾಹೀರಾತು ಪ್ರದರ್ಶನ ಫಲಕಗಳ ಅಳವಡಿಕೆ, ಪ್ರದರ್ಶನ, ಸ್ಥಾಪನೆ ಅಥವಾ ಉಳಿಸಿಕೊಂಡಿರುವಿಕೆಯನ್ನು ನಿಷೇಧಿಸತಕ್ಕದ್ದು, ಎಂದರೆ:-

(1) ವಾಣಿಜ್ಯ ಜಾಹೀರಾತನ್ನು ಪ್ರರ್ದಶಿಸಲು ಸದರಿ ಸಂಸ್ಥೆಗಳಿಂದ ಪ್ರತ್ಯೇಕವಾದ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪಡೆಯದ ಹೊರತು, ದೇವಾಲಯಗಳು, ಮಸೀದಿಗಳು, ಗುರುದ್ವಾರಗಳು, ಚರ್ಚುಗಳು ಮತ್ತು ಅಂತಹ ಇತರ ಧಾರ್ಮಿಕ ಸ್ಥಳಗಳು ಇರುವ ರಸ್ತೆಗಳ ಮಧ್ಯದಿಂದ ಅಳತೆ ಮಾಡಿದಾಗ ಧಾರ್ಮಿಕ ಸ್ಥಳಗಳಿಂದ ಐವತ್ತು (50 ಮೀ) ಮೀಟರ್‌ಗಳ ಒಳಗೆ ಮತ್ತು ದೇವಾಲಯಗಳು, ಚರ್ಚುಗಳು, ಮಸೀದಿಗಳು ಮತ್ತು ಗುರುದ್ವಾರಗಳಿಗೆ ಪ್ರತ್ಯೇಕವಾಗಿ ಹೋಗುವ ರಸ್ತೆಗಳಲ್ಲಿ ಧಾರ್ಮಿಕ ಸ್ಥಳಗಳಿಂದ ನೂರು (100ಮೀ) ಮೀಟರ್‌ಗಳ ಒಳಗೆ ಜಾಹೀರಾತನ್ನು ನಿಷೇಧಿಸತಕ್ಕದ್ದು;

(2) ಯಾವುದೇ ಮೇಲ್ಸೇತುವೆ, ರೈಲ್ವೆ ಮೇಲ್ಸೇತುವೆ, ಎಲಿವೇಟೆಡ್ ಕಾರಿಡಾರ್, ಸಂವಹನ ಗೋಪುರ ಮತ್ತು ಕಟ್ಟಡಗಳ ಅಂಚಿನ ಐದು ಮೀಟರ್‌ಗಳ ಒಳಗೆ ಮತ್ತು

ಭೂಮಿಯ ಮೇಲೆ ನಿರ್ಮಿಸಿರುವ ಬಿಡಬ್ಲ್ಯುಎಸ್ಎಸ್‌ಬಿ ನೀರಿನ ಟ್ಯಾಂಕ್ ಮತ್ತು ಪ್ರಸರಣ ಗೋಪುರದಿಂದ ಹದಿನೈದು ಮೀಟರ್‌ಗಳ ಒಳಗೆ ಜಾಹೀರಾತನ್ನು ನಿಷೇಧಿಸತಕ್ಕದ್ದು.

(3) ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಸಾರ್ವಜನಿಕ ಹಿತಾಸಕ್ತಿಯಿಂದ ಕಾಲಕಾಲಕ್ಕೆ ಆಯುಕ್ತರು ನಿರ್ಧರಿಸಬಹುದಾದ ಯಾವುದೇ ರಸ್ತೆ, ಬೀದಿ, ಕ್ರಾಸಿಂಗ್, ಜಂಕ್ಷನ್, ಸ್ಥಳ, ಪ್ರದೇಶ, ಕ್ಷೇತ್ರ ಅಥವಾ ಅದರ ಭಾಗದ ಮೇಲೆ, ಜಾಹೀರಾತು ನೀಡುವುದನ್ನು ನಿಷೇಧಿಸತಕ್ಕದ್ದು.

(4) ವಿಶ್ವ ಪಾರಂಪರಿಕ ತಾಣಗಳಲ್ಲಿ ನಿಷೇಧಿಸತಕ್ಕದ್ದು;

(5) ರಾಷ್ಟ್ರೀಯ ಉದ್ಯಾನವನಗಳು, ಅರಣ್ಯಗಳು ಮತ್ತು ಜಲಮೂಲಗಳಲ್ಲಿ ಜಾಹೀರಾತನ್ನು ನಿಷೇಧಿಸತಕ್ಕದು.

(6) ಅಳಿವಿನಂಚಿನಲ್ಲಿರುವ ಪ್ರಾದೇಶಿಕ ಪರಿಸರ ವ್ಯವಸ್ಥೆಗಳ ಅವಶೇಷಗಳೆಂದು ವರ್ಗೀಕರಿಸಲಾದ ಪ್ರದೇಶಗಳಲ್ಲಿ ಜಾಹೀರಾತನ್ನು ನಿಷೇಧಿಸತಕ್ಕದ್ದು.

(7) ಸೌಲಭ್ಯಗಳಿಗೆ ಹಾನಿಯುಂಟುಮಾಡುವ ಅಥವಾ ಯಾವುದೇ ಐತಿಹಾಸಿಕ ಸಾರ್ವಜನಿಕ ಕಟ್ಟಡ ಅಥವಾ ರಾಷ್ಟ್ರೀಯ ಪ್ರಾಮುಖ್ಯತೆಯ ಕಟ್ಟಡಗಳು, ಸ್ಮಾರಕ ಇತ್ಯಾದಿಗಳ ವೀಕ್ಷಣೆಗೆ ಅಡ್ಡಿಯುಂಟುಮಾಡುವ ಯಾವುದೇ ಜಾಹೀರಾತು ನೀಡುವುದನ್ನು ನಿಷೇಧಿಸತಕ್ಕದ್ದು.

(8) ಸಾರ್ವಜನಿಕ ಸುರಕ್ಷತೆಗೆ ಅಪಾಯ ತಂದೊಡ್ಡಬಹುದಾದ ರೀತಿಯಲ್ಲಿ ವಾಹನ ಚಾಲಕರ ಏಕಾಗ್ರತೆಗೆ ಭಂಗವನ್ನುಂಟುಮಾಡುವ ಜಾಹೀರಾತನ್ನು ನಿಷೇಧಿಸತಕ್ಕದ್ದು.

(9) ಟ್ರಾಫಿಕ್ ಸಿಗ್ನಲ್ ಅನ್ನು ಹೋಲುವಂತೆ ಕೆಂಪು, ಹಸಿರು ಅಥವಾ ಹಳದಿ ಬಣ್ಣದಲ್ಲಿ ಬೆಳಗುವ ಚಿಹ್ನೆಗಳನ್ನು ಒಳಗೊಂಡಂತೆ ಯಾವುದೇ ಅಧಿಕೃತ ಟ್ರಾಫಿಕ್ ಚಿಹ್ನೆ, ಸಿಗ್ನಲ್ ಅಥವಾ ಸಾಧನವನ್ನು ಅದರ ಸ್ಥಾನ, ಆಕಾರ ಅಥವಾ ಬಣ್ಣದ ಕಾರಣದಿಂದಾಗಿ ವ್ಯತಿಕರಿಸುವ, ಅಡ್ಡಿಪಡಿಸುವ ಅಥವಾ ಗೊಂದಲಕ್ಕೊಳಗಾಗಬಹುದಾದ ಜಾಹೀರಾತುಗಳು ಮತ್ತು STOP, LOOK,DETOUR, DANGER, CAUTION, WARNING ಅಥವಾ ಅಂತಹ ಇತರ ಪದ, ಪದಗುಚ್ಛ, ಚಿಹ್ನೆ ಅಥವಾ ಅಕ್ಷರವನ್ನು ಬಳಸುವ ಜಾಹೀರಾತುಗಳು ಅಧಿಕೃತ ಟ್ರಾಫಿಕ್ ಸಂದೇಶದೊಂದಿಗೆ ದಾರಿ ತಪ್ಪಿಸುವ, ಅಡ್ಡಿಪಡಿಸುವ ಅಥವಾ ಗೊಂದಲಕ್ಕಿಡುಮಾಡುವ ರೀತಿಯಲ್ಲಿ ಜಾಹೀರಾತು ನೀಡುವುದನ್ನು ನಿಷೇಧಿಸತಕ್ಕದ್ದು.

(10) ಅನುಸೂಚಿ-1ರಲ್ಲಿ ಪಟ್ಟಿ ಮಾಡಲಾದವುಗಳನ್ನು ಒಳಗೊಂಡಂತೆ ಯಾವುದೇ ನಿಷೇಧಿತ ಸ್ಥಳಗಳಲ್ಲಿ ಪ್ರಸ್ತಾಪಿತ ಜಾಹೀರಾತು ನಿಷೇಧಿಸತಕ್ಕದ್ದು.

ಪರಂತು, ಆಯುಕ್ತರು ಅವಶ್ಯವೆಂದು ಭಾವಿಸುವಂತ ಹೆಚ್ಚಿನ ಪ್ರದೇಶಗಳು ಅಥವಾ ತಾಣಗಳು ಅಥವಾ ಸ್ಥಳಗಳನ್ನು ಅನುಸೂಚಿ-1ರಲ್ಲಿ ಸೇರಿಸಬಹುದು.

(11) ನಗರವನ್ನು ವಿರೂಪಗೊಳಿಸಲಿಕ್ಕೆ ಕಾರಣವಾಗಬಹುದಾದ ಮತ್ತು ನಗರದ ಸೌಂದರ್ಯಕ್ಕೆ ಧಕ್ಕೆ ತರಬಹುದಾದಂಥ ಭಿತ್ತಿಪತ್ರಗಳು, ಗೀಚುಬರಹಗಳು ಅಥವಾ ಯಾವುದೇ ರೀತಿಯ ಜಾಹೀರಾತಿನ ಪ್ರದರ್ಶಿಸುವುದನ್ನು ನಿಷೇಧಿಸತಕ್ಕದ್ದು.

(12) ಯಾವುದೇ ಮರದ ಮೇಲೆ ಅಂಟಿಸಲಾದ, ಮೊಳೆ ಹೊಡೆದ, ಕಟ್ಟಿದ, ಲಗತ್ತಿಸಿದ, ಜೋಡಿಸಿದ ಯಾವುದೇ ಜಾಹೀರಾತಿನ ಮೂಲಕ ಅಥವಾ ಯಾವುದೇ ಇತರ ರೀತಿಯ ಜಾಹೀರಾತಿನ ಮೂಲಕ ಜಾಹೀರಾತು ನೀಡುವಂತೆ ಮಾಡುವುದನ್ನು ನಿಷೇಧಿಸತಕ್ಕದ್ದು.

(13) ಪ್ರಾಣಿಗಳು, ಪ್ರಾಣಿಗಳು ಎಳೆಯುವ ವಾಹನಗಳು ಅಥವಾ ಗಾಡಿಗಳ ಮೇಲೆ ಜಾಹೀರಾತುಗಳನ್ನು ಒಯ್ಯುವುದು ಅಥವಾ ಜಾಹೀರಾತು ನೀಡಲು ಜೀವಂತ ಪ್ರಾಣಿಗಳನ್ನು ಬಳಸುವುದನ್ನು ನಿಷೇಧಿಸತಕ್ಕದ್ದು.

(14) ಜಾಹೀರಾತಿನ ಋಣಾತ್ಮಕ ಪಟ್ಟಿಯು ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ ಎಂದರೆ:–

(ಎ) ನಗ್ನತೆ;

(ಬಿ) ಜನಾಂಗೀಯ ಜಾಹೀರಾತುಗಳು ಅಥವಾ ಜಾತಿ, ಸಮುದಾಯ ಅಥವಾ ಜನಾಂಗೀಯ ಭಿನ್ನತೆಗಳನ್ನು ಪ್ರಚಾರ ಮಾಡುವ ಜಾಹೀರಾತುಗಳು.

(ಸಿ) ಮಾದಕ ವಸ್ತುಗಳು, ಮದ್ಯ, ಸಿಗರೇಟ್ ಅಥವಾ ತಂಬಾಕು ಪದಾರ್ಥಗಳನ್ನು ಉತ್ತೇಜಿಸುವ ಜಾಹೀರಾತು;

(ಡಿ) ಮಹಿಳೆಯರು ಅಥವಾ ಮಕ್ಕಳ ಶೋಷಣೆಯನ್ನು ಪ್ರಚಾರ ಮಾಡುವ ಜಾಹೀರಾತುಗಳು;

(ಇ) ಲೈಂಗಿಕ ಸೂಚ್ಯರ್ಥವನ್ನು ಹೊಂದಿರುವ ಜಾಹೀರಾತು;

(ಎಫ್) ಪ್ರಾಣಿಗಳ ಮೇಲಿನ ಕ್ರೌರ್ಯವನ್ನು ಚಿತ್ರಿಸುವ ಜಾಹೀರಾತು;

(ಜಿ) ಯಾವುದೇ ರಾಷ್ಟ್ರ, ಅಥವಾ ಸಂಸ್ಥೆಯನ್ನು ಕೆಟ್ಟದಾಗಿ ಚಿತ್ರಿಸುವ ಜಾಹೀರಾತು;

(ಎಚ್) ಯಾವುದೇ ಬ್ರ್ಯಾಂಡ್ ಅಥವಾ ಯಾವುದೇ ವ್ಯಕ್ತಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸುವ ಜಾಹೀರಾತು;

(ಐ) ಭಾರತೀಯ ಜಾಹೀರಾತು ಪರಿಷತ್ತು ಅಥವಾ ಕಾನೂನಿನ ಮೂಲಕ ನಿಷೇಧಿಸಲಾದ ಜಾಹೀರಾತು;

(ಜೆ) ಹಿಂಸಾಚಾರವನ್ನು ವೈಭವೀಕರಿಸುವ ಜಾಹೀರಾತು;

(ಕೆ) ವಿನಾಶಕಾರಿ ಸಾಧನಗಳು ಮತ್ತು ಸ್ಫೋಟಕಗಳನ್ನು ಚಿತ್ರಿಸುವ ವಸ್ತುಗಳು;

(ಎಲ್) ಲಾಟರಿ ಟಿಕೆಟ್‌ಗಳು, ಬಾಜಿ ನಮೂದುಗಳು ಮತ್ತು ಸ್ಲಾಟ್ ಯಂತ್ರಗಳಿಗೆ ಸಂಬಂಧಿಸಿದ ಜಾಹೀರಾತುಗಳು;

(ಎಂ) ಯಾವುದೇ ವಿಲಕ್ಷಣ ಮತಿ ಭ್ರಾಂತಿ ಜನಕ, ಲೇಸರ್ ಅಥವಾ ಚಲಿಸುವ ಪ್ರದರ್ಶನಗಳು;

(ಎನ್) ಶಸ್ತ್ರಾಸ್ತ್ರಗಳು ಮತ್ತು ಸಂಬಂಧಿತ ವಸ್ತುಗಳ (ಬಂದೂಕುಗಳು, ಬಂದೂಕಿನ ಭಾಗಗಳು ಮತ್ತು ಬಂದೂಕಿನ ತೋಟಾಗಳು, ಮದ್ದುಗುಂಡುಗಳು ಇತ್ಯಾದಿ) ಜಾಹೀರಾತು;

(ಒ) ಮಾನಹಾನಿಕರವಾದ, ವಾಣಿಜ್ಯ ಅಪಪ್ರಚಾರ, ಕಾನೂನುಬಾಹಿರವಾಗಿ ಬೆದರಿಕೆ ಹಾಕುವ ಅಥವಾ ಕಾನೂನುಬಾಹಿರವಾಗಿ ಕಿರುಕುಳ ನೀಡುವ ಜಾಹೀರಾತುಗಳು;

(ಪಿ) ಮಹಿಳಾ ಅಸಭ್ಯ ರೂಪಣಾ (ನಿಷೇಧ) ಅಧಿನಿಯಮ, 1986 (1986ರ ಕೇಂದ್ರ ಅಧಿನಿಯಮ ಸಂಖ್ಯೆ 60) ರ ಅರ್ಥವ್ಯಾಪ್ತಿಯಳಗೆ ಬರುವ ಅಶ್ಲೀಲವಾಗಿರಬಹುದಾದ ಅಥವಾ ಕಾಮ ಪ್ರಚೋದಕ ಅಂಶಗಳನ್ನು ಒಳಗೊಂಡಿರಬಹುದಾದ "ಮಹಿಳೆಯರ ಅಸಭ್ಯ ರೂಪಣಾ" ವನ್ನು ಒಳಗೊಂಡಿರಬಹುದಾದ ಜಾಹೀರಾತುಗಳು.

(ಕ್ಯೂ) ಔಷಧ ಮತ್ತು ಪ್ರಸಾಧನ ಸಾಮಗ್ರಿ ಅಧಿನಿಯಮ, 1940 (1940ರ ಕೇಂದ್ರ ಅಧಿನಿಯಮ 23), ಔಷಧಗಳು ಮತ್ತು ಮಾಂತ್ರಿಕ ಪರಿಹಾರಗಳ (ಆಕ್ಷೇಪಾರ್ಹ ಜಾಹೀರಾತುಗಳು) ಅಧಿನಿಯಮ, 1954 (1954ರ ಕೇಂದ್ರ ಅಧಿನಿಯಮ 21) ಮತ್ತು ಭಾರತೀಯ ದಂಡ ಸಂಹಿತೆ, 1860 (1860ರ ಕೇಂದ್ರ ಅಧಿನಿಯಮ 45) ಸೇರಿದಂತೆ ಆದರೆ ಅವುಗಳಿಗೆ ಸೀಮಿತವಾಗದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅನ್ವಯವಾಗುವ ಕಾನೂನಿನ ಅಡಿಯಲ್ಲಿ ನಿಷೇಧಿಸಲಾದ ವಸ್ತುಗಳು, ಸರಕುಗಳು ಅಥವಾ ಸೇವೆಗಳ ವಿವರಣೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂಬಂಧಿಸಿದ ಅಥವಾ ಅವುಗಳ ವಿವರಣೆಯನ್ನು ಒಳಗೊಂಡಿರುವ ಜಾಹೀರಾತು; ಅಥವಾ

(ಆರ್) ಜಾಹೀರಾತು ನಿಯಂತ್ರಣ ಸಮಿತಿಯು ಸೂಕ್ತವಲ್ಲವೆಂದು ಪರಿಗಣಿಸಿದ ಯಾವುದೇ ಇತರ ವಿಷಯ ವಸ್ತುಗಳು.

(2) ಯಾವುದೇ ಜಾಹೀರಾತು ಈ ಹಿಂದಿನ ಖಂಡಗಳ ಅಡಿಯಲ್ಲಿ ಬರುತ್ತದೆಯೋ ಇಲ್ಲವೋ ಎಂಬುದನ್ನು ವಿಶೇಷ/ ಅಪರ ಆಯುಕ್ತರು(ಜಾಹೀರಾತುಗಳು) ಅಥವಾ ವಲಯ ಜಂಟಿ ಆಯುಕ್ತರು ನಿರ್ಧರಿಸತಕ್ಕದ್ದು.

15. ಜಾಹೀರಾತು ಫಲಕಗಳು ಮತ್ತು ಜಾಹೀರಾತುಗಳ ಪ್ರದರ್ಶನಕ್ಕೆ ನಿರ್ಬಂಧಗಳು.-(1) ಪ್ರತಿ ಸಂಪರ್ಕ ರಸ್ತೆಯ ನಿಲುಗಡೆ ರೇಖೆಯಿಂದ ಹತ್ತು ಮೀಟರ್ ಅಂತರದ ಛೇದಕದಲ್ಲಿ ಯಾವುದೇ ಜಾಹೀರಾತು ಫಲಕವನ್ನು ಹಾಕಲು ಅನುಮತಿಸತಕ್ಕದ್ದಲ್ಲ.

(2) ಸಾರ್ವಜನಿಕ ಮನರಂಜನಾ ಮೈದಾನಗಳು, ಆಟದ ಮೈದಾನಗಳು, ಉದ್ಯಾನಗಳು ಮತ್ತು ಉದ್ಯಾನವನಗಳು ಸೇರಿದಂತೆ ಅಧಿನಿಯಮ ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳಉಪಬಂಧಗಳ ಅಡಿಯಲ್ಲಿ ನಿರ್ವಹಿಸುವುದು ಅಗತ್ಯವಾಗಿರುವ ಕಡ್ಡಾಯ ಬಯಲು ಸ್ಥಳದಲ್ಲಿ ಯಾವುದೇ ಜಾಹೀರಾತು ಫಲಕಗಳನ್ನು ನಿರ್ಮಿಸಲು ಅನುಮತಿಸತಕ್ಕದ್ದಲ್ಲ.

(3) ಪುರಾತತ್ವ, ವಾಸ್ತುಶೈಲೀಯ, ಕಲಾತ್ಮಕ ಮತ್ತು ಐತಿಹಾಸಿಕ ಹಾಗೂ ಪಾರಂಪರಿಕ ಪ್ರಾಮುಖ್ಯತೆಯುಳ್ಳ ಕಟ್ಟಡಗಳ ಮೇಲೆ ಯಾವುದೇ ಜಾಹೀರಾತು ಫಲಕಗಳನ್ನು ಅನುಮತಿಸತಕ್ಕದ್ದಲ್ಲ.

(4) ನದಿ ತಟಗಳು, ಸರೋವರಗಳು ಮತ್ತು ಜಲಮೂಲಗಳಲ್ಲಿ ಯಾವುದೇ ಜಾಹೀರಾತು ಫಲಕಗಳನ್ನು ಹಾಕಲು ಅನುಮತಿಸತಕ್ಕದ್ದಲ್ಲ.

(5) ನಿಯಮಗಳನ್ನು ಉಲ್ಲಂಘಿಸಿ ಅಥವಾ ಮಾಲಿನ್ಯ ನಿಯಂತ್ರಣ ನಿಯಮಾವಳಿಗಳನ್ನು ಅಥವಾ ಈ ಸಂಬಂಧದಲ್ಲಿನ ಸಕ್ಷಮ ಪ್ರಾಧಿಕಾರದ ಆದೇಶಗಳನ್ನು ಉಲ್ಲಂಘಿಸಿಪ್ರದರ್ಶಿಸಲಾಗಿರುವ ಜಾಹೀರಾತುಗಳನ್ನು ಅನುಮತಿಸಲಾಗುವುದಿಲ್ಲ ಮತ್ತು ಅವುಗಳನ್ನು ತೆರವುಗೊಳಿಸಲಾಗುವುದು ಹಾಗೂ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನುಗಳು, ನಿಯಮಗಳು ಹಾಗೂ ಆದೇಶಗಳನ್ವಯ ಕಾನೂನು ಕ್ರಮಕ್ಕೆ ಒಳಪಡಿಸತಕ್ಕದ್ದು.

(6) ಪ್ರಕಾಶಮಾನವಾದ ಅಥವಾ ನಿಯಾನ್-ಸೈನ್ ಜಾಹೀರಾತು ಫಲಕಗಳ ಸಂದರ್ಭದಲ್ಲಿ, ಈ ಕೆಳಕಂಡ ನಿರ್ಬಂಧಗಳನ್ನು ವಿಧಿಸತಕ್ಕದ್ದು, ಎಂದರೆ –

(i) ಬೆಳಕಿನ ಮಟ್ಟವು 1ಆರ್‌ಡಿ/ ಚದರ ಸೆಂ. ಮೀ. ಮೂಲ ಮಿತಿಯನ್ನು ಮೀರಬಾರದು ಮತ್ತು ಆಯುಕ್ತರು ಆದೇಶಿಸಬಹುದದಂಥ ವಸತಿ ಪ್ರದೇಶ ಅಥವಾ ಅಂಥ ಸಮಯಗಳಲ್ಲಿ ರಾತ್ರಿ 11.00 ಗಂಟೆಯನಂತರ ಬೆಳಕನ್ನು ಮುಂದುವರಿಸಬಾರದು.

(ii) ವಸತಿ ಆವರಣದಲ್ಲಿರುವ ನಿಯಾನ್-ಚಿಹೆ ಗಳು ಮಿನುಗುವಂತಿರಬಾರದು.

(iii) ಯಾವುದೇ ವೀಡಿಯೊ ಅಥವಾ ಚಲಿಸುವ ಡಿಜಿಟಲ್ ಜಾಹೀರಾತುಗಳನ್ನು ಅನುಮತಿಸಲಾಗುವುದಿಲ್ಲ ಮತ್ತು ಎಲ್‌ಇಡಿ ಪ್ರದರ್ಶನಗಳು ಇತ್ಯಾದಿಗಳು ಸ್ತಬ್ಧವಾಗಿದ್ದು, ಕನಿಷ್ಠ ಹತ್ತು ಸೆಕೆಂಡುಗಳ ನಂತರ ಮಾತ್ರ ಚಿತ್ರಗಳನ್ನು ಬದಲಾಯಿಸಲು ಅನುಮತಿಸಲಾಗುತ್ತದೆ. ಅಲ್ಲದೆ ಜಾಹೀರಾತು ನಿಯಂತ್ರಣ ಸಮಿತಿಯ ಅನುಮೋದನೆಯೊಂದಿಗೆ ಈ ನಿಬಂಧನೆಗಳನ್ನು ಸೂಕ್ತವಾಗಿ ಮಾರ್ಪಾಡಿಸಬಹುದು.

(7) ರಸ್ತೆಗಳಲ್ಲಿ ಅಥವಾ ವೃತ್ತಗಳಲ್ಲಿ ಸಂಚಾರ ದೀಪಗಳು ಅಥವಾ ಹೈ ಮಾಸ್ಟ್ ದೀಪಗಳು ಅಥವಾ ಬೀದಿ ದೀಪಗಳು ಅಥವಾ ವಿದ್ಯುತ್ ಕಂಬಗಳ ಮೇಲೆ ಯಾವುದೇ ಜಾಹೀರಾತನ್ನು ಹಾಕಲು ಅನುಮತಿಸತಕ್ಕದ್ದಲ್ಲ.

(8) ಯಾವುದೇ ಆವರಣದ ಬೆಳಕು ಅಥವಾ ವಾತಾಯನ ವ್ಯವಸ್ಥೆಗೆ ಅಡ್ಡಿಯಾಗುವ ಯಾವುದೇ ಜಾಹೀರಾತು ಫಲಕಗಳನ್ನು ಹಾಕಲು ಅನುಮತಿಸತಕ್ಕದ್ದಲ್ಲ.

(9) ಯಾವುದೇ ಜಮೀನು ಅಥವಾ ಕಟ್ಟಡದ ಮೇಲೆ ಅಳವಡಿಸಲಾದ ಯಾವುದೇ ಜಾಹೀರಾತುಗಳು ಸಾರ್ವಜನಿಕ ಸ್ಥಳಗಳಿಂದ ಅಥವಾ ಸಾರ್ವಜನಿಕರಿಗೆ ಕಾಣುವಂತಿದ್ದರೆ, ಅಂತಹ ಜಾಹೀರಾತುಗಳು ಈ ನಿಯಮಗಳ ಮೂಲಕ ನಿಯಂತ್ರಿಸತಕ್ಕದ್ದು.

(10) ಅಧಿನಿಯಮ ಮತ್ತು ಈ ನಿಯಮಗಳ ಇತರ ಉಪಬಂಧಗಳಿಗೆ ಒಳಪಟ್ಟು ಸುತ್ತುವ ನಿಯಾನ್ ಅಥವಾ ಡಿಜಿಟಲ್ ಜಾಹೀರಾತುಗಳನ್ನು ಹೊರತುಪಡಿಸಿ ಯಾವುದೇ ಕಟ್ಟಡದ ಪಾಳು ಗೋಡೆಗಳ ಮೇಲಲ್ಲದೆ ಬೇರೆ ಗೋಡೆಗಳ ಮೇಲೆ ಯಾವುದೇ ಜಾಹೀರಾತು ಫಲಕಗಳನ್ನು ನಿರ್ಮಿಸಲು ಅನುಮತಿಸತಕ್ಕದ್ದಲ್ಲ.

(11) ಡೀಸಲ್ ಜನರೇಟರ್ ಸೆಟ್‌ಗಳು ಶಬ್ದಮಾಲಿನ್ಯ ಮತ್ತು ವಾಯು ಮಾಲಿನ್ಯವನ್ನು ಉಂಟುಮಾಡುವುದರಿಂದ ಜಾಹೀರಾತು ಫಲಕಗಳನ್ನು ಬೆಳಗಿಸಲು ಯಾವುದೇ ಡೀಸೆಲ್ ಜನರೇಟರ್ ಸೆಟ್ಟುಗಳಿಗೆ ಅವಕಾಶ ನೀಡತಕ್ಕದ್ದಲ್ಲ.

(12) ರಸ್ತೆ ಮಟ್ಟದಿಂದ 30.0 ಮೀಟರ್ ಗಿಂತ ಹೆಚ್ಚು ಎತ್ತರದಲ್ಲಿ ಯಾವುದೇ ಜಾಹೀರಾತು ಫಲಕವನ್ನು ನಿರ್ಮಿಸತಕ್ಕದ್ದಲ್ಲ.

(13) ಪಾದಚಾರಿಗಳಿಗೆ ಯಾವುದೇ ಅಡಚಣೆ ಅಥವಾ ತೊಂದರೆಯನ್ನು ಉಂಟುಮಾಡದೆ, ಪಾದಚಾರಿಗಳ ಪ್ರಯೋಜನಕ್ಕಾಗಿ ನಗರ ಪಾಲಿಕೆಯಿಂದ ಅನುಮತಿ ಪಡೆಯದ ಹೊರತು, ಪಾದಚಾರಿ ಮಾರ್ಗದಲ್ಲಿ ಯಾವುದೇ ಜಾಹೀರಾತು ಫಲಕ ಅಥವಾ ಜಾಹೀರಾತುಗಳನ್ನು ಹಾಕತಕ್ಕದ್ದಲ್ಲ.

(14) ಸಾರ್ವಜನಿಕ ರಸ್ತೆ ಮೇಲೆ ಯಾವುದೇ ಜಾಹೀರಾತು ಫಲಕ ಮುಂಚಾಚಿಕೊಂಡಿರಬಾರದು.

(15) ಭಿತ್ತಿಚಿತ್ರದ (wall painting) ಮೂಲಕ ಜಾಹೀರಾತನ್ನು ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ.

(16) "ಬಿ" ರಚನೆಯನ್ನು ಹೊರತುಪಡಿಸಿ ಜಾಹೀರಾತು ಫಲಕಗಳನ್ನು ಸಂಯೋಜಿಸುವುದಕ್ಕೆ ಅನುಮತಿಸತಕ್ಕದ್ದಲ್ಲ.

(17) ಈ ಕೆಳಕಂಡ ಸಂದರ್ಭಗಳಲ್ಲಿ, ಎಂದರೆ:–

(ಎ) ಸಂಚಾರ ಕೂಡುವ, ವಿಲೀನಗೊಳ್ಳುವ ಅಥವಾ ಛೇದಿಸುವ ಸ್ಥಳದ ಗೋಚರತೆಗೆ ಅಡ್ಡಿಯುಂಟುಮಾಡುವ ಅಥವಾ ಅಡ್ಡಿಪಡಿಸುವಂತಹ ರೀತಿಯಲ್ಲಿ ಮತ್ತು ಅಂತಹ ಸ್ಥಳದಲ್ಲಿ;

(ಬಿ) ಸೂರ್ಯೋದಯ ಅಥವಾ ಸೂರ್ಯಾಸ್ತದ ದೃಶ್ಯವನ್ನು ನೋಡುವುದಕ್ಕಾಗಿ ಗೊತ್ತುಪಡಿಸಲಾದ ಸ್ಥಳದಲ್ಲಿ ಸೂರ್ಯೋದಯ ಅಥವಾ ಸೂರ್ಯಾಸ್ತದ ದೃಶ್ಯವನ್ನು ನೋಡುವುದಕ್ಕೆ ಅಡ್ಡಿಯಾಗಬಹುದಾದಂಥ ಸಂದರ್ಭದಲ್ಲಿ;

(ಸಿ) ಈ ಅಧಿನಿಯಮದ ಅಡಿಯಲ್ಲಿ ಅಥವಾ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ, 11) ಅಡಿಯಲ್ಲಿ ಕಟ್ಟಡದ ಬಗ್ಗೆ ಕ್ರಮ ಕೈಗೊಳ್ಳಲು, ಸಂಬಂಧಪಟ್ಟ ನಗರಪಾಲಿಕೆಯ ಮಟ್ಟದಲ್ಲಿ ಅಥವಾ ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಅಥವಾ ಯಾವುದೇ ಕಾನೂನಿನ ಅಡಿಯಲ್ಲಿ ಕಟ್ಟಡದ ಮಾಲೀಕನಿಗೆ ಕಟ್ಟಡದ ಕಾಮಗಾರಿ ಸ್ಥಗಿತಗೊಳಿಸುವ ನೋಟಿಸ್ ನೀಡಿರುವ ಕಟ್ಟಡದ ಸಂದರ್ಭದಲ್ಲಿ;

(ಡಿ) ಅಧಿನಿಯಮದ ಅಡಿಯಲ್ಲಿ ಅಪಾಯಕಾರಿ (ಭಾಗಶಃ ಅಥವಾ ಸಂಪೂರ್ಣವಾಗಿ) ಎಂದು ಘೋಷಿಸಲಾಗಿರುವ ಅಥವಾ ನೋಟಿಸ್ ನೀಡಲಾಗಿರುವ ಕಟ್ಟಡ ಸಂದರ್ಭದಲ್ಲಿ;

(ಇ) ಸಾರ್ವಜನಿಕ ನೈತಿಕತೆ ಮತ್ತು ಸಭ್ಯತೆಗೆ ಧಕ್ಕೆ ತರಬಹುದಾದ ಜಾಹೀರಾತನ್ನು ಅನುಮತಿಸತಕ್ಕದ್ದಲ್ಲ. ಪ್ರದರ್ಶನದ ವಿಷಯಗಳು ಸಾರ್ವಜನಿಕ ಸಾಮಾನ್ಯತೆ ಮತ್ತು ಸಭ್ಯತೆಯ ಮಾನದಂಡಗಳನ್ನು ಉಲ್ಲಂಘಿಸುತ್ತವೆ ಎಂದು ಆಯುಕ್ತರಿಗೆ ಮನದಟ್ಟಾದರೆ, ಅಂತಹ ಸೂಚನೆಯನ್ನು ಲಿಖಿತವಾಗಿ ಸ್ವೀಕರಿಸಿದ ನಂತರ ಏಜೆನ್ಸಿಯು ಪ್ರದರ್ಶನವನ್ನು ತಕ್ಷಣವೇ ತೆಗೆದುಹಾಕತಕ್ಕದ್ದು.

(ಎಫ್) ಪಾದಚಾರಿಗಳ ಮಾರ್ಗಕ್ಕೆ ಅಡ್ಡಿಯುಂಟುಮಾಡುವ ಮತ್ತು ಅವರ ಗೋಚರತೆಗೆ ಅಡ್ಡಿಯುಂಟುಮಾಡುವಂತಹ ಸಂದರ್ಭದಲ್ಲಿ;

(ಜಿ) ಯಾವುದೇ ಸ್ಥಳೀಯ ಸೌಲಭ್ಯದ ಮೇಲೆ ಪರಿಣಾಮ ಬೀರುವ ಸಂಭವವಿರುವ ಸಂದರ್ಭದಲ್ಲಿ;

(ಎಚ್) ಅಸ್ತಿತ್ವದಲ್ಲಿರುವ ಯಾವುದೇ ಜಾಹೀರಾತಿನ ಗೋಚರತೆಗೆ ಅಡ್ಡಿಯಾಗಬಹುದಾದ ಸಂದರ್ಭದಲ್ಲಿ;

(ಐ) ಜಾಹೀರಾತು ಫಲಕ ಅಥವಾ ಜಾಹೀರಾತನ್ನು ಕಟ್ಟಡ ಮತ್ತು ಅಗ್ನಿಶಾಮಕ ಸಂಹಿತೆಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸದಿದ್ದ ಅಥವಾ ನಿರ್ಮಿಸದಿದ್ದ ಸಂದರ್ಭದಲ್ಲಿ;

- ಯಾವುದೇ ಜಾಹೀರಾತು ಫಲಕಗಳನ್ನು ಹಾಕಲು ಅನುಮತಿ ನೀಡತಕ್ಕದ್ದಲ್ಲ.

16. ಜಾಹೀರಾತುಗಳು ಅಥವಾ ಪ್ರದರ್ಶನಗಳನ್ನು ತೆಗೆದುಹಾಕುವುದು.- (1)ನಿಷೇಧಿತ ಅಥವಾ ಅನಧಿಕೃತ ಜಾಹೀರಾತುಗಳು ಮತ್ತು ಪ್ರದರ್ಶನಗಳ ಸಂದರ್ಭದಲ್ಲಿ,-

(i) ನಿಷೇಧಿತವಾದ ಅಥವಾ ಮಾನ್ಯವಾದ ಅನುಮತಿಯಿಲ್ಲದೆ ಅಥವಾ ಈ ನಿಯಮಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ಜಾಹೀರಾತು ಅಥವಾ ಪ್ರದರ್ಶನ ಅಥವಾ ಅದರ ಮೂಲಸೌಕರ್ಯಗಳನ್ನು ಅಳವಡಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸುವುದನ್ನು ಮುಂದುವರಿಸತಕ್ಕದ್ದಲ್ಲ.

(ii) ಇದು ಸಂಬಂಧಪಟ್ಟ ನಗರಪಾಲಿಕೆ ಅಥವಾ ವಿಶೇಷ/ಅಪರ ಆಯುಕ್ತರು ಅಥವಾ ವಲಯ ಜಂಟಿ ಆಯುಕ್ತರು ಅಥವಾ ವಲಯ ಉಪ ಆಯುಕ್ತರ ಗಮನಕ್ಕೆ ಬಂದರೆ, ಅದನ್ನು ನಮೂನೆ-VIIರಲ್ಲಿ ಏಳು ದಿನಗಳ ಲಿಖಿತ ನೋಟಿಸಿನ ನಂತರವೂ ತೆಗೆದುಹಾಕದಿದ್ದರೆ, ಸದರಿ ಅಧಿಕಾರಿಯು ಅದನ್ನು ತೆಗೆದುಹಾಕತಕ್ಕದ್ದು ಅಥವಾ ಕೆಡವತಕ್ಕದ್ದು:

ಪರಂತು, ರಸ್ತೆ ಅಥವಾ ಪಾದಾಚಾರಿ ಮಾರ್ಗದ ಮೇಲೆ ಅಥವಾ ಸಂಬಂಧಿಸಿದ ಸರ್ಕಾರದ ಅಥವಾ ನಗರಪಾಲಿಕೆಯ ಅಥವಾ ಯಾವುದೇ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ವಲಯದ ಘಟಕ ಅಥವಾ ಏಜೆನ್ಸಿಯ ಒಡೆತನದ ಯಾವುದೇ ಭೂಮಿ ಅಥವಾ ಸ್ವತ್ತಿನ ಮೇಲೆ ಯಾವುದೇ ಅನಧಿಕೃತ ಅಳವಡಿಕೆ ಅಥವಾ ಜಾಹೀರಾತಿನ ಪ್ರದರ್ಶನವನ್ನು ಯಾವುದೇ ಲಿಖಿತ ನೋಟಿಸ್ ನೀಡದೆ ತಕ್ಷಣವೇ ತೆಗೆದುಹಾಕತಕ್ಕದ್ದು ಅಥವಾ ಕೆಡವತಕ್ಕದ್ದು.

(iii) ಕಾನೂನುಬಾಹಿರ ಅಥವಾ ಅನಧಿಕೃತ ಜಾಹೀರಾತುಗಳು, ಪ್ರದರ್ಶನಗಳು, ಫ್ಲೆಕ್ಸ್‌ಗಳು ಅಥವಾ ಬ್ಯಾನರ್‌ಗಳಸಂದರ್ಭದಲ್ಲಿ, ಅವುಗಳನ್ನು ತೆರವುಗೊಳಿಸುವುದು ಅಥವಾ

ನೆಲಸಮ ಮಾಡುವುದರ ಜೊತೆಗೆ, ಅವುಗಳನ್ನು ಅಳವಡಿಸಲು ಕಾರಣರಾದ ವ್ಯಕ್ತಿಗಳು ಮತ್ತು ಅಂತಹ ಕಾನೂನುಬಾಹಿರ ಅಥವಾ ಅನಧಿಕೃತ ಜಾಹೀರಾತುಗಳು, ಪ್ರದರ್ಶನಗಳು, ಫ್ಲೆಕ್ಸ್‌ಗಳು ಅಥವಾ ಬ್ಯಾನರ್‌ಗಳನ್ನು ಯಾವ ಖಾಸಗಿ ಆಸ್ತಿಯ ಮೇಲೆ ಅಳವಡಿಸಲಾಗಿದೆಯೋ, ಆ ಆಸ್ತಿಯ ಮಾಲೀಕರು ಸಹ ಕರ್ನಾಟಕ ಮುಕ್ತ ಸ್ಥಳಗಳ (ವಿರೂಪಗೊಳಿಸುವಿಕೆ ತಡೆಗಟ್ಟುವಿಕೆ) ಅಧಿನಿಯಮ, 1981, ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024, ಭಾರತೀಯ ನ್ಯಾಯ ಸಂಹಿತೆ, ಆಸ್ತಿಯ ನಾಶ ಮತ್ತು ನಷ್ಟ ತಡೆಗಟ್ಟುವಿಕೆ ಅಧಿನಿಯಮ, 1981 ಹಾಗೂ ಸಾರ್ವಜನಿಕ ಆಸ್ತಿಗೆ ಹಾನಿ ತಡೆಗಟ್ಟುವಿಕೆ ಅಧಿನಿಯಮ, 1984 ಸೇರಿದಂತೆ ಅನ್ವಯವಾಗುವ ಕಾನೂನುಗಳ ಅಡಿಯಲ್ಲಿ ಕ್ರಿಮಿನಲ್ ಕ್ರಮಕ್ಕೆ ಹೊಣೆಗಾರರಾಗಿರುತ್ತಾರೆ. ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 ಅಥವಾ ಈ ನಿಯಮಗಳ ಉಪಬಂಧಗಳ ಉಲ್ಲಂಘನೆಯು, ಯಾವುದೇ ಇತರ ಕಾನೂನು ಮತ್ತು ಈ ನಿಯಮಗಳ ಅಡಿಯಲ್ಲಿನ ಬಾಧ್ಯತೆ ಮತ್ತು ಕ್ರಮಗಳಿಗೆ ಬಾಧಕವಾಗದಂತೆ, ಭಾರತೀಯ ನ್ಯಾಯ ಸಂಹಿತೆಯ 223ನೇ ಪ್ರಕರಣದ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿರುತ್ತದೆ.

(iv) ಕಾನೂನುಬಾಹಿರ ಅಥವಾ ಅನಧಿಕೃತ ಜಾಹೀರಾತುಗಳು, ಪ್ರದರ್ಶನಗಳು, ಫ್ಲೆಕ್ಸ್‌ಗಳು ಅಥವಾ ಬ್ಯಾನರ್‌ಗಳ ಸಂದರ್ಭದಲ್ಲಿ, ಅವುಗಳನ್ನು ತೆರವುಗೊಳಿಸುವುದು ಅಥವಾ ಕೆಡವಿಸುವುದರ ಹೊರತಾಗಿಯೂ; ಅವುಗಳನ್ನು ಅಳವಡಿಸಿದ ಜವಾಬ್ದಾರಿಯುತ ವ್ಯಕ್ತಿಗಳು ಮತ್ತು ಖಾಸಗಿ ಜಮೀನು ಅಥವಾ ಸ್ವತ್ತುಗಳಲ್ಲಿ ಇಂತಹ ಅನಧಿಕೃತ ಜಾಹೀರಾತು ಪ್ರದರ್ಶನಕ್ಕಾಗಿ ಮೂಲಸೌಕರ್ಯವನ್ನು ನಿರ್ಮಿಸಲಾಗಿದ್ದರೆ ಅಥವಾ ಜಾಹೀರಾತನ್ನು ಪ್ರದರ್ಶಿಸಲಾಗಿದ್ದರೆ, ಆ ಸ್ವತ್ತಿನ ಮಾಲೀಕರು, ಸದರಿ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶಕ್ಕೆ ಹರಾಜು/ಟೆಂಡರ್‌ನಲ್ಲಿ ನಿಗದಿಪಡಿಸಲಾದ ದರದ ಎರಡರಷ್ಟು ದರದಲ್ಲಿ ದಂಡವನ್ನು ಪಾವತಿಸಲು ಹೊಣೆಗಾರರಾಗಿರುತ್ತಾರೆ.

ಪರಂತು, ಅಂತಹ ಯಾವುದೇ ದರವನ್ನು ನಿಗದಿಪಡಿಸದಿದ್ದಲ್ಲಿ, ಹತ್ತಿರದ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶಕ್ಕೆ ಹರಾಜು/ಟೆಂಡರ್ ಮೂಲಕ ನಿಗದಿಪಡಿಸಿದ ದರದ ಎರಡರಷ್ಟು ಅಥವಾ ಸದರಿ ರಸ್ತೆ ಅಥವಾ ವೃತ್ತ ಅಥವಾ ಪ್ರದೇಶಕ್ಕೆ ನಿಗದಿಪಡಿಸಲಾದ ಕನಿಷ್ಠ ಜಾಹೀರಾತು ಶುಲ್ಕದ ಎರಡರಷ್ಟು, ಇವೆರಡರಲ್ಲಿ ಯಾವುದು ಹೆಚ್ಚೋ ಅದು.

(v) ಅನಧಿಕೃತ ಜಾಹೀರಾತು ಮೂಲಸೌಕರ್ಯ ಮತ್ತು ಜಾಹೀರಾತು ಅಥವಾ ಪ್ರದರ್ಶನವನ್ನು ತೆಗೆದುಹಾಕುವ ವೆಚ್ಚವು ದಂಡದ ವಸೂಲಾತಿಯಲ್ಲಿ ಸೇರಿರತಕ್ಕದ್ದು.

(vi) ಜಾಹೀರಾತನ್ನು ಪ್ರದರ್ಶಿಸಲು ಮೂಲಸೌಕರ್ಯವನ್ನು ಅಳವಡಿಸಿದ ದಿನಾಂಕದಿಂದಲೇ ದಂಡವನ್ನು ಪಾವತಿಸಲು ಹೊಣೆಗಾರನಾಗಿರತಕ್ಕದ್ದು.

ಪರಂತು, ಅನಧಿಕೃತ ಜಾಹೀರಾತಿಗೆ ಸಂಬಂಧಿಸಿದ ಮೇಲ್ಕಂಡ ಬಾಕಿ ಮೊತ್ತವನ್ನು, ಮಾಲೀಕರ ಬದಲಿಗೆ ಜಾಹೀರಾತುದಾರರಿಂದಲೇ ವಸೂಲಿ ಮಾಡುವ ಹಕ್ಕನ್ನು ಸಂಬಂಧಪಟ್ಟ ನಗರ ಪಾಲಿಕೆಯು ಕಾಯ್ದಿರಿಸಿಕೊಂಡಿದೆ.

ಅಲ್ಲದೆ, ಸಂಬಂಧಪಟ್ಟ ನಗರಪಾಲಿಕೆಯಿಂದ ಜಾಹೀರಾತಿಗಾಗಿ ಪರವಾನಗಿ ಪಡೆಯದಂತೆ ಜಾಹೀರಾತುದಾರನನ್ನು ಕಪ್ಪುಪಟ್ಟಿಗೆ ಸೇರಿಸಬಹುದು ಮತ್ತು ಒಂದು ವೇಳೆ

ಆತನು ಈಗಾಗಲೇ ಪರವಾನಗಿ ಪಡೆದಿದ್ದರೆ, ಆತನ ಪರವಾನಗಿಯನ್ನು ತಕ್ಷಣವೇ ಅಮಾನತುಗೊಳಿಸತಕ್ಕದ್ದು ಮತ್ತು ತರುವಾಯ ನಮೂನೆ-VII ರಲ್ಲಿ ಏಳು ದಿನಗಳ ನೋಟಿಸ್ ನೀಡಿದ ನಂತರ ಅದನ್ನು ರದ್ದುಗೊಳಿಸತಕ್ಕದ್ದು.

(2) ಜಾಹೀರಾತು ಶುಲ್ಕ ಅಥವಾ ಬಡ್ಡಿಯನ್ನು ಪಾವತಿಸಲು ತಪ್ಪಿದ ಅಧಿಕೃತ ಜಾಹೀರಾತಿನ ಸಂದರ್ಭದಲ್ಲಿ, -

(i) ಅನುಮತಿಯೊಂದಿಗೆ ಅಥವಾ ಈ ನಿಯಮಗಳ ಅನುಸಾರವಾಗಿ ಅನ್ಯಥಾ ಅಳವಡಿಸಲಾದ ಅಥವಾ ಪ್ರದರ್ಶಿಸಲಾದ ಜಾಹೀರಾತು ಅಥವಾ ಅದರ ಮೂಲ ಸೌಕರ್ಯಕ್ಕಾಗಿ ಈ ನಿಯಮಗಳಉಪಬಂಧಗಳ ಅನುಸಾರವಾಗಿ ಜಾಹೀರಾತು ಶುಲ್ಕ ಅಥವಾ ಬಡ್ಡಿಯನ್ನು ಪಾವತಿಸದಿದ್ದರೆ ಅದಕ್ಕೆ ಪಾವತಿ ವಿಳಂಬದ ಅವಧಿಗೆ ವಾರ್ಷಿಕ ಶೇಕಡಾ ಹದಿನೆಂಟರ ದರದಲ್ಲಿ ಬಡ್ಡಿ ಅನ್ವಯವಾಗತಕ್ಕದ್ದು. ವಿಳಂಬ ಲೆಕ್ಕ ಹಾಕುವ ವಿಧಾನವು ನಿಯಮ 3ರ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

(ii) ಪಾವತಿ ಮಾಡುವುದಕ್ಕೆ ತಪ್ಪಿದ ಸಂದರ್ಭದಲ್ಲಿ, ನಗರಪಾಲಿಕೆಯ ಜಾಹೀರಾತುಗಳ ಪ್ರಭಾರದಲ್ಲಿರುವ ವಿಶೇಷ/ಅಪರ ಆಯುಕ್ತರು ಅಥವಾ ಜಂಟಿ ಆಯುಕ್ತರು ಜಾಹೀರಾತು ಬಾಕಿ ಮತ್ತು ಅನ್ವಯವಾಗುವ ಬಡ್ಡಿ ಮತ್ತು ದಂಡಗಳು ಯಾವುದಾದರೂ ಇದ್ದರೆ, ಅವುಗಳನ್ನು ಪಾವತಿಸುವಂತೆ ಕೋರಿ ನಮೂನೆ-VIII ರಲ್ಲಿ ಡಿಫಾಲ್ಟರ್-ಡಿಮಾ ಂಡ್-ಕಮ್-ಶೋಕಾಸ್ ನೋಟಿಸ್ ನೀಡತಕ್ಕದ್ದು.

(iii) ಜಾಹೀರಾತುದಾರನು ಡಿಫಾಲ್ಟರ್-ಡಿಮ್ಯಾಂಡ್-ಕಮ್-ಶೋಕಾಸ್ ನೋಟಿಸ್ ಅನ್ನು ಪಾಲಿಸತಕ್ಕದ್ದು ಅಥವಾ ಅದನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳೊಳಗೆ ಕಾರಣವನ್ನು ನೀಡಿ ಉತ್ತರಿಸತಕ್ಕದ್ದು;

(iv) ನಗರಪಾಲಿಕೆಯ ಜಾಹೀರಾತುಗಳ ಪ್ರಭಾರದಲ್ಲಿರುವ ವಿಶೇಷ/ಅಪರ ಆಯುಕ್ತರುಅಥವಾ ವಲಯ ಜಂಟಿ ಆಯುಕ್ತರು ಅಥವಾ ಸಂದರ್ಭಾನುಸಾರ ಆಯುಕ್ತರು ಅಧಿಕೃತಗೊಳಿಸಿದ ಅಧಿಕಾರಿಯು ಮೂಲ ಡಿಫಾಲ್ಟರ್-ಡಿಮ್ಯಾಂಡ್-ಕಮ್-ಶೋಕಾಸ್ ನೋಟಿಸ್ ನೀಡಿದ ದಿನಾಂಕದಿಂದ ಇಪ್ಪತ್ತು ದಿನಗಳೊಳಗೆ ಜಾಹೀರಾತುದಾರನು ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿ, ಆದೇಶವನ್ನು ಹೊರಡಿಸತಕ್ಕದ್ದು.

(v) ಜಾಹೀರಾತುದಾರನು ಆದೇಶವನ್ನು ತಕ್ಷಣವೇ ಪಾಲಿಸತಕ್ಕದ್ದು ಮತ್ತು ಜಾಹೀರಾತುದಾರನು ಆದೇಶವನ್ನು ಪಾಲಿಸಲು ವಿಫಲವಾದಲ್ಲಿ, ಸಂಬಂಧಿಸಿದ ಅಧಿಕಾರಿಯು ಜಾಹೀರಾತನ್ನು ತೆಗೆದುಹಾಕುವುದು ಮತ್ತು/ಅಥವಾ ಬಾಕಿಗಳನ್ನು ವಸೂಲಿ ಮಾಡುವುದು ಸೇರಿದಂತೆ ಆದೇಶವನ್ನು ಅನುಷ್ಠಾನಗೊಳ್ಳುವಂತೆ ಮಾಡತಕ್ಕದ್ದು.

(vi) ಅಂತಹ ಪರವಾನಗಿ ಪಡೆದ ಜಾಹೀರಾತುದಾರನ ಪರವಾಗಿ ಜಾಹೀರಾತು ಹಕ್ಕುಗಳ ಅನುಮೋದನೆ ಅಥವಾ ಹಸ್ತಾಂತರಣವನ್ನು ತಕ್ಷಣವೇ ಅಮಾನತುಗೊಳಿಸತಕ್ಕದ್ದು ಮತ್ತು ನಮೂನೆ-VIII ರಲ್ಲಿ ಏಳು ದಿನಗಳ ನೋಟಿಸ್ ನೀಡಿದ ನಂತರ ಆತನ ಪರವಾನಗಿಯನ್ನು ರದ್ದುಗೊಳಿಸಿ ಆದೇಶವನ್ನು ಹೊರಡಿಸತಕ್ಕದ್ದು ಮತ್ತು ಆತನನ್ನು ಕಪ್ಪುಪಟ್ಟಿಗೆ ಸೇರಿಸತಕ್ಕದ್ದು; ಮತ್ತು

(vii) ಈ ಸಂಬಂಧದಲ್ಲಿನ ಆದೇಶದ ಹದಿನೈದು ದಿನಗಳೊಳಗೆ ಜಾಹೀರಾತು ಶುಲ್ಕ, ದಂಡ, ಬಡ್ಡಿ ಇತ್ಯಾದಿಗಳನ್ನು ಪಾವತಿಸಲು ವಿಫಲವಾದರೆ, ಅದನ್ನು ಅಂತಹ ತೆಗೆದುಹಾಕುವ ವೆಚ್ಚದೊಂದಿಗೆ, ಜಾಹೀರಾತುದಾರರಿಂದ ಅಥವಾ ಆಸ್ತಿಯ ಅಥವಾ ಭೂಮಿಯ ಮಾಲೀಕರಿಂದ ಜಾಹೀರಾತು ಶುಲ್ಕದ ಬಾಕಿಯಂತೆ ಮತ್ತು ಈ ನಿಯಮಗಳ ಅಡಿಯಲ್ಲಿ ಅದನ್ನು ವಸೂಲಿ ಮಾಡಲು ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಸೂಲಿ ಮಾಡಬಹುದು.

17. ಜಾಹೀರಾತು ಫಲಕಗಳು ಮತ್ತು ಅವುಗಳ ಒಳಗೊಂಡಿರುವ ವಿಷಯಗಳ ಮಾನದಂಡಗಳು.-(1) ಎಲ್ಲಾ ಪ್ರವರ್ಗದ ಪ್ರದರ್ಶನಗಳು ಮತ್ತು ಜಾಹೀರಾತುಗಳಿಗೆ ಸಂಬಂಧಿಸಿದಂತೆ, ಚಾಲಕರ ಗಮನವನ್ನು ಬೇರೆಡೆಗೆ ಸೆಳೆಯುವುದನ್ನು ಕಡಿಮೆ ಮಾಡಲು ಜಾಹೀರಾತು ಅಥವಾ ಪ್ರದರ್ಶನ ಸಾಧನದ ಮುಖದ ಮೇಲಿನ ಪಠ್ಯ ಅಂಶಗಳು ಪ್ರಯಾಣಿಸುವ ವಾಹನ ಚಾಲಕರಿಗೆ ಸುಲಭವಾಗಿ ಗೋಚರಿಸಬೇಕು ಮತ್ತು ಅಗತ್ಯವಿರುವ ಜಾಹೀರಾತು ಅಥವಾ ಪ್ರದರ್ಶನ ಸಂದೇಶವನ್ನು ವೀಕ್ಷಕರಿಗೆ ತಲುಪಿಸಲು ಮತ್ತು ಗಮನವನ್ನು ಬೇರೆಡೆಗೆ ಸೆಳೆಯುವ ಅವಧಿಯನ್ನು ಕಡಿಮೆ ಮಾಡಲು ಜಾಹೀರಾತನ್ನು ತ್ವರಿತವಾಗಿ ಮತ್ತು ಸುಲಭವಾಗಿ ಅರ್ಥೈಸಿಕೊಳ್ಳುವಂತಿರತಕ್ಕದ್ದು.

(2) ಜಾಹೀರಾತು ಅಥವಾ ಪ್ರದರ್ಶನ ಸಾಧನ ಫಲಕದಲ್ಲಿ ಪ್ರದರ್ಶಿಸಲಾದ ವಿಷಯ ಅಥವಾ ಗ್ರಾಫಿಕ್ ವಿನ್ಯಾಸವು ಓದಲು ಕ್ಲಿಷ್ಟಕರವಾದ ಮತ್ತು ಕಣ್ಣಿಗೆ ರಾಚುವ ರೀತಿಯಲ್ಲಿ ಇರದೆ, ಸೂಕ್ತವಾದ ಅಕ್ಷರ ಶೈಲಿಗಳನ್ನು ಹೊಂದಿರತಕ್ಕದ್ದು. ಯಾವುದೇ ಸಂದರ್ಭದಲ್ಲೂ, ಸಾಧನದಲ್ಲಿ ಒಳಗೊಂಡಿರುವ ಮಾಹಿತಿಯ ಪಠ್ಯ ವಸ್ತುವಿನ ಗಾತ್ರವು ಚಾಲಕನು ಅಥವಾ ಪ್ರಯಾಣಿಕನು ಚಲಿಸುವ ವಾಹನವನ್ನು ನಿಲ್ಲಿಸಿ, ಓದಿ ಮತ್ತು/ಅಥವಾ ಬರೆದುಕೊಳ್ಳುವಂಥ ಅನಿವಾರ್ಯತೆಯನ್ನು ಉಂಟು ಮಾಡುವ ಮತ್ತು ಸುಗಮ ಸಂಚಾರಕ್ಕೆ ಅಡ್ಡಿಯುಂಟು ಮಾಡುವ ಅಥವಾ ಚಾಲಕನ ಏಕಾಗ್ರತೆಗೆ ಭಂಗವನ್ನು ಉಂಟು ಮಾಡುವ ರೀತಿಯಲ್ಲಿ ಇರತಕ್ಕದ್ದಲ್ಲ.

(3) ಸಂಬಂಧಪಟ್ಟ ನಗರಪಾಲಿಕೆಯು ಅನ್ಯಥಾ ಅನುಮತಿಸಿದ ಹೊರತು, ಸಾಮಾನ್ಯ ನಿಯಮದಂತೆ, ಅಕ್ಷರಗಳು ಜಾಹೀರಾತು ಪ್ರದೇಶದ ಶೇಕಡಾ ಇಪ್ಪತ್ತೈದಕ್ಕಿಂತ ಹೆಚ್ಚು ಭಾಗವನ್ನು ಆಕ್ರಮಿಸಿಕೊಳ್ಳದಿರುವ ಹಾಗೆ ಅನುಪಾತವನ್ನು ಕಾಪಾಡಿಕೊಳ್ಳುವಂತೆ ಎಲ್ಲಾ ಚಿಹ್ನೆಗಳನ್ನು ವಿನ್ಯಾಸಗೊಳಿಸತಕ್ಕದ್ದು.

18. ಅನುಮತಿ ಅಥವಾ ಪಾವತಿ ಅಗತ್ಯವಿಲ್ಲದ ಜಾಹೀರಾತುಗಳು ಅಥವಾ ಪ್ರದರ್ಶನಗಳು.-(1) ಪ್ರಕಾಶಮಾನವಾದ ಜಾಹೀರಾತುಗಳು ಮತ್ತು Sky-Signಗಳನ್ನು ಹೊರತುಪಡಿಸಿ, ಈ ಕೆಳಕಂಡ ರೀತಿಯ ಜಾಹೀರಾತುಗಳು, ಅವುಗಳ ಗಾತ್ರವು ಈ ನಿಯಮಗಳ ಅಡಿಯಲ್ಲಿ ನಿಗದಿಪಡಿಸಿದ ಮಿತಿಯೊಳಗೆ ಇದ್ದರೆ, ಅನುಮತಿ ಪಡೆಯುವುದು ಅಥವಾ ಪಾವತಿ ಮಾಡುವುದು ಅಗತ್ಯವಾಗಿರತಕ್ಕದ್ದಲ್ಲ:-

(i) ಕಟ್ಟಡದ ಕಿಟಕಿಯೊಳಗೆ ಪ್ರದರ್ಶಿಸಲಾದ ಸ್ವಯಂ-ಜಾಹೀರಾತುಗಳು; ಅಥವಾ

(ii) ಅಂತಹ ಜಾಹೀರಾತನ್ನು ಪ್ರದರ್ಶಿಸಲಾಗಿರುವ ಭೂಮಿ ಅಥವಾ ಕಟ್ಟಡದೊಳಗೆ ನಡೆಯುವ ವ್ಯಾಪಾರ ಅಥವಾ ವ್ಯವಹಾರಕ್ಕೆ ಸಂಬಂಧಿಸಿದ ಸ್ವಯಂ ಜಾಹೀರಾತು ಅಥವಾ

ಜಾಹೀರಾತು, ಅಥವಾ ಅಂತಹ ಭೂಮಿ ಅಥವಾ ಕಟ್ಟಡವನ್ನು ಅಥವಾ ಅದರಲ್ಲಿ ಯಾವುದೇ ವಸ್ತುಗಳನ್ನು ಮಾರಾಟ ಮಾಡಲು ಅಥವಾ ಬಾಡಿಗೆಗೆ ನೀಡಲು ಅಥವಾ ಅಂತಹ ಭೂಮಿ ಅಥವಾ ಕಟ್ಟಡದಲ್ಲಿ ನಡೆಯುವ ಮಾರಾಟ, ಮನರಂಜನೆ ಅಥವಾ ಸಭೆಗೆ ಸಂಬಂಧಿಸಿದ ಸ್ವಯಂ ಜಾಹೀರಾತು ಅಥವಾ ಜಾಹೀರಾತು; ಅಥವಾ

(iii) ಜಾಹೀರಾತು ಅಥವಾ ಪ್ರದರ್ಶನವನ್ನು ಪ್ರದರ್ಶಿಸಲಾಗಿರುವ ಭೂಮಿ ಅಥವಾ ಕಟ್ಟಡ ಅಥವಾ ಅಧಿಭೋಗದಾರ ಅಥವಾ ಮಾಲೀಕರ ಹೆಸರಿಗೆ ಸಂಬಂಧಿಸಿದ ಜಾಹೀರಾತುಗಳು ಅಥವಾ ಪ್ರದರ್ಶನ; ಅಥವಾ

(iv) ಮೆಟ್ರೋ ಅಥವಾ ರಾಜ್ಯ ಸಾರಿಗೆ ಅಥವಾ ಯಾವುದೇ ಸರ್ಕಾರಿ ಸ್ವಾಮ್ಯದ ಏಜೆನ್ಸಿಗಳು ಅಥವಾ ಇಲಾಖೆಗಳು ಸೇರಿದಂತೆ ಯಾವುದೇ ರೈಲ್ವೆಯ ಸ್ವಂತ ಚಟುವಟಿಕೆಗಳಿಗೆ ಸಂಬಂಧಿಸಿದ ಜಾಹೀರಾತು ಅಥವಾ ಪ್ರದರ್ಶನ; ಅಥವಾ

(v) ರೈಲು ಅಥವಾ ಮೆಟ್ರೋ ಬೋಗಿಗಳ ಒಳಗೆ ಪ್ರದರ್ಶಿಸಲಾದ ಜಾಹೀರಾತು.

(2) ಉಚಿತ ಜಾಹೀರಾತು ವೈಯಕ್ತಿಕ ಜಾಹೀರಾತಿಗೆ ಅನುಮತಿಸಲಾದ ಗರಿಷ್ಠ ಅನುಮತಿಸಬಹುದಾದ ಪ್ರದೇಶವನ್ನು ಮೀರಿದ ಸಂದರ್ಭದಲ್ಲಿ, ಸಂಪೂರ್ಣ ಜಾಹೀರಾತು ನಿಯಮ 3ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಜಾಹೀರಾತು ಶುಲ್ಕವನ್ನು ಪಾವತಿಸಲು ಹೊಣೆಗಾರನಾಗಿರುತಕ್ಕದ್ದು.

19. ಪ್ರಕಟಣಾ ಫಲಕಗಳು ಮತ್ತು ಜಾಹೀರಾತು ಫಲಕಗಳಿಗೆ ಸಂಬಂಧಿಸಿದ ನಿಯಮಾವಳಿಗಳು.- (1) ಅನುಸೂಚಿ-3 ರಲ್ಲಿ ನಿರ್ದಿಷ್ಟಪಡಿಸಿದಂತೆ ದೊಡ್ಡ ಗಾತ್ರದ ಪ್ರಕಟಣಾ ಫಲಕಗಳನ್ನು ಅಳವಡಿಸಲು ಅನುಮತಿಸತಕ್ಕದ್ದಲ್ಲ.

(2) ದಾರಿಯ ಹಕ್ಕಿನ ಮಿತಿಯ ಆಚೆ ಕನಿಷ್ಠ ಎರಡು ಮೀಟರ್ ಅಂತರವನ್ನು ಕಾಯ್ದುಕೊಳ್ಳತಕ್ಕದ್ದು.

(3) ಸಂಪರ್ಕ ರಸ್ತೆ ಅಥವಾ ಜಂಕ್ಷನ್ನಿನ ನಿಲುಗಡೆ ರೇಖೆಯಿಂದ ಹತ್ತು ಮೀಟರ್ ಅಂತರದೊಳಗೆ ರಸ್ತೆಗಳ ಉದ್ದಕ್ಕೂ ಜಾಹೀರಾತನ್ನು ಅನುಮತಿಸತಕ್ಕದ್ದಲ್ಲ.

(4) ಸ್ಯಾಂಡ್ವಿಚ್ (ಬೆನ್ನಿಗೆ ಬೆನ್ನು) ಮತ್ತು ಪ್ರಮಾಣಿತ ಗಾತ್ರದ 'ವಿ' ಆಕಾರದ ಜಾಹೀರಾತು ಫಲಕಗಳನ್ನು ಅನುಮತಿಸತಕ್ಕದ್ದು.

(5) ಜಾಹೀರಾತು ಫಲಕಕ್ಕೆ ಆಧಾರವಾಗಿರುವ ರಚನಾತ್ಮಕ ಚೌಕಟ್ಟನ್ನು ಅನುಮತಿಸಲಾದ ಫಲಕದ ಗಾತ್ರಕ್ಕೆ ಹೋಲಿಸಿದರೆ ದೊಡ್ಡದಾಗಿರತಕ್ಕದ್ದಲ್ಲ ಮತ್ತು ಎರಡೂ ಬದಿಗಳು ಅಂಗೀಕಾರಾರ್ಹವಾದ ಮಿತಿಯಲ್ಲಿರತಕ್ಕದ್ದು. ಕಾಲಂಗಳು ಗ್ರೌಂಡ್ ಕ್ಲಿಯರೆನ್ಸ್‌ವರೆಗೆ ಇರುವುದರ ಹೊರತು ಯಾವುದೇ ವರ್ಟಿಕಲ್ ಟಾಲ್‌ರೆನ್ಸ್ ಅನ್ನು ಅನುಮತಿಸತಕ್ಕದ್ದಲ್ಲ. ಜಾಹೀರಾತು ಫಲಕದ ಗಾತ್ರದಲ್ಲಿನ ಯಾವುದೇ ಹೆಚ್ಚಳವನ್ನು ನಿಯಮಾವಳಿಗಳ ವಿರುದ್ಧವೆಂದು ಹಾಗೂ ಅನುಮತಿಯ ನಿಬಂಧನೆಗಳ ಮತ್ತು ಷರತ್ತುಗಳ ಉಲ್ಲಂಘನೆಯೆಂದು ಭಾವಿಸತಕ್ಕದ್ದು.

(6) ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದ ಎತ್ತರದ ನಿರ್ಬಂಧಕ್ಕೆ ಒಳಪಟ್ಟು, ಪ್ರಮಾಣಿತವಲ್ಲದ ಜಾಹೀರಾತು ಕ್ಷೇತ್ರವಾಗಿರುವ ತಾತ್ಕಾಲಿಕ ಸ್ವರೂಪದ ಯಾವುದೇ ವಿಶೇಷ ಜಾಹೀರಾತು ರಚನೆಯಿಲ್ಲದೆ ನಿರ್ಮಾಣ ಬೇಲಿಯನ್ನು ಅನುಮತಿಸಬಹುದು.

20. ಜಾಹೀರಾತುಗಳ ಪರಿಶೀಲನೆ:-ಆಯುಕ್ತರು ಅಥವಾ ನಗರಪಾಲಿಕೆಯ ಜಾಹೀರಾತುಗಳ ಪ್ರಭಾರದಲ್ಲಿರುವ ವಿಶೇಷ/ಅಪರ ಆಯುಕ್ತರು ಅಥವಾ ಜಂಟಿ ಆಯುಕ್ತರು ಅಥವಾ ಈ ಸಂಬಂಧದಲ್ಲಿ ಅವರು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಅಳವಡಿಸಲಾದ ಜಾಹೀರಾತು ಫಲಕಗಳನ್ನು ನಿಯತಕಾಲಿಕವಾಗಿ ಪರಿಶೀಲಿಸತಕ್ಕದ್ದು ಮತ್ತು ಪರವಾನಗಿಯಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಅನುಗುಣವಾಗಿ ಜಾಹೀರಾತುಗಳನ್ನು ನಿರ್ವಹಿಸಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು. ಅಂತಹ ಪರಿಶೀಲನೆಯ ಸಮಯದಲ್ಲಿ, ಜಾಹೀರಾತುಗಳು ಅಧಿನಿಯಮದ ಉಪಬಂಧಗಳಿಗೆ ಮತ್ತು ಈ ನಿಯಮಗಳಿಗೆ ಮತ್ತು ಪರವಾನಗಿಯ ಷರತ್ತುಗಳಿಗೆ ಅನುಸಾರವಾಗಿಲ್ಲವೆಂದು ಕಂಡುಬಂದರೆ, ಆಯುಕ್ತರು ಅಥವಾ ನಗರಪಾಲಿಕೆಯ ಜಾಹೀರಾತುಗಳ ಪ್ರಭಾರದಲ್ಲಿರುವ ವಿಶೇಷ/ಅಪರ ಆಯುಕ್ತರು ಅಥವಾ ಜಂಟಿ ಆಯುಕ್ತರು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದಂಥ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

21. ಜಾಹೀರಾತಿನ ಚಿಹ್ನೆ ಅಥವಾ ಗುರುತು ಅಥವಾ ಅಕ್ಷರವನ್ನು ವಿರೂಪಗೊಳಿಸುವುದನ್ನು ನಿಷೇಧಿಸಲಾಗಿದೆ. ಆಯುಕ್ತರು ಶುಲ್ಕವನ್ನು ಸಂಗ್ರಹಿಸಿ ಅನುಮತಿಸಿದ ಅಥವಾ ಅನುಮೋದಿಸಿದ ಕಾರಣದಿಂದಾಗಿ ಅಳವಡಿಸಲಾದ, ಪ್ರದರ್ಶಿಸಲಾದ, ಹಾಕಲಾದ, ಉಳಿಸಿಕೊಂಡ ಅಥವಾ ಪ್ರದರ್ಶನ ಮಾಡಲಾದ ಜಾಹೀರಾತುಗಳ ಮೇಲೆ ಅವರು ಹಾಕಲಾದ ಯಾವುದೇ ಚಿಹ್ನೆ ಅಥವಾ ಗುರುತು ಅಥವಾ ಅಕ್ಷರ ಅಥವಾ ಪದಗಳನ್ನು ಯಾರೇ ವ್ಯಕ್ತಿಯು ವಿರೂಪಗೊಳಿಸತಕ್ಕದ್ದಲ್ಲ ಅಥವಾ ವಿರೂಪಗೊಳಿಸುವಂತೆ ಮಾಡತಕ್ಕದ್ದಲ್ಲ. ಈ ಬಗ್ಗೆ ಸಂಬಂಧಪಟ್ಟ ಕಾನೂನುಗಳ ಉಪಬಂಧಗಳನುಸಾರವಾಗಿ ಅದನ್ನು ನಿರ್ವಹಿಸತಕ್ಕದ್ದು.

22. ಉಚಿತ ಜಾಹೀರಾತಿಗೆ ಅನುಮತಿ.-ಆಯುಕ್ತರು ಅಥವಾ ನಗರಪಾಲಿಕೆಯ ಜಾಹೀರಾತುಗಳ ಪ್ರಭಾರದಲ್ಲಿರುವ ವಿಶೇಷ/ಅಪರ ಆಯುಕ್ತರು ಅಥವಾ ಜಂಟಿ ಆಯುಕ್ತರು, ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ ಸೇರಿರುವ ಯಾವುದೇ ಇಲಾಖೆ ಅಥವಾ ಸಂಸ್ಥೆಗೆ ಅಥವಾ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಅಥವಾ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಗರಪಾಲಿಕೆಗೆ ಅಥವಾ ಯಾವುದೇ ಇತರ ಲಾಭರಹಿತ ಸಂಸ್ಥೆಗೆ ಅಥವಾ ಸಂಘ-ಸಂಸ್ಥೆ ಅಥವಾ ಟ್ರಸ್ಟ್‌ಗೆ ಯುಕ್ತ ನಿರ್ಬಂಧಗಳು ಮತ್ತು ಆಯುಕ್ತರು ನಿರ್ಧರಿಸಬಹುದಾದಂತಹ ಇತರೆ ನಿಬಂಧನೆಗಳು ಮತ್ತು ಷರತ್ತುಗಳೊಂದಿಗೆ ಉಚಿತವಾಗಿ ಜಾಹೀರಾತುಗಳನ್ನು ಪ್ರದರ್ಶಿಸಲು ಅನುಮತಿ ನೀಡಬಹುದು.

23. ಜಾಹೀರಾತು ನಿಯಂತ್ರಣ ಸಮಿತಿ.-(1) ಆಯುಕ್ತರು ಅಥವಾ ಆಯುಕ್ತರು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರವು ತಿರಸ್ಕರಿಸಿದ ನಂತರ ಜಾಹೀರಾತು ಏಜೆನ್ಸಿಗಳು ಅಥವಾ ಸ್ಥಳಗಳು ಅಥವಾ ಸಾಧನಗಳಿಗೆ ಪೂರ್ವಾನುಮೋದನೆಯನ್ನು ನೀಡಲು ಉನ್ನತ ಮಟ್ಟದಲ್ಲಿ ಜಾಹೀರಾತು ನಿಯಂತ್ರಣ ಸಮಿತಿಯನ್ನು ರಚಿಸತಕ್ಕದ್ದು.

(2) ಈ ಸಮಿತಿಯು, ತಿರಸ್ಕರಿಸಲಾದ ಎಲ್ಲಾ ಅರ್ಜಿಗಳಿಗಾಗಿ ಅಥವಾ ಸಾರ್ವಜನಿಕರ ಸುರಕ್ಷತೆಗೆ ಅಪಾಯವನ್ನುಂಟುಮಾಡಬಹುದಾದ ಸಾಧನಗಳನ್ನು ತೆಗೆದುಹಾಕುವುದಕ್ಕಾಗಿ ಆಯುಕ್ತರು ಮಾಡಿದ ಆದೇಶಕ್ಕಾಗಿ ಮೊದಲ ಮೇಲ್ಮನವಿ ಪ್ರಾಧಿಕಾರವಾಗಿರತಕ್ಕದ್ದು.

(3) ಸಮಿತಿಯು, ಸಾರ್ವಜನಿಕರ ಸುರಕ್ಷತೆಗೆ ಬಾಧಕವಾಗುವ ಅನಧಿಕೃತ ಜಾಹೀರಾತು ಸಾಧನಗಳನ್ನು ತೆಗೆದುಹಾಕುವಿಕೆ ಕುರಿತು ಮೇಲ್ವಿಚಾರಣೆ ಮಾಡಲು ತಿಂಗಳಿಗೆ ಒಮ್ಮೆ ಸಭೆ ಸೇರತಕ್ಕದ್ದು.

(4) ಜಾಹೀರಾತು ನಿಯಂತ್ರಣ ಸಮಿತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು ಎಂದರೆ:-

(i)	ಮುಖ್ಯ ಆಯುಕ್ತರು,ಗ್ರೇಟರ್ ಬೆಂಗಳೂರು ಪ್ರಾಧಿಕಾರ	ಪದನಿಮಿತ್ತ ಅಧ್ಯಕ್ಷರು
(ii)	ಬೆಂಗಳೂರಿನ ಪೊಲೀಸ್ ಆಯುಕ್ತರು ಅಥವಾ ಜಂಟಿ ಪೊಲೀಸ್ ಆಯುಕ್ತರ (ಸಂಚಾರ) ದರ್ಜೆಗಿಂತ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು	ಪದನಿಮಿತ್ತ ಸದಸ್ಯ
(iii)	ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ ಅಥವಾ ಮುಖ್ಯ ಅಭಿಯಂತರರ ದರ್ಜೆಗಿಂತ ಕಡಿಮೆಯಲ್ಲದ ಅವರ ಅಧಿಕೃತ ಪ್ರತಿನಿಧಿ	ಪದನಿಮಿತ್ತ ಸದಸ್ಯ
(iv)	ಗ್ರೇಟರ್ ಬೆಂಗಳೂರು ಪ್ರಾಧಿಕಾರದಮುಖ್ಯ ಆಯುಕ್ತರು ನಾಮನಿರ್ದೇಶಿಸಿದ ವಿಶೇಷ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ	ಪದನಿಮಿತ್ತ ಸದಸ್ಯ-ಕಾರ್ಯದರ್ಶಿ

ಪರಂತು, ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಇವರು ಸಮಿತಿಯ ಸದಸ್ಯರನ್ನು ಸೇರಿಸಬಹುದು, ತೆಗೆದುಹಾಕಬಹುದು ಅಥವಾ ಬದಲಾಯಿಸಬಹುದು.

24. ಜಾಹೀರಾತು ಸಲಹಾ ಸಮಿತಿ.- (1) ಹಿತಾಸಕ್ತಿದಾರರಿಂದ ಹೆಚ್ಚು ಸಮಾಲೋಚನೆಗಳು ಮತ್ತು ಮಾಹಿತಿಗಳನ್ನು ಪಡೆಯುವ ಸಲುವಾಗಿ ಒಂದು ಜಾಹೀರಾತಿ ಸಲಹಾ ಸಮಿತಿಯನ್ನು ರಚಿಸತಕ್ಕದ್ದು.

(2) ಈ ಸಮಿತಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.

(3) ಜಾಹೀರಾತು ಸಲಹಾ ಸಮಿತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು ಎಂದರೆ:-

(i)	ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ (ಬೆಂಗಳೂರು ನಗರ ಪ್ರಭಾರ)	ಪದನಿಮಿತ್ತ ಅಧ್ಯಕ್ಷರು
(ii)	ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ	ಪದನಿಮಿತ್ತ ಸದಸ್ಯ
(iii)	ನೋಂದಾಯಿತ ಹೊರಾಂಗಣ ಜಾಹೀರಾತು ಸಂಘದಿಂದ ಜಾಹೀರಾತು ಉದ್ಯಮದ ಒರ್ವ ಪ್ರತಿನಿಧಿ	ಸದಸ್ಯರು

(iv)	ಬೆಂಗಳೂರು ನಗರಪಾಲಿಕೆಯ ಓರ್ವ ಆಯುಕ್ತರು (ಆವರ್ತನಾ ಕ್ರಮದಲ್ಲಿ ಒಂದು ವರ್ಷದ ಅವಧಿಗೆ ಆಯ್ಕೆ ಮಾಡಬೇಕು)	ಸದಸ್ಯರು
(v)	ಬೆಂಗಳೂರು ನಗರಪಾಲಿಕೆಯ ಇನ್ನೋರ್ವ ಆಯುಕ್ತರು (ಆವರ್ತನಾ ಕ್ರಮದಲ್ಲಿ ಒಂದು ವರ್ಷದ ಅವಧಿಗೆ ಆಯ್ಕೆ ಮಾಡಬೇಕು)	ಸದಸ್ಯರು
(vi)	ವಿಶೇಷ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರ ನಾಮನಿರ್ದೇಶಿತರು)	ಪದನಿಮಿತ್ತ ಸದಸ್ಯ ಕಾರ್ಯದರ್ಶಿ

(4) ಒಂದು ವೇಳೆ ನೋಂದಾಯಿತ ಹೊರಾಂಗಣ ಜಾಹೀರಾತು ಸಂಘಗಳು ಒಂದಕ್ಕಿಂತ ಹೆಚ್ಚಿದ್ದ ಸಂದರ್ಭದಲ್ಲಿ, ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಇವರು ಯಾವ ಸಂಘವು ತನ್ನ ಪ್ರತಿನಿಧಿಯನ್ನು ಕಳುಹಿಸುವುದು ಎಂದು ನಿರ್ದರಿಸತಕ್ಕದ್ದು.

25. ರಿಜಿಸ್ಟರ್‌ಗಳ ನಿರ್ವಹಣೆ:- ಜಾಹೀರಾತು ಅಥವಾ ಜಾಹೀರಾತಿನ ಫಲಕವನ್ನು ಅಳವಡಿಸಲು ಪರವಾನಗಿ, ಅನುಮತಿ ಇತ್ಯಾದಿಗಳ ನೀಡಿಕೆಗೆ ಮತ್ತು ಈ ಸಂಬಂಧವಾಗಿ ಶುಲ್ಕ ಮತ್ತು ದಂಡ ಸಂಗ್ರಹಣೆಗೆ ಸಂಬಂಧಿಸಿದಂತೆ ಸಂಬಂಧಪಟ್ಟ ನಗರಪಾಲಿಕೆಯ ಪ್ರಧಾನ ಕಚೇರಿಯಲ್ಲಿ ಸಂಬಂಧಪಟ್ಟ ನಗರಪಾಲಿಕೆಯ ಆಯಾ ವಲಯ ಅಧಿಕಾರಿಯು ನಮೂನೆ-IX ನಲ್ಲಿರುವಂತೆ ಒಂದು ರಿಜಿಸ್ಟರ್ ಅನ್ನು ನಿರ್ವಹಿಸತಕ್ಕದ್ದು.

26. ನಿಯಮಗಳು ಆನ್‌ಲೈನ್‌ನಲ್ಲಿ ಲಭ್ಯವಿರುವುದು.-ಈ ನಿಯಮಗಳ ಒಂದು ಪ್ರತಿಯು ನಾಗರಿಕರಿಗೆ ಉಚಿತವಾಗಿ ಆನ್‌ಲೈನ್‌ನಲ್ಲಿ ಲಭ್ಯವಿರಬೇಕು ಮತ್ತು ಅದರ ಒಂದು ಪ್ರತಿಯನ್ನು ಪ್ರಧಾನ ಕಚೇರಿ, ವಲಯ ಕಚೇರಿ, ಕಂದಾಯ ಅಧಿಕಾರಿಗಳ ಕಛೇರಿ, ಸಹಾಯಕ ಕಂದಾಯ ಅಧಿಕಾರಿ ಕಛೇರಿ ಮತ್ತು ವಾರ್ಡ್ ಕಚೇರಿ ಸೇರಿದಂತೆ ನಗರಪಾಲಿಕೆಯ ಕಚೇರಿಗಳಲ್ಲಿ ಇಡತಕ್ಕದ್ದು ಮತ್ತು ಕಚೇರಿಯ ಸಮಯದಲ್ಲಿ ಯಾರೇ ವ್ಯಕ್ತಿಯಿಂದ ತಪಾಸಣೆಗಾಗಿ ಉಚಿತವಾಗಿ ಲಭ್ಯವಿರತಕ್ಕದ್ದು.

27. ತೊಂದರೆಗಳ ನಿವಾರಣೆ.- ಆಯುಕ್ತರು ಈ ನಿಯಮಗಳ ಯಾವುದೇ ಅಂಶಗಳ ಬಗ್ಗೆ ಸೂಕ್ತ ನಿರ್ದೇಶನಗಳು ಮತ್ತು ಸ್ಪಷ್ಟೀಕರಣಗಳನ್ನು ನೀಡಬಹುದು ಮತ್ತು ಅವುಗಳ ಅನುಷ್ಠಾನದಲ್ಲಿನ ತೊಂದರೆಗಳನ್ನು ನಿವಾರಿಸಲು ಸೂಕ್ತ ಆದೇಶಗಳನ್ನು ಹೊರಡಿಸಬಹುದು. ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆಗಳನ್ನುಆಯುಕ್ತರ ಅನುಮೋದನೆಯೊಂದಿಗೆ ಈ ನಿಯಮಗಳ ಯಾವುದೇ ಉದ್ದೇಶಗಳಿಗಾಗಿ ಸೂಕ್ತವಾಗಿ ಮಾರ್ಪಡಿಸಬಹುದು,ಸೇರಿಸಬಹುದು ಮತ್ತು ಅಳವಡಿಸಿಕೊಳ್ಳಬಹುದು.

28. ನಿರಸನ ಮತ್ತು ಉಳಿಸುವಿಕೆಗಳು.-ಬೆಂಗಳೂರು ಮಹಾನಗರ ಪಾಲಿಕೆ (ಜಾಹೀರಾತು) ಉಪ-ವಿಧಿಗಳು, 2024 ಅನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಅಂತಹ ನಿರಸನವು,

(i) (ಎ) ಸದರಿ ಉಪ-ವಿಧಿಗಳ ಅಡಿಯಲ್ಲಿ ಈ ಹಿಂದಿನ ಕಾರ್ಯಾಚರಣೆ ಅಥವಾ ಅದರ ಅಡಿಯಲ್ಲಿ ಕ್ರಮಬದ್ಧವಾಗಿ ಮಾಡಿದ ಅಥವಾ ಬಾಧಿತವಾದ ಯಾವುದೇ ಕಾರ್ಯದ; ಅಥವಾ

(ಬಿ) ಸದರಿ ಉಪ-ವಿಧಿಗಳ ಅಡಿಯಲ್ಲಿ ಆರ್ಜಿಸಿದ, ಪ್ರಾಪ್ತವಾದ ಅಥವಾ ಉಂಟಾದ ಯಾವುದೇ ಹಕ್ಕು, ಸವಲತ್ತು, ಬಾಧ್ಯತೆ ಅಥವಾ ಹೊಣೆಗಾರಿಕೆಯ

– ಮೇಲೆ ಪರಿಣಾಮ ಬೀರತಕ್ಕದ್ದಲ್ಲ;

(ii) (1)ನೇ ಉಪ-ಖಂಡದ ಮೂಲಕ ನಿರಸನಗೊಳಿಸಲಾದ ಯಾವುದೇ ಉಪ-ವಿಧಿಗಳಲ್ಲಿನ ಯಾವುದೇ ಉಲ್ಲೇಖ ಅಥವಾ ಉಪ-ವಿಧಿಗಳ ಆದೇಶವನ್ನು ಈ ನಿಯಮಗಳ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

(iii) ಈ ನಿಯಮಗಳ ಅಡಿಯಲ್ಲಿ ನಿರಸನಗೊಳಿಸಲಾದ ನಿಯಮಗಳ ಅಡಿಯಲ್ಲಿ ಪ್ರಾರಂಭಿಸಲಾದ ಹಾಗೂ ಈ ನಿಯಮಗಳ ಪ್ರಾರಂಭದ ದಿನಾಂಕದಂದು ಬಾಕಿ ಇರುವ ಎಲ್ಲಾ ವ್ಯವಹರಣೆಗಳನ್ನು ಈ ನಿಯಮಗಳ ಉಪಬಂಧಗಳ ಅನುಸಾರ ಮುಂದುವರಿಸತಕ್ಕದ್ದು ಮತ್ತು ವಿಲೇ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲಕ್ಷ್ಮೀಸಾಗರ ಎನ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
(ಜಿಬಿಎ ಮತ್ತು ಬೆಂ.ನ.ಪಾ-1)

ಅನುಸೂಚಿ–1
(ನಿಯಮ-7 ಮತ್ತು 13(10) ಅನ್ನು ನೋಡಿ)

ಈ ಕೆಳಗಿನ ಪ್ರದೇಶಗಳಲ್ಲಿ ಯಾವುದೇ ವಿಧವಾದ ಜಾಹೀರಾತನ್ನು ಪ್ರದರ್ಶಿಸತಕ್ಕದ್ದಲ್ಲ.

1. ಕುಮಾರಕೃಪ ರಸ್ತೆ, ವಿಂಡ್ಸರ್ ಮ್ಯಾನರ್ ಜಂಕ್ಷನ್‌ನಿಂದ ಶಿವಾನಂದ ವೃತ್ತದವರೆಗೆ
2. ರಾಜಭವನ ರಸ್ತೆ, ಹೈಗ್ರೌಂಡ್ಸ್ ನಿಂದ ಮಿನ್ಸ್ಕ್ ಸ್ಕ್ವೇರ್ ನವರೆಗೆ
3. ಸ್ಯಾಂಕಿ ರಸ್ತೆ, ಹೈಗ್ರೌಂಡ್ಸ್‌ನಿಂದ ವಿಂಡ್ಸರ್ ಯೀಲ್ಡ್ ಸಿಗ್ನಲ್ ನವರೆಗೆ
4. ಅಂಬೇಡ್ಕರ್ ವೀಧಿ, ಕೆ.ಆರ್. ವೃತ್ತದಿಂದ ಇನ್‌ಫೆಂಟ್ರಿ ರಸ್ತೆ ಜಂಕ್ಷನ್ ನವರೆಗೆ
5. ಪೋಸ್ಟ್ ಆಫೀಸ್ ರಸ್ತೆ, ಕೆ.ಆರ್. ವೃತ್ತದಿಂದ ಎಸ್‌ಬಿಐ ವೃತ್ತದವರೆಗೆ (ಕೆ.ಜಿ.ರಸ್ತೆ).
6. ಚಾಲುಕ್ಯ ಸರ್ಕಲ್
7. ಮಹಾರಾಣಿ ಕಾಲೇಜ್ ರಸ್ತೆ / ಶೇಷಾದ್ರಿ ರಸ್ತೆ,
8. ಕೆ.ಆರ್.ಸರ್ಕಲ್
9. ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್ ಆವರಣದಲ್ಲಿ
10. ನೃಪತುಂಗ ರಸ್ತೆ, ಕೆ.ಆರ್.ಸರ್ಕಲ್ ದಿಂದ ಪೊಲೀಸ್ ಕಾರ್ನರ್ ಜಂಕ್ಷನ್‌ವರೆಗೆ
11. ಪ್ಯಾಲೇಸ್ ರಸ್ತೆ, ಎಸ್‌ಬಿಐ ವೃತ್ತದಿಂದ ಚಾಲುಕ್ಯ ವೃತ್ತದವರೆಗೆ.

ಟಿಪ್ಪಣಿ:-

1. ಈಗಾಗಲೇ ಅಸ್ತಿತ್ವದಲ್ಲಿರುವ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ಮಾದರಿಯ ಅಡಿಯಲ್ಲಿ ನಿರ್ಮಿಸಲಾಗಿರುವ ಪಾದಚಾರಿ ಮೇಲುಸೇತುವೆಗಳು / ಸ್ಕೈವಾಕ್, ಬಸ್ಸು ತಂಗುದಾಣಗಳು, ಇ-ಶೌಚಾಲಯಗಳಲ್ಲಿನ ಜಾಹೀರಾತು ಪ್ರದರ್ಶನಕ್ಕೆ ಮಾತ್ರ ವಿನಾಯಿತಿ ಇರತಕ್ಕದ್ದು.
2. ಆಯುಕ್ತರು ಅಗತ್ಯವೆಂದು ಕಂಡುಬಂದಲ್ಲಿ, ಹೆಚ್ಚುವರಿ ಪ್ರದೇಶಗಳನ್ನು ಈ ಅನುಸೂಚಿಗೆ ಸೇರ್ಪಡೆಗೊಳಿಸಬಹುದು ಅಥವಾ ತೆಗೆದುಹಾಕಬಹುದು ಅಥವಾ ಮಾರ್ಪಾಡು ಮಾಡಬಹುದಾಗಿದೆ.

ಅನುಸೂಚಿ-2
(ನಿಯಮ 7(5) ಅನ್ನು ನೋಡಿ)

ಕ್ರ. ಸಂ	ರಸ್ತೆ ಅಥವಾ ಪ್ರದೇಶ ಅಥವಾ ವೃತ್ತದ ವಿಧ	ಪ್ರತಿ ಚ.ಅಡಿ.ಗೆ ಪ್ರತಿ ತಿಂಗಳಿಗೆ ಕನಿಷ್ಠ ಜಾಹೀರಾತು ಶುಲ್ಕ (ರೂಪಾಯಿಗಳಲ್ಲಿ)
1	ಕರ್ನಾಟಕ ಸ್ವಾತ್ಯಂಪು ಅಧಿನಿಯಮ, 1957 ರ ಪ್ರಕರಣ 45ಬಿ ಅಡಿಯಲ್ಲಿ ಪ್ರತಿ ಚದರ ಅಡಿಗೆ ರೂ.4000/- ಕ್ಕಿಂತ ಕಡಿಮೆ ಮಾರ್ಗಸೂಚಿ ಮೌಲ್ಯವನ್ನು ಹೊಂದಿರುವ ಯಾವುದೇ ರಸ್ತೆ ಅಥವಾ ಪ್ರದೇಶ ಅಥವಾ ವೃತ್ತ.	45/-
2	ಕರ್ನಾಟಕ ಸ್ವಾತ್ಯಂಪು ಅಧಿನಿಯಮ, 1957 ರ ಪ್ರಕರಣ 45ಬಿ ಅಡಿಯಲ್ಲಿ ಪ್ರತಿ ಚದರ ಅಡಿಗೆ ರೂ.4000/- ಕ್ಕಿಂತ ಹೆಚ್ಚು ಆದರೆ ರೂ.6000/- ಕ್ಕಿಂತ ಕಡಿಮೆ ಮಾರ್ಗಸೂಚಿ ಮೌಲ್ಯವನ್ನು ಹೊಂದಿರುವ ಯಾವುದೇ ರಸ್ತೆ ಅಥವಾ ಪ್ರದೇಶ ಅಥವಾ ವೃತ್ತ.	55/-
3	ಕರ್ನಾಟಕ ಸ್ವಾತ್ಯಂಪು ಅಧಿನಿಯಮ, 1957 ರ ಪ್ರಕರಣ 45ಬಿ ಅಡಿಯಲ್ಲಿ ಪ್ರತಿ ಚದರ ಅಡಿಗೆ ರೂ.6000/- ಕ್ಕಿಂತ ಹೆಚ್ಚು ಆದರೆ ರೂ.8000/- ಕ್ಕಿಂತ ಕಡಿಮೆ ಮಾರ್ಗಸೂಚಿ ಮೌಲ್ಯವನ್ನು ಹೊಂದಿರುವ ಯಾವುದೇ ರಸ್ತೆ ಅಥವಾ ಪ್ರದೇಶ ಅಥವಾ ವೃತ್ತ.	60/-
4	ಕರ್ನಾಟಕ ಸ್ವಾತ್ಯಂಪು ಅಧಿನಿಯಮ, 1957 ರ ಪ್ರಕರಣ 45ಬಿ ಅಡಿಯಲ್ಲಿ ಪ್ರತಿ ಚದರ ಅಡಿಗೆ ರೂ.8000/- ಕ್ಕಿಂತ ಹೆಚ್ಚು ಆದರೆ ರೂ.15000/-ಕ್ಕಿಂತ ಕಡಿಮೆ ಮಾರ್ಗಸೂಚಿ ಮೌಲ್ಯವನ್ನು ಹೊಂದಿರುವ ಯಾವುದೇ ರಸ್ತೆ ಅಥವಾ ಪ್ರದೇಶ ಅಥವಾ ವೃತ್ತ.	65/-
5	ಕರ್ನಾಟಕ ಸ್ವಾತ್ಯಂಪು ಅಧಿನಿಯಮ, 1957 ರ ಪ್ರಕರಣ 45ಬಿ ಅಡಿಯಲ್ಲಿ ಪ್ರತಿ ಚದರ ಅಡಿಗೆ ರೂ.15000/- ಕ್ಕಿಂತ ಹೆಚ್ಚು ಆದರೆ ರೂ.25000/-ಕ್ಕಿಂತ ಕಡಿಮೆ ಮಾರ್ಗಸೂಚಿ ಮೌಲ್ಯವನ್ನು ಹೊಂದಿರುವ ಯಾವುದೇ ರಸ್ತೆ ಅಥವಾ ಪ್ರದೇಶ ಅಥವಾ ವೃತ್ತ.	70/-
6	ಕರ್ನಾಟಕ ಸ್ವಾತ್ಯಂಪು ಅಧಿನಿಯಮ, 1957 ರ ಪ್ರಕರಣ 45ಬಿ ಅಡಿಯಲ್ಲಿ ಪ್ರತಿ ಚದರ ಅಡಿಗೆ ರೂ.4,25,000/- ಕ್ಕೆ ಸಮಾನವಾದ ಅಥವಾ ಅದಕ್ಕಿಂತ ಹೆಚ್ಚು ಮಾರ್ಗಸೂಚಿ ಮೌಲ್ಯವನ್ನು ಹೊಂದಿರುವ ಯಾವುದೇ ರಸ್ತೆ ಅಥವಾ ಪ್ರದೇಶ ಅಥವಾ ವೃತ್ತ.	75/-

ಅನುಸೂಚಿ-3

(ನಿಯಮ-3(II) ಮತ್ತು 19 ಅನ್ನು ನೋಡಿ)

ಅನುಮತಿಸಬಹುದಾದ ಜಾಹೀರಾತುಗಳ ಗರಿಷ್ಠ ಅಳತೆಗಳು ಮತ್ತು ಕನಿಷ್ಠ ಬಿಡಬೇಕಾದ ಜಾಗ (Clearance) ಮುಂತಾದವುಗಳ ವಿವರಗಳು.

ನಗರ ಪಾಲಿಕೆಯ ಆಯುಕ್ತರು, ಈ ಅನುಸೂಚಿಯಲ್ಲಿ ನಿಗದಿಪಡಿಸಲಾದ ಗರಿಷ್ಠ ಮಿತಿಗಳಿಗೆ ಒಳಪಟ್ಟು, ಯಾವುದೇ ಜಾಹೀರಾತುಗಳಿಗೆ ಸಂಬಂಧಿಸಿದಂತೆ ಪ್ರಮಾಣಿತ ಅಳತೆ ಗಾತ್ರ ಮತ್ತು ಅಳತೆಗಳನ್ನು ನಿಗದಿಪಡಿಸಬಹುದಾಗಿದೆ.

ಕ್ರ. ಸಂ	ಜಾಹೀರಾತು ಅಥವಾ ಪ್ರದರ್ಶನ ಫಲಕಗಳ ವಿಧ/ ವಿವರಣೆ	ಅನುಮತಿಸಬಹುದಾದುದು	ಅನುಮತಿ ಸದಿರುವುದು	ಪ್ರದೇಶದ/ ರಸ್ತೆಯ/ ವೃತ್ತದ ವಿಧ	ಉದ್ದ (ರಸ್ತೆಗೆ ಸಮಾನಂತರವಾಗಿ) (ಅಡಿಗಳಲ್ಲಿ)	ಅಗಲ (ರಸ್ತೆಗೆ ಲಂಬವಾಗಿ) (ಅಡಿಗಳಲ್ಲಿ)	ರಸ್ತೆ ಮಟ್ಟಕ್ಕಿಂತ ಗರಿಷ್ಠ ಎತ್ತರ (ಅಡಿಗಳಲ್ಲಿ)		ನೆಲದಿಂದ ಇರಬೇಕಾದ ಕನಿಷ್ಠ ಎತ್ತರ (ಅಡಿಗಳಲ್ಲಿ)	ಪ್ರತಿ ತಿಂಗಳಿಗೆ ಪ್ರತಿ ಚದರ ಅಡಿಗೆ ದರ (ರೂಪಾಯಿಗಳಲ್ಲಿ)	ಷರಾ
1.	ಜಾಹೀರಾತು ಫಲಕ (ಬಿಲ್ಬೋರ್ಡ್), ಬೃಹತ್ ಜಾಹೀರಾತು ಫಲಕ (ಹೋರ್ಡಿಂಗ್), ಏಕಕಂಬದ ಜಾಹೀರಾತು ಫಲಕ (ಯುನಿಪೋಲ್) ಅಥವಾ ದ್ವಿ ಕಂಬದ ಜಾಹೀರಾತು ಫಲಕ	(i) 60 ಅಡಿಗಿಂತ ಕಡಿಮೆ ಇಲ್ಲದ ರಸ್ತೆಗಳು ಅಥವಾ ಅನುಮೋದಿತ ಮಾಸ್ಟರ್ ಪ್ಲಾನ್‌ನಲ್ಲಿನ ವಾಣಿಜ್ಯ ಅಥವಾ ಕೈಗಾರಿಕೆ ಪ್ರದೇಶಗಳು (ii) ನಿಯಮಗಳಲ್ಲಿನ ವಿವರಗಳು	ನಿಯಮ 13 & 14 ಮತ್ತು ಇತರೆ ನಿಯಮಗಳ ಪ್ರಕಾರ	>=60 ಅಡಿ &<80 ಅಡಿ	40	30	90		ನೆಲದ ಮೇಲೆ ಅಳವಡಿಸಲಾದಲ್ಲಿ 7 ಅಡಿ ಗೋಡೆ ಅಥವಾ ಛಾವಣಿ ಮೇಲಿನ ಜಾಹೀರಾತಿಗೆ ಅನ್ವಯಿಸುವುದಿಲ್ಲ.	i) ಪ್ರತಿ ಚದರ ಅಡಿಗೆ ನಿಗದಿಪಡಿಸಿದ ಕನಿಷ್ಠ ದರಕ್ಕೊಳಪಟ್ಟು ಹರಾಜಿನಲ್ಲಿ / ಟೆಂಡರ್ ನಲ್ಲಿ ಅಂತಿಮ ಗೊಂಡ ಮೊತ್ತಕ್ಕನುಸಾರವಾಗಿ, ii) ನಿಯಮಗಳ ಪ್ರಕಾರ ಪಿ.ಪಿ.ಪಿ. ಅಥವಾ	ಯಾವುದೇ ಕಟ್ಟಡದ ಛಾವಣಿಯ ಅಂಚನ್ನು ಮೀರಿ ಯಾವುದೇ ಬದಿಯಿಂದ ಹೊರಕ್ಕೆ ಚಾಚಿರಬಾರದು. ದಾರಿಹಕ್ಕಿನ (ಆರ್.ಓ.ಡಬ್ಲ್ಯೂ) ಮೇಲೆ ಚಾಚಿಕೊಂಡಿರಬಾರದು ಹಾಗೂ ದಾರಿಹಕ್ಕಿನ ಅಂಚಿನಿಂದ (ಆರ್.ಓ.ಡಬ್ಲ್ಯೂ) ಕನಿಷ್ಠ 5 ಮೀ. ದೂರದಲ್ಲಿರತಕ್ಕ
				>=80 ಅಡಿ &<100 ಅಡಿ	40	30	90				
				>=100 ಅಡಿ &<200 ಅಡಿ	50	30	90				
				>=200 ಅಡಿ	5೦	30	90				

	(ಬೈಪೋಲ್) ಅಥವಾ ತ್ರಿಕೋನ ಚೌಕಟ್ಟಿನ (ಟ್ರಸ್) ರಚನೆ								ಒಪ್ಪಂದದ ಅನುಸಾರ	ದ್ದು.
2.	ಟೈ ವಿಷನ್ (ತ್ರಿಕೋನ ಜಾಹೀರಾತು ಫಲಕ)	(i) 60 ಅಡಿಗಿಂತ ಕಡಿಮೆ ಇಲ್ಲದ ರಸ್ತೆಗಳು ಅಥವಾ ಅನುಮೋದಿತ ಮಾಸ್ಟರ್ ಪ್ಲಾನ್‌ನಲ್ಲಿನ ವಾಣಿಜ್ಯ ಅಥವಾ ಕೈಗಾರಿಕೆ ಪ್ರದೇಶಗಳು (ii) ನಿಯಮಗಳಲ್ಲಿನ ವಿವರಗಳು	ನಿಯಮ 13 & 14 ಮತ್ತು ಇತರೆ ನಿಯಮಗಳ ಪ್ರಕಾರ	ಜಾಹೀರಾತು ಫಲಕಗಳು ಇತ್ಯಾದಿಗಳಿಗೆ ಅನುಮತಿಸಿದ ಅಳತೆಗಳಲ್ಲಿನ ಶೇ.60 ರಷ್ಟು				50	ನೆಲದ ಮೇಲೆ ಅಳವಡಿಸಿದಲ್ಲಿ 10 ಅಡಿ ಗೋಡೆ ಅಥವಾ ಛಾವಣಿ ಮೇಲಿನ ಜಾಹೀರಾತಿಗೆ ಅನ್ವಯಿಸುವುದಿಲ್ಲ.	(i) ಪ್ರತಿ ಚದರ ಅಡಿಗೆ ನಿಗದಿಪಡಿಸಿದ ಕನಿಷ್ಠ ದರಕ್ಕೊಳಪಟ್ಟು ಹರಾಜಿನಲ್ಲಿ / ಟೆಂಡರ್‌ನಲ್ಲಿ ಅಂತಿಮ ಗೊಂಡ ಮೊತ್ತಕ್ಕನುಸಾರವಾಗಿ, (ii) ನಿಯಮಗಳ ಪ್ರಕಾರ ಪಿ.ಪಿ.ಪಿ. ಅಥವಾ ಒಪ್ಪಂದದ ಅನುಸಾರ	ದಾರಿಹಕ್ಕಿನ (ಆರ್.ಓ.ಡಬ್ಲ್ಯೂ) ಮೇಲೆ ಚಾಚಿಕೊಂಡಿರಬಾರದು ಹಾಗೂ ದಾರಿಹಕ್ಕಿನಿಂದ (ಆರ್.ಓ.ಡಬ್ಲ್ಯೂ) ಕನಿಷ್ಠ 5 ಮೀ. ಅಂಚಿನಿಂದ ದೂರದಲ್ಲಿರತಕ್ಕದ್ದು.
3.	ಎಲ್‌ಇಡಿ/ ಎಲ್‌ಸಿಡಿ ಇತರ ವಿದ್ಯುನ್ಮಾನ ಪ್ರದರ್ಶನ ಫಲಕಗಳು	(i) 60 ಅಡಿಗಿಂತ ಕಡಿಮೆ ಇಲ್ಲದ ರಸ್ತೆಗಳು ಅಥವಾ ಅನುಮೋದಿ	ನಿಯಮ 13 & 14 ಮತ್ತು ಇತರೆ ನಿಯಮಗಳ	ಕ್ರಮ ಸಂಖ್ಯೆ 1ರಲ್ಲಿ ಜಾಹೀರಾತು ಫಲಕ ಇತ್ಯಾದಿಗಳಿಗೆ ಅನುಮತಿಸಿದ ಅಳತೆಗಳಲ್ಲಿನ ಶೇ.60 ರಷ್ಟು				90	ನೆಲದ ಮೇಲೆ ಅಳವಡಿಸಿದಲ್ಲಿ 7 ಅಡಿ ಗೋಡೆ ಅಥವಾ ಛಾವಣಿ ಮೇಲಿನ ಜಾಹೀರಾತಿಗೆ	(i) ಪ್ರತಿ ಚದರ ಅಡಿಗೆ ನಿಗದಿಪಡಿಸಿದ ಕನಿಷ್ಠ ದರಕ್ಕೊಳಪಟ್ಟು	ಯಾವುದೇ ಕಟ್ಟಡದ ಛಾವಣಿಯ ಯಾವುದೇ ಬದಿಯಿಂದ ಹೊರಚಾಚದಂತೆ.

	ಇತ್ಯಾದಿಗಳಂತಹ ವ್ಯತ್ಯಯವಾಗುವ (ವೇರಿಯಬಲ್) ಸಂದೇಶ ಜಾಹೀರಾತು ಸಾಧನಗಳು	ತ ಮಾಸ್ಟರ್ ಪ್ಲಾನ್‌ನಲ್ಲಿನ ವಾಣಿಜ್ಯ ಅಥವಾ ಕೈಗಾರಿಕೆ ಪ್ರದೇಶಗಳು (ii)ನಿಯಮಗಳಲ್ಲಿನ ವಿವರಗಳು	ಪ್ರಕಾರ			ಅನ್ವಯಿಸುವುದಿಲ್ಲ.	ಹರಾಜಿನಲ್ಲಿ / ಟೆಂಡರ್‌ನಲ್ಲಿ ಅಂತಿಮ ಗೊಂಡ ಮೊತ್ತಕ್ಕನುಸಾರವಾಗಿ, (ii) ನಿಯಮಗಳ ಪ್ರಕಾರ ಪಿ.ಪಿ.ಪಿ. ಅಥವಾ ಒಪ್ಪಂದದ ಅನುಸಾರ	ದಾರಿಹಕ್ಕಿನ (ಆರ್.ಓ.ಡಬ್ಲ್ಯೂ) ಮೇಲೆ ಬಾರದಂತೆ ಹಾಗೂ ದಾರಿ ಹಕ್ಕಿನಿಂದ (ಆರ್.ಓ.ಡಬ್ಲ್ಯೂ) ಕನಿಷ್ಠ 5 ಮೀ. ಅಂಚಿನಿಂದ ಅಂತರವಿರತಕ್ಕದ್ದು.
4.	ಸಾರ್ವಜನಿಕ ಶೌಚಾಲಯ / ಕುಡಿಯುವ ನೀರಿನ ಕಿಯೋಸ್ಕ್‌ಗಳು, ಬಿಲ್ ಕಿಯೋಸ್ಕ್‌ಗಳು ಇತ್ಯಾದಿಗಳಂತಹ ಸಾರ್ವಜನಿಕ ಉಪಯುಕ್ತತೆಗಳು	(i) 60 ಅಡಿಗಿಂತ ಕಡಿಮೆ ಇಲ್ಲದ ರಸ್ತೆಗಳು ಅಥವಾ ಅನುಮೋದಿತ ಮಾಸ್ಟರ್ ಪ್ಲಾನ್‌ನಲ್ಲಿನ ವಾಣಿಜ್ಯ ಅಥವಾ ಕೈಗಾರಿಕೆ ಪ್ರದೇಶಗಳು (ii) ನಿಯಮಗಳಲ್ಲಿನ ವಿವರಗಳು	ನಿಯಮ 13 & 14 ಮತ್ತು ಇತರೆ ನಿಯಮಗಳ ಪ್ರಕಾರ	(i) ಕಟ್ಟಡ ಸುತ್ತುವರಿಕೆಯನ್ನು ಜಾಹೀರಾತಿಗಾಗಿ ಬಳಸಬಹುದು ಆದರೆ, ಕಟ್ಟಡದ ಮೇಲ್ಛಾಗದಲ್ಲಿ 2 ಅಡಿ ಮತ್ತು ಕೆಳಭಾಗದಲ್ಲಿ 1 ಅಡಿ ಖಾಲಿ ಬಿಡತಕ್ಕದ್ದು. (ii) ಶೌಚಾಲಯದ ಮೇಲ್ಛಾವಣಿ ಮೇಲೆ ಅಳವಡಿಸಲಾದ ಜಾಹೀರಾತು ಫಲಕದ ಅಗಲವು 4 ಅಡಿಗಿಂತ (ಲಂಬವಾಗಿ) ಇರಬಾರದು ಹಾಗೂ ಉದ್ದವು ಶೌಚಾಲಯದ ಮೇಲ್ಛಾವಣಿಯ ಉದ್ದಕ್ಕಿಂತ ಹೆಚ್ಚಿರಬಾರದು.	ಶೌಚಾಲಯದ ಮೇಲ್ಛಾಣಿಯಿಂದ 2.5 ಅಡಿ ಎತ್ತರಕ್ಕೆ	ಗೋಡೆ ಅಥವಾ ಛಾವಣಿ ಮೇಲಿನ ಜಾಹೀರಾತು ಆಗಿರುವುದರಿಂದ ಅನ್ವಯಿಸುವುದಿಲ್ಲ.	(i) ಪ್ರತಿ ಚದರ ಅಡಿಗೆ ನಿಗದಿಪಡಿಸಿದ ಕನಿಷ್ಠ ದರಕ್ಕೊಳಪಟ್ಟು ಹರಾಜಿನಲ್ಲಿ / ಟೆಂಡರ್‌ನಲ್ಲಿ ಅಂತಿಮ ಗೊಂಡ ಮೊತ್ತಕ್ಕನುಸಾರವಾಗಿ, (ii) ನಿಯಮಗಳ ಪ್ರಕಾರ ಪಿ.ಪಿ.ಪಿ. ಅಥವಾ ಒಪ್ಪಂದದ ಅನುಸಾರ	ಯಾವುದೇ ಕಟ್ಟಡದ ಛಾವಣಿಯ ಯಾವುದೇ ಬದಿಯಿಂದ ಹೊರಚಾಚುವಂತೆ ಅನುಮತಿಸತಕ್ಕದ್ದಲ್ಲ. ದಾರಿಹಕ್ಕಿನ ಮೇಲೆ ಬರುವಂತೆ ಅನುಮತಿಸತಕ್ಕದ್ದಲ್ಲ.

5.	ಪೊಲೀಸ್ ನೆರವು ಕಿಯೋಸ್ಕ್, ಸಂಚಾರಿ ನೆರವು ಕಿಯೋಸ್ಕ್, ಟೀ/ಕಾಫೀ ಕಿಯೋಸ್ಕ್ ಗಳು, ಸ್ನಾಕ್ಸ್ ಬಾರ್‌ಗಳು, ಪಾನ್ ಅಂಗಡಿ, ಹೂವಿನ ಅಂಗಡಿ, ಸಿಗರೇಟ್ ಕಿಯೋಸ್ಕ್, ಕ್ಷೌರಿಕ, ಚರ್ಮಾರ ಕಿಯೋಸ್ಕ್,	(i) 60 ಅಡಿಗಿಂತ ಕಡಿಮೆ ಇಲ್ಲದ ರಸ್ತೆಗಳು ಅಥವಾ ಅನುಮೋದಿತ ಮಾಸ್ಟರ್ ಪ್ಲಾನ್‌ನಲ್ಲಿನ ವಾಣಿಜ್ಯ ಅಥವಾ ಕೈಗಾರಿಕೆ ಪ್ರದೇಶಗಳು (ii) ನಿಯಮಗಳಲ್ಲಿನ ವಿವರಗಳು	ನಿಯಮ 13 & 14 ಮತ್ತು ಇತರೆ ನಿಯಮಗಳ ಪ್ರಕಾರ	(i) ಕಿಯೋಸ್ಕ್ ನ ಬದಿ ಗೋಡೆಗಳು ಅಥವಾ ಮುಂಭಾಗದ ಒಳಗೆ ಜೋಡಣೆಯಾಗುವ ಅಳತೆಯ ಮತ್ತು ಆ ಭಾಗದ ಶೇ.70 ಕ್ಕಿಂತ ಹೆಚ್ಚಿರದ ಛಿತ್ತಿಚಿತ್ರದ ಗಾತ್ರ. (ii) 4 ಅಡಿ ಅಗಲ (ಲಂಬ) ಹಾಗೂ ಕಿಯೋಸ್ಕ್ ನ ಬದಿ ಉದ್ದವನ್ನು ಮೀರದ ರೀತಿಯಲ್ಲಿ ಛಾವಣಿಯ ಮೇಲಿನ ಜಾಹೀರಾತು ಫಲಕ.	ಶೌಚಾಲಯದ ಮೇಲ್ಛಾಣಿಯ ಮೇಲೆ 1.50 ಅಡಿ	ಗೋಡೆ ಅಥವಾ ಛಾವಣಿ ಮೇಲಿನ ಜಾಹೀರಾತು ಆಗಿರುವುದರಿಂದ ಅನ್ವಯಿಸುವುದಿಲ್ಲ.	(i) ಪ್ರತಿ ಚದರ ಅಡಿಗೆ ನಿಗದಿಪಡಿಸಿದ ಕನಿಷ್ಠ ದರಕ್ಕೊಳಟ್ಟು ಹರಾಜಿನಲ್ಲಿ / ಟೆಂಡರ್‌ನಲ್ಲಿ ಅಂತಿಮ ಗೊಂಡ ಮೊತ್ತಕ್ಕನುಸಾರವಾಗಿ, (ii) ನಿಯಮಗಳ ಪ್ರಕಾರ ಪಿ.ಪಿ.ಪಿ. ಅಥವಾ ಒಪ್ಪಂದದ ಅನುಸಾರ	ಯಾವುದೇ ಕಟ್ಟಡದ ಛಾವಣಿಯ ಅಂಚನ್ನು ಮೀರಿ ಯಾವುದೇ ಬದಿಯಿಂದ ಹೊರಚಾಚುವಂತೆ ಅನುಮತಿಸತಕ್ಕದ್ದಲ್ಲ. ದಾರಿಹಕ್ಕಿನ ಮೇಲೆ ಬರುವಂತೆ ಅನುಮತಿಸತಕ್ಕದ್ದಲ್ಲ.
6.	ಬೆಂಚುಗಳು, ಗಡಿಯಾರ ಗೋಪುರಗಳು, ಕಸದ ತೊಟ್ಟಿ ಮುಂತಾದ ಬೀದಿ ಪೀಠೋಪಕರಣಗಳು	i) 60 ಅಡಿಗಿಂತ ಕಡಿಮೆ ಇಲ್ಲದ ರಸ್ತೆಗಳು ಅಥವಾ ಅನುಮೋದಿತ ಮಾಸ್ಟರ್ ಪ್ಲಾನ್‌ನಲ್ಲಿನ ವಾಣಿಜ್ಯ ಅಥವಾ ಕೈಗಾರಿಕೆ ಪ್ರದೇಶಗಳು	ನಿಯಮ 13 & 14 ಮತ್ತು ಇತರೆ ನಿಯಮಗಳ ಪ್ರಕಾರ	ಪೀಠೋಪಕರಣ/ವಸ್ತುವಿನ ಅಳತೆಗಳಿಗೆ ಹೊಂದಿಕೆಯಾಗುವ ಮತ್ತು ಅದರ ಶೇ. 70ಕ್ಕಿಂತ ಹೆಚ್ಚಿಲ್ಲದ ಅಳತೆಯ ಪ್ರದರ್ಶನ ಫಲಕ ಅಥವಾ ಪಿಪಿಪಿ ಅಥವಾ ಒಪ್ಪಂದದ ಸಂದರ್ಭದಲ್ಲಿ ಒಪ್ಪಂದದ ಭಾಗವಾಗುವ ಯೋಜನೆಯ ಟೆಂಡರ್ ದಾಖಲೆಯಲ್ಲಿ ನಿರ್ದಿಷ್ಟಪಡಿಸಿದ ಅಳತೆಯ ಪ್ರದರ್ಶನ ಫಲಕ.	ಅನ್ವಯಿಸುವುದಿಲ್ಲ.	ಅಂಟಿಸಿದ ಜಾಹೀರಾತಿಗೆ ಅನ್ವಯಿಸುವುದಿಲ್ಲ.	(i) ಪ್ರತಿ ಚದರ ಅಡಿಗೆ ನಿಗದಿಪಡಿಸಿದ ಕನಿಷ್ಠ ದರಕ್ಕೊಳಟ್ಟು ಹರಾಜಿನಲ್ಲಿ / ಟೆಂಡರ್‌ನಲ್ಲಿ ಅಂತಿಮ ಗೊಂಡ ಮೊತ್ತಕ್ಕನು	ಅನ್ವಯಿಸುವುದಿಲ್ಲ

		ii) ನಿಯಮಗಳಲ್ಲಿನ ವಿವರಗಳು					ಸಾರವಾಗಿ, (ii) ನಿಯಮಗಳ ಪ್ರಕಾರ ಪಿ.ಪಿ.ಪಿ. ಅಥವಾ ಒಪ್ಪಂದದ ಅನುಸಾರ	
7.	ಮೆಟ್ರೋ ಕಂಬಗಳು, ರಸ್ತೆ ಮೇಲುಸೇತುವೆಯ ಬೃಹತ್ ಕಂಬಗಳು ಇತ್ಯಾದಿ	i) 60 ಅಡಿಗಿಂತ ಕಡಿಮೆ ಇಲ್ಲದ ರಸ್ತೆಗಳು ii) ಅಂತಹ ರಚನೆಗಳು ಇರುವ ಸ್ಥಳಗಳಿಗೆ ಅನುಗುಣವಾಗಿ iii) ನಿಯಮಗಳಲ್ಲಿನ ವಿವರಗಳು	ನಿಯಮ 13 & 14 ಮತ್ತು ಇತರೆ ನಿಯಮಗಳ ಪ್ರಕಾರ	(i) ಪ್ರದರ್ಶನ ಫಲಕದ ಗಾತ್ರವು ಕಂಬಗಳು ಅಥವಾ ಬೃಹತ್ ಕಂಬದ ಅಳತೆಗಳ ಒಳಗೆ ಹೊಂದಿಕೊಳ್ಳುವಂತಿರಬೇಕು. ಆದರೆ 10 ಅಡಿಗಿಂತ ಹೆಚ್ಚಿಗಿರಬಾರದು ಹಾಗೂ ಬೃಹತ್ ಕಂಬದ ಆಚೆಗೆ ಹೊರಚಾಚಿಕೊಂಡಿರತಕ್ಕದ್ದಲ್ಲ. (ii) ಮೇಲ್ಸೇತುವೆಗೆ ಆಧಾರವಾಗಿರುವಟಿ ಆಕಾರದ ಕಂಬ ಅಥವಾ ಬೃಹತ್ ಕಂಬದ ಸಂದರ್ಭದಲ್ಲಿ, ಪ್ರದರ್ಶನ ಫಲಕವು ಲಂಬ ಕಂಬಕ್ಕೆ ಮಾತ್ರ ಸೀಮಿತವಾಗಿರಬೇಕು ಮತ್ತು ಲಂಬ ಕಂಬದ ಅಗಲದ ಆಚೆಗೆ ಚಾಚಿಕೊಂಡಿರತಕ್ಕದ್ದಲ್ಲ.	20 ಅಡಿ	6 ಅಡಿ	(i) ಪ್ರತಿ ಚದರ ಅಡಿಗೆ ನಿಗದಿಪಡಿಸಿದ ಕನಿಷ್ಠ ದರಕ್ಕೊಳಪಟ್ಟು ಹರಾಜಿನಲ್ಲಿ / ಟೆಂಡರ್ ನಲ್ಲಿ ಅಂತಿಮಗೊಂಡ ಮೊತ್ತಕ್ಕನುಸಾರವಾಗಿ, (ii) ನಿಯಮಗಳ ಪ್ರಕಾರ ಪಿ.ಪಿ.ಪಿ. ಅಥವಾ ಒಪ್ಪಂದದ ಅನುಸಾರ	ಯಾವುದೇ ಕಟ್ಟಡದ ಛಾವಣಿಯ ಯಾವುದೇ ಬದಿಯಿಂದ ಹೊರಚಾಚುವಂತೆ ಅನುಮತಿಸತಕ್ಕದ್ದಲ್ಲ. ದಾರಿಹಕ್ಕಿನ ಮೇಲೆ ಬರುವಂತೆ ಅನುಮತಿಸತಕ್ಕದ್ದಲ್ಲ.
8	ಧ್ವಜ ಚಿಹ್ನೆಗಳು	(i) ವಾಣಿಜ್ಯ ಪ್ರದೇಶಗಳು / ಮಾರುಕಟ್ಟೆಗಳಲ್ಲಿ ಮಾತ್ರ ಅನುಮತಿಸ	ನಿಯಮ 13 & 14 ಮತ್ತು ಇತರೆ		6 ಅಡಿ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಪ್ರತಿ ಚದರ ಅಡಿಗೆ ಗೊತ್ತುಪಡಿಸಿದ ಕನಿಷ್ಠ ದರಕ್ಕೆ ಒಳಪಟ್ಟು	i) ಯಾವುದೇ ವಾಹನ ಪಾದಚಾರಿ, ಸಾರಿಗೆ ಸಂಚಾರಕ್ಕೆ

		ಲಾಗಿದೆ. (ii) ಇವುಗಳನ್ನು ಅಂಗಡಿಯ ಮಾಲೀಕರು ಮಾರುಕಟ್ಟೆ ಪ್ರದೇಶಗಳಲ್ಲಿ ಬಳಸತಕ್ಕದ್ದು ಮತ್ತು ಇವುಗಳು ಏಕರೂಪ ಗಾತ್ರ ಹಾಗೂ ಮಾದರಿಯಲ್ಲಿರತಕ್ಕದ್ದು	ನಿಯಮಗಳ ಪ್ರಕಾರ					ಹರಾಜಿನಲ್ಲಿ ಪಡೆಯಲಾದ ದರದ ಪ್ರಕಾರ.	ಅಡ್ಡಿಯಾಗತಕ್ಕದ್ದಲ್ಲ. ii) ಚೂಪಾದ ಅಂಚುಗಳನ್ನು ಹೊಂದಿರತಕ್ಕದ್ದಲ್ಲ. ಮಾರುಕಟ್ಟೆಗಳು ಅಥವಾ ವಾಣಿಜ್ಯ ಪ್ರದೇಶಗಳಲ್ಲಿ ಮಾತ್ರ ಪ್ರದರ್ಶಿಸತಕ್ಕದ್ದು.
9	ಅನೌಪಚಾರಿಕ ಜಾಹೀರಾತು ಸಾಧನಗಳು	ಗುರುತಿಸಲಾದ ಸ್ಥಳಗಳು ಮತ್ತು ತಾಣಗಳು ಹಾಗೂ ನಿವೇಶನಗಳು ಅಥವಾ ನಿರ್ದಿಷ್ಟ ಗೋಡೆಗಳಲ್ಲಿ ಮಾತ್ರ.	(i)ನಿಯಮ 13 & 14 ಮತ್ತು ಇತರೆ ನಿಯಮಗಳ ಪ್ರಕಾರ (ii)ಯಾವುದೇ ರಸ್ತೆಯಲ್ಲಿ ಅನುಮತಿಸತಕ್ಕದ್ದಲ್ಲ		7 ಅಡಿ ಉದ್ದ (ಸಮತಲ)	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	10 ಅಡಿ	ಪ್ರತಿ ಚದರ ಅಡಿಗೆ ಗೊತ್ತುಪಡಿಸಿದ ಕನಿಷ್ಠ ದರಕ್ಕೆ ಒಳಪಟ್ಟು ಹರಾಜಿನಲ್ಲಿ ಪಡೆಯಲಾದ ದರದ ಪ್ರಕಾರ.

10	ಬಸ್ ಮೇಲಿನ ಜಾಹೀರಾತುಗಳು (ಖಾಸಗಿ ಮತ್ತು ಸಾರ್ವಜನಿಕ ಬಸ್‌ಗಳೆರಡೂ)	ಬಸ್ಸುಗಳ ಮೇಲೆ ಮಾತ್ರ ಪ್ರದರ್ಶಿಸತಕ್ಕದ್ದು.	ಯಾವುದೇ ಸ್ಥಳದಲ್ಲಿ ನಿಲ್ಲಿಸಿ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ.	ವಾಹನದ ಮುಂಭಾಗವನ್ನು ಹೊರತುಪಡಿಸಿ ವಾಹನದ ಪ್ರತಿ ಬದಿಯ ಮೇಲ್ಮೈನ ವಿಸ್ತೀರ್ಣದ ಶೇ.70 ರಷ್ಟು ಜಾಗ ಮೀರತಕ್ಕದ್ದಲ್ಲ.	ಅನ್ವಯಿಸುವುದಿಲ್ಲ	10 ಅಡಿ	ಪ್ರತಿ ಚದರ ಅಡಿಗೆ ರೂ. 50/- ಅಥವಾ ಪ್ರತಿ ವಾಹನಕ್ಕೆ ಪ್ರತಿ ತಿಂಗಳಿಗೆ ರೂ. 500/-	i) ಜಾಹೀರಾತಿನ ಏಕೈಕ ಉದ್ದೇಶಕ್ಕಾಗಿ ಯಾವುದೇ ವಾಹನವನ್ನು ಅನುಮತಿಸಲಾಗುವುದಿಲ್ಲ. ii) ಜನರನ್ನು ಹಾಗೂ ಸರಕು ಸಾಗಾಣಿಕೆ ಉದ್ದೇಶ ಹೊಂದಿರುವ ವಾಹನಗಳಿಗೆ ಮಾತ್ರ ಅನುಮತಿಸತಕ್ಕದ್ದು. iii) ಜಾಹೀರಾತು ಹೊಂದಿರುವ ಯಾವುದೇ ವಾಹನವು ಯಾವುದೇ ದಾರಿನ ಹಕ್ಕಿನ ಮೇಲೆ ಮತ್ತು ದಾರಿ ಹಕ್ಕಿನಿಂದ ಕಾಣಬಹುದಾದ ಖಾಸಗಿ ಸ್ಥಳದಲ್ಲಿ ನಿಲ್ಲಿಸಿ ಜಾಹೀರಾತು ಪ್ರದರ್ಶಿಸಲು

								ಅವಕಾಶವಿರುವುದಿಲ್ಲ. iv) ಜಾಹೀರಾತುಗಳಲ್ಲಿ ಯಾವುದೇ ಅನಿಮೇಷನ್ ಅಥವಾ ಚಲನೆಯನ್ನು ಅನುಮತಿಸಲಾಗುವುದಿಲ್ಲ. v) ಯಾವುದೇ ಅಳವಡಿಸಿರುವ ಜಾಹೀರಾತು ಪ್ರದರ್ಶನವು ವಾಹನದ ಚಿಹ್ನೆ, ವಾಹನದ ಸಂಖ್ಯೆ ಹಾಗೂ ವಾಹನ ಚಲಿಸುವ ಮಾರ್ಗದ ಮಾಹಿತಿಯನ್ನು ಅಡ್ಡಿಪಡಿಸುವಂತಿಲ್ಲ
11.	ಮೆಟ್ರೋ ರೈಲು ಜಾಹೀರಾತುಗಳು	ಮೆಟ್ರೋ ರೈಲಿನ ಬೋಗಿಗಳ ಮೇಲೆ ಮಾತ್ರ ಪ್ರದರ್ಶಿಸಲಾಗುತ್ತದೆ		ನಗರದೊಳಗೆ ಚಲಿಸುವ ಮೆಟ್ರೋ ರೈಲು ಅಥವಾ ನಗರ ರೈಲುಗಳು, ಜಾಹೀರಾತಿನ ಉದ್ದೇಶಕ್ಕಾಗಿ ರೈಲು ವ್ಯಾಗನ್ ಅಥವಾ ಬೋಗಿಗಳ ಸಂಪೂರ್ಣ ಬಾಹ್ಯ ಭಾಗವನ್ನು ಅಥವಾ ವಿಸ್ತೀರ್ಣವನ್ನು ಬಳಸಿಕೊಳ್ಳಬಹುದು.	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಪ್ರತಿ ತಿಂಗಳಿಗೆ ಪ್ರತಿ ಚದರ ಅಡಿಗೆ ರೂ. 50/- ಅಥವಾ ಪ್ರತಿ ಬೋಗಿಗೆ ರೂ. 750/-	

12.	ವಿತರಣಾ ಮತ್ತು ಸೇವಾ ವಾಹನಗಳ ಮೇಲಿನ ಜಾಹೀರಾತುಗಳು	ವಾಹನಗಳ ಮೇಲೆ ಮಾತ್ರ ಪ್ರದರ್ಶಿಸತಕ್ಕದ್ದು	ಯಾವುದೇ ಸ್ಥಳದಲ್ಲಿ ನಿಲ್ಲಿಸಿ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ	ವಾಹನದ ಮುಂಭಾಗವನ್ನು ಹೊರತುಪಡಿಸಿ ವಾಹನದ ಪ್ರತಿ ಬದಿಯ ಮೇಲ್ಮೈನ ವಿಸ್ತೀರ್ಣದ ಶೇ.50 ರಷ್ಟು ಜಾಗ ಮೀರತಕ್ಕದ್ದಲ್ಲ.	ಅನ್ವಯಿಸುವುದಿಲ್ಲ	6 ಅಡಿ	ಪ್ರತಿ ತಿಂಗಳಿಗೆ ಪ್ರತಿ ಚದರ ಅಡಿಗೆ ರೂ. 75/- ಅಥವಾ ಪ್ರತಿ ನಾಲ್ಕು ಚಕ್ರ ವಾಹನಕ್ಕೆ ರೂ. 750/- ಮತ್ತು ಪ್ರತಿ ಮೂರು ಚಕ್ರದ ವಾಹನಕ್ಕೆ ಪ್ರತಿ ತಿಂಗಳಿಗೆ ರೂ. 100/-	(i) ಜಾಹೀರಾತಿನ ಏಕೈಕ ಉದ್ದೇಶಕ್ಕಾಗಿ ಯಾವುದೇ ವಾಹನವನ್ನು ಅನುಮತಿಸಲಾಗುವುದಿಲ್ಲ. (ii) ವಿತರಣಾ ವಾಹನವು ಅವರ ಸ್ವಂತ ಉತ್ಪನ್ನ / ಸೇವೆಗಳನ್ನು ಜಾಹೀರಾತು ಮಾಡಲು ಮಾತ್ರ ಅನುಮತಿಸಲಾಗುತ್ತದೆ. (iii) ಜಾಹೀರಾತುಗಳಲ್ಲಿ ಯಾವುದೇ ಅನಿಮೇಷನ್ ಅಥವಾ ಚಲನೆಯನ್ನು ಅನುಮತಿಸಲಾಗುವುದಿಲ್ಲ. (iv) ಸಾರ್ವಜನಿಕ ರಸ್ತೆಯಲ್ಲಿ ನಿಲುಗಡೆಗೆ ಅನುಮತಿಸಲಾಗುವುದಿಲ್ಲ

13	ಟ್ಯಾಕ್ಸಿ ಮತ್ತು ಮಧ್ಯಂತರ ಸಾರ್ವಜನಿಕ ಸಾರಿಗೆಗಳಾದ ಟ್ಯಾಕ್ಸಿಗಳು, ಆಟೋ ರಿಕ್ಷಾಗಳು	ವಾಹನದ ಮೇಲೆ ಮಾತ್ರ ಪ್ರದರ್ಶಿಸತಕ್ಕದ್ದು.	ಒಂದೇ ಸ್ಥಳದಲ್ಲಿ ನಿಲ್ಲಿಸಿ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ	ವಾಹನದ ಮುಂಭಾಗವನ್ನು ಹೊರತುಪಡಿಸಿ ವಾಹನದ ಪ್ರತಿ ಬದಿಯ ಮೇಲ್ಮೈ ವಿಸ್ತೀರ್ಣದ ಶೇ.70 ನ್ನು ಮೀರತಕ್ಕದ್ದಲ್ಲ. ಒಟ್ಟು ಹಿಂಬದಿಯ ಭಾಗದ ಶೇ. 60ರಷ್ಟು ಜಾಗವನ್ನು ಬಳಸಬಹುದಾಗಿದೆ.	ಅನ್ವಯಿಸುವುದಿಲ್ಲ	6 ಅಡಿ	ಪ್ರತಿ ತಿಂಗಳಿಗೆ ಚದರಡಿಗೆ ರೂ. 50/- ಅಥವಾ ಪ್ರತಿ ನಾಲ್ಕು ಚಕ್ರ ವಾಹನಕ್ಕೆ ರೂ.500/- ಮತ್ತು ಆಟೋ ರಿಕ್ಷಾಗೆ ಪ್ರತಿ ತಿಂಗಳಿಗೆ 100 ರೂಪಾಯಿಗಳು.	(i) ಜಾಹೀರಾತಿನ ಏಕೈಕ ಉದ್ದೇಶಕ್ಕಾಗಿ ಯಾವುದೇ ವಾಹನವನ್ನು ಅನುಮತಿಸಲಾಗುವುದಿಲ್ಲ. (ii) ಆರ್.ಟಿ.ಓ. ಮತ್ತು ಟ್ರಾಫಿಕ್ ಪೊಲೀಸ್ ರವರಿಂದ ಅನುಮತಿ ಪಡೆದ ನಂತರ ಅನುಮತಿಸಲಾಗುವುದು. (iii) ಜಾಹೀರಾತುಗಳಲ್ಲಿ ಯಾವುದೇ ಆನಿಮೇಷನ್ ಅಥವಾ ಚಲನೆಯನ್ನು ಅನುಮತಿಸಲಾಗುವುದಿಲ್ಲ.
14	ವಾಯುಗಾಮಿ ಸಾಧನಗಳು (ಏರ್ ಬಾರ್ನ್ ಡಿವೈಸಸ್)	ಸಂಬಂಧಪಟ್ಟ ನಗರ ಪಾಲಿಕೆಯ ಆಯುಕ್ತರ ಪ್ರಕರಣವಾರು ಅನುಮತಿಯ ಮೇರೆಗೆ ಮಾತ್ರ	(i) ನಿಯಮ 13 & 14 ಮತ್ತು ಇತರೆ ನಿಯಮಗಳ ಪ್ರಕಾರ	300 ಅಡಿ ಮೀರತಕ್ಕದ್ದಲ್ಲ		60 ಅಡಿ	ರೂ.200/-	(i) ಸಾರ್ವಜನಿಕ ಸಂದೇಶ ಪ್ರದರ್ಶನಕ್ಕಾಗಿ ಮಾತ್ರ ಅನುಮತಿಸಲಾಗವುದು. (ii) ಈ ಸಾಧನಗಳ ಅಳವಡಿಕೆ,

			(ii)ಯಾವುದೇ ರಸ್ತೆಯಲ್ಲಿ ಅನುಮತಿಸಲಾಗುವುದಿಲ್ಲ					ಜೋಡನೆ ಮತ್ತು ಬಳಕೆ ಹಾಗೂ ಸುರಕ್ಷತೆಯು ಸಂಬಂಧಪಟ್ಟ ನಗರ ಪಾಲಿಕೆಯ ಮಾರ್ಗಸೂಚಿಯನ್ವಯ ಇರತಕ್ಕದ್ದು
15	ಬಸ್ ತಂಗುದಾಣಗಳು	ಸಂಬಂಧಪಟ್ಟ ನಗರಪಾಲಿಕೆಯ ನಿರ್ದಿಷ್ಟ ಅನುಮೋದನೆಯ ಮೇರೆಗೆ ಬಸ್ ತಂಗುದಾಣಗಳಲ್ಲಿ ಮಾತ್ರ ಅನುಮತಿಸಕ್ಕದ್ದು.	ಸಂಬಂಧಪಟ್ಟ ನಗರ ಪಾಲಿಕೆಯು ನಿರ್ಧರಿಸಬಹುದಾದಂತೆ	(1) ರಸ್ತೆಗೆ ಮುಖ ಮಾಡಿರುವಂತೆ ಬಸ್ ತಂಗುದಾಣಗಳ ಬದಿಗಳ ಒಟ್ಟು ವಿಸ್ತೀರ್ಣದ ಶೇ.70 ರಷ್ಟು ಹೆಚ್ಚು ಪ್ರದೇಶವನ್ನು ಆವರಿಸದಂತೆ ಜಾಹೀರಾತು ಪ್ರದರ್ಶಿಸತಕ್ಕದ್ದು. (2) ಬಸ್ ತಂಗುದಾಣದ ಮೇಲ್ಛಾವಣಿಯ ಮೇಲೆ ಕೂರಿಸಲಾದ ಪ್ರದರ್ಶನ ಫಲಕವು 4 ಅಡಿಗಳಿಗಿಂತ ಹೆಚ್ಚು ಅಗಲ ಮತ್ತು ಛಾವಣಿಯ ಉದ್ದವು ನಿಲ್ದಾಣದ ಛಾವಣಿಗಿಂತ ಹೆಚ್ಚಿರಬಾರದು. (3) ಹಿಂಭಾಗದ ಗೋಡೆಯ ಮೇಲಿನ ಬಸ್ತಂಗುದಾಣದ ಒಳಗೆ ಆದರೆ ಹಿಂಭಾಗದ ಗೋಡೆಯ ಒಟ್ಟು ವಿಸ್ತೀರ್ಣದ ಶೇ 70% ಕ್ಕಿಂತ ಹೆಚ್ಚು ಭಾಗವನ್ನು ಆವರಿಸತಕ್ಕದ್ದಲ್ಲ.	ಬಸ್ ತಂಗುದಾಣದ ಛಾವಣಿಯ ಮೇಲೆ 4 ಅಡಿ	ಇದು ಮೌಂಟೆಡ್ ಜಾಹೀರಾತಾಗಿರುವುದರಿಂದ ಅನ್ವಯಿಸುವುದಿಲ್ಲ	i) ಪ್ರತಿ ಚದರ ಅಡಿಗೆ ನಿಗದಿಪಡಿಸಿದ ಕನಿಷ್ಠ ದರಕ್ಕೊಳಪಟ್ಟು ಹರಾಜಿನಲ್ಲಿ / ಟೆಂಡರ್ ನಲ್ಲಿ ಅಂತಿಮ ಗೊಂಡ ಮೊತ್ತಕ್ಕನುಸಾರವಾಗಿ, (ii) ನಿಯಮಗಳ ಪ್ರಕಾರ ಪಿ.ಪಿ.ಪಿ. ಅಥವಾ ಒಪ್ಪಂದದ ಅನುಸಾರ	ಯಾವುದೇ ಕಟ್ಟಡದ ಛಾವಣಿಯ ಯಾವುದೇ ಬದಿಯಿಂದ ಹೊರಚಾಚುವಂತೆ ಅನುಮತಿಸತಕ್ಕದ್ದಲ್ಲ. ದಾರಿಹಕ್ಕಿನ ಮೇಲೆ ಬರುವಂತೆ ಅನುಮತಿಸತಕ್ಕದ್ದಲ್ಲ.

16	ವಾಹನ ನಿಲುಗಡೆ ಸ್ಥಳ (ಪಾರ್ಕಿಂಗ್ ಜಾಗ) ಮತ್ತು ಅಲ್ಲಿನ ಚಿಹ್ನೆ	ಸಂಬಂಧಪಟ್ಟ ನಗರ ಪಾಲಿಕೆಯ ನಿರ್ದಿಷ್ಟ ಅನುಮೋದನೆ ಮೇರೆಗೆ ವಾಹನ ನಿಲುಗಡೆ ಸ್ಥಳಗಳಲ್ಲಿ ಮಾತ್ರ ಅನುಮತಿಸಲಾಗುವುದು	ಸಂಬಂಧಪಟ್ಟ ನಗರಪಾಲಿಕೆಯ ನಿರ್ಧಾರಕ್ಕೆ ಒಳಪಟ್ಟಿರುತ್ತದೆ.	ಸಂಬಂಧಪಟ್ಟ ನಗರಪಾಲಿಕೆ ಅನುಮೋದಿಸಬಹುದಾದಂತೆ	ಸಂಬಂಧಪಟ್ಟ ನಗರಪಾಲಿಕೆಯ ಅನುಮೋದಿಸಬಹುದಾದಂತೆ	6 ಅಡಿ	(i) ಹರಾಜು ನಲ್ಲಿ ಪಡೆದ ದರದ ಪ್ರಕಾರ ಪ್ರತಿ ಚದರ ಅಡಿ ನಿಗಧಿತ ಕನಿಷ್ಠ ದರಕ್ಕೆ ಒಳಪಟ್ಟಿರುತ್ತದೆ. ಅಥವಾ (ii) ನಿಯಮಗಳ ಪ್ರಕಾರ ಪಿ.ಪಿ.ಪಿ. ಅಥವಾ ಒಪ್ಪಂದದ ಅನುಸಾರ	i) ಪಾರ್ಕಿಂಗ್ ಚಿಹ್ನೆಗಳು ವಿದ್ಯುನ್ಮಾನ ನಿಯಂತ್ರಣಕ್ಕೆ ಒಳಪಡತಕ್ಕದ್ದು ಮತ್ತು ಪಾರ್ಕಿಂಗ್ ಜಾಗದಲ್ಲಿ ವಾಹನ ನಿಲುಗಡೆ ಸ್ಥಿತಿಯ ಮಾಹಿತಿಯನ್ನು ಸ್ಪಷ್ಟವಾಗಿ ನೀಡತಕ್ಕದ್ದು. ii) ವಾಹನ ಮತ್ತು ಪಾದಚಾರಿ ಸಂಚಾರಕ್ಕೆ ಅಡ್ಡಿಯಾಗದ ರೀತಿಯಲ್ಲಿ ಪಾರ್ಕಿಂಗ್ ಲಾಟಿನ ಅಂಚಿನಲ್ಲಿ ಸ್ಥಿತ ಸಾಧನಗಳನ್ನು ಅಳವಡಿಸುವುದು. iii) ಸ್ಥಿತ ಸಾಧನಗಳು ಸದರಿ ಜಾಗದ ಪರಿಧಿಯ ಅಂಚಿನ 3 ಬದಿಗಳಲ್ಲಿ

								ಗರಿಷ್ಠವಾಗಿ ಹರಡಿರಬೇಕು ಮತ್ತು ಬಾಹ್ಯ ಅಂಚಿನ ಉದ್ದದ ಒಟ್ಟು ಮೊತ್ತದ ಶೇ 50 ರಷ್ಟನ್ನು ಮೀರಬಾರದು. iv) ಯಾವುದೇ ಜಾಹೀರಾತು ಸಾಧನವನ್ನು , (ಎ) ನಿಲುಗಡೆ ಸ್ಥಳದ ಮುಂಭಾಗದ ಪ್ರವೇಶ ರಸ್ತೆ; (ಬಿ) ಶಾಪಿಂಗ್ ಆರ್ಕೇಡ್ ಆವರಣಗಳು; (ಸಿ) ಮತ್ತೊಂದು ಸೌಲಭ್ಯಕ್ಕೆ ಹೋಗುವ ಪ್ರವೇಶ ರಸ್ತೆಗಳು/ಲೇನ್ ಗಳಲ್ಲಿ ಅಳವಡಿಸಲು ಅನುಮತಿಸಲಾಗುವುದಿಲ್ಲ.
17	ವಾಹನ ನಿಲುಗಡೆ (ಎರಡು ಪ್ರದರ್ಶನ	ಸಂಬಂಧಪಟ್ಟ ನಗರಪಾಲಿಕೆಯ ನಿರ್ದಿಷ್ಟ ಅನುಮೋದನೆ		200 ಚದರ ಅಡಿಯವರೆಗೆ	ಸಂಬಂಧಪಟ್ಟ ನಗರ ಪಾಲಿಕೆ	7 ಅಡಿ	(i) ಹರಾಜಿನಲ್ಲಿ ಪಡೆದ ದರದ ಪ್ರಕಾರ ಪ್ರತಿ ಚದರ ಅಡಿ	(i) ಒಂದು ಸಂಸ್ಥೆಯು ನಿಗದಿಪಡಿಸಿದ ಪ್ರತಿಯೊಂದು

	ಫಲಕಗಳು)	ಯ ಮೇರೆಗೆ ವಾಹನ ನಿಲುಗಡೆ ಸ್ಥಳಗಳಲ್ಲಿ ಮಾತ್ರ ಅನುಮತಿಸಲಾಗಿದೆ			ಯು ಅನುಮೋದಿಸಬಹುದಾದಂತೆ		ನಿಗಧಿತ ಕನಿಷ್ಠ ದರಕ್ಕೆ ಒಳಪಟ್ಟಿರುತ್ತದೆ. ಅಥವಾ (ii) ಖಾಸಗಿ-ಸಾರ್ವಜನಿಕ ಸಹಭಾಗಿತ್ವ ಅಥವಾ ನಿಯಮಗಳ ಕರಾರು ಒಪ್ಪಂದದ ಪ್ರಕಾರ	ಪಾರ್ಕಿಂಗ್ ಲಾಟ್‌ನಲ್ಲಿ 40 ಅಡಿ x 8 ಅಡಿವರೆಗಿನ ಅಳತೆಯ ಪ್ರದರ್ಶನ ಫಲಗಳಿಗೆ ಅನುಮತಿಸಲಾಗುವುದು. (ii) ಫಲಕಗಳ ಮೊದಲ ಅರ್ಧ ಭಾಗದಲ್ಲಿ (20 ಅಡಿ x 8 ಅಡಿ) ಜಾಹೀರಾತುಗಳು ಮತ್ತು ಉಳಿದ ಅರ್ಧ ಭಾಗದಲ್ಲಿ ಪಾರ್ಕಿಂಗ್ ಶುಲ್ಕಗಳ ವಿವರವನ್ನು ಪ್ರದರ್ಶಿಸತಕ್ಕದ್ದು.
18	ಲ್ಯಾಂಡ್ ಸ್ಕೇಪ್ ಜಾಹೀರಾತು ಅಥವಾ ಪ್ರಾಯೋಜಿತ ಜಾಹೀರಾತು	ಸಂಬಂಧಪಟ್ಟ ನಗರಪಾಲಿಕೆಯಿಂದ ನಿರ್ದಿಷ್ಟ ಅನುಮೋದನೆಯ ಮೇರೆಗೆ ಲ್ಯಾಂಡ್ ಸ್ಕೇಪ್ ಪ್ರದೇಶದಲ್ಲಿ	ಸಂಬಂಧಪಟ್ಟ ನಗರಪಾಲಿಕೆಯು ನಿರ್ಧರಿಸಬಹುದಾದಂತೆ	ಸಂಬಂಧಪಟ್ಟ ನಗರಪಾಲಿಕೆಯು ನಿರ್ಧರಿಸಬಹುದಾದಂತೆ	ಸಂಬಂಧಪಟ್ಟ ನಗರ ಪಾಲಿಕೆಯು ಅನುಮೋದಿಸಬಹು	ನಾಗರಿಕರು ಬಳಸುವ ಸ್ಥಳದಲ್ಲಿ ನೆಲಮಟ್ಟದಿಂದ 7 ಅಡಿ. ಬೆರೆಡೆ ಲ್ಯಾಂಡ್ ಸ್ಕೇಪ್‌ನ ವಿವರಗಳಿಗೆ	(i) ಹರಾಜಿನಲ್ಲಿ ಪಡೆದ ದರದ ಪ್ರಕಾರ ಪ್ರತಿ ಚದರ ಅಡಿ ದರಕ್ಕೆ ನಿಗಧಿತ ಕನಿಷ್ಠ	ಲ್ಯಾಂಡ್ ಸ್ಕೇಪ್‌ಅನ್ನು ಸಮರ್ಪಕವಾಗಿ ನಿರ್ವಹಿಸತಕ್ಕದ್ದು

		ಮಾತ್ರ ಅನುಮತಿಸಲಾಗಿದೆ			ದಾದಂತೆ	ಅನುಸಾರವಾಗಿ.	ದರಕ್ಕೆ ಒಳಪಟ್ಟಿರುತ್ತದೆ. ಅಥವಾ (ii) ಪಿಪಿಪಿ ಅಥವಾ ನಿಯಮಗಳ ಒಪ್ಪಂದದ ಪ್ರಕಾರ ಅಥವಾ (iii)ಸಿ.ಎಸ್.ಆರ್ ಜಾಹೀರಾತುಗಳ ಸಂದರ್ಭದಲ್ಲಿ, ನಗರ ಪಾಲಿಕೆಯ ಆಯುಕ್ತರು ನಿರ್ಧರಿಸಿದ ದರದಂತೆ. 2.5 ಅಡಿ x 3.5 ಅಡಿ ಮೀರದ ಗಾತ್ರದ ಒಂದು ಫಲಕವನ್ನು, ಪ್ರತಿ 100 ಮೀಟರ್ ಉದ್ದಕ್ಕೆ ಅಥವಾ ಪ್ರತಿ 1000 ಚದರ ಅಡಿ	

							ವಿಸ್ತೀರ್ಣಕ್ಕೆ ಒಂದರಂತೆ, ಆಯುಕ್ತರು ಉಚಿತವಾಗಿ ಅಳವಡಿಸಲು ಅನುಮತಿ ನೀಡಬಹುದು	
19	ಬೇಲಿ ಜಾಹೀರಾತು (Fence Advertising devices) ಸಾಧನಗಳು	ಸಂಬಂಧಪಟ್ಟ ನಗರಪಾಲಿಕೆಯು ಅನುಮೋದಿಸಿದ ನಿರ್ದಿಷ್ಟ ಸ್ಥಳಗಳು ಮತ್ತು ಬೇಲಿಗಳಿಗೆ ಮಾತ್ರ	ಸಂಬಂಧಪಟ್ಟ ನಗರಪಾಲಿಕೆಯು ನಿರ್ಧರಿಸಬಹುದಾದಂತೆ	3 ಅಡಿ	3 ಅಡಿ	9 ಚದರ ಅಡಿ	ಗರಿಷ್ಟ 4 ಅಡಿಗಳಿಗೆ ಸಿಮೀತಗೊಳಿಸಿ ಬೇಲಿಯ ಗರಿಷ್ಠ ಎತ್ತರದವರೆಗೆ	ಸಂಬಂಧಪಟ್ಟ ನಗರಪಾಲಿಕೆಯು ಅನುಮೋದಿಸಬಹುದಾದಂತೆ
20	ಸಂಚಾರಿ ತಡೆಗೋಡೆಗಳು (Traffic Barricading)	ಸಂಬಂಧಪಟ್ಟ ನಗರಪಾಲಿಕೆ ಅನುಮತಿಸಬಹುದಾದಂತೆ	ಸಂಬಂಧಪಟ್ಟ ನಗರಪಾಲಿಕೆಯು ನಿರ್ಧರಿಸಬಹುದಾದಂತೆ	3 ಅಡಿ	3 ಅಡಿ	9 ಚದರ ಅಡಿ	ಸಂಚಾರಿ ತಡೆಗೋಡೆಗಳ ಮೇಲೆ ಅಳವಡಿಸತಕ್ಕದ್ದು.	ಸಂಚಾರಿ ತಡೆಗೋಡೆಗಳ ಮೇಲೆ ಅಳವಡಿಸತಕ್ಕದ್ದು.
21	ವಾಣಿಜ್ಯ ಆಸ್ತಿಯಲ್ಲಿ ಪೇಸಿಯಾ ಸೈನ್ ಡಿಸ್ಪ್ಲೇ ಅಥವಾ Awning	ವಾಣಿಜ್ಯ ಆವರಣದಲ್ಲಿ ಸ್ವಯಂ ಜಾಹೀರಾತು	ನಿಯಮ 13 & 14 ರ ಪ್ರಕಾರ	ಅನುಮತಿಸಲಾಗಿರುವ ಆಸ್ತಿಯ ಪ್ರತಿಯೊಂದು ಮಹಡಿಯಲ್ಲಿನ ಪ್ರದರ್ಶನಕ್ಕೆ ಗರಿಷ್ಠ 4 ಅಡಿ ಅಗಲ (ಲಂಬ) ಹಾಗೂ ಉದ್ದವು ರಸ್ತೆಗೆ ಅಭಿಮುಖವಾಗಿರುವ ಸ್ವತ್ತಿನ ಬದಿಯ ಅಳತೆಯ ಉದ್ದಕ್ಕೆ ಮೀರದಂತೆ ಅಥವಾ ಸಮನಾಂತರ ಪ್ರದೇಶ ಚದರ	ವಾಣಿಜ್ಯ ಆಸ್ತಿಯ ಪ್ರವೇಶ ದ್ವಾರದ ಮೇಲ್ಭಾಗದ	ಆಸ್ತಿಯ ಪ್ರವೇಶ ದ್ವಾರದ ಮೇಲ್ಭಾಗದಲ್ಲಿ ಅಳವಡಿಸುವುದು	ಅನುಮತಿಸಲಾದ ಗಾತ್ರದ ಪರಿಮಿತಿಯೊಳಗೆ ಇದ್ದಲ್ಲಿ ಶೂನ್ಯ ಮತ್ತು ಗಾತ್ರದ ಮಿತಿಯನ್ನು	(i) ವಾಣಿಜ್ಯ ಆಸ್ತಿಯ ಬದಿಯ ಉದ್ದವನ್ನು ಮೀರಿ ವಿಸ್ತರಿಸಬಾರದು ಅಥವಾ ಲಂಬವಾಗಿ 4

	Display ಅಥವಾ ಯಾವುದೇ ಸ್ವಯಂ ಜಾಹೀರಾತು			ಅಡಿಗಳಲ್ಲಿ. (ಉದಾ: 30 ಅಡಿ ಉದ್ದ ಹಾಗೂ 3 ಮಹಡಿಯುಳ್ಳ ವಾಣಿಜ್ಯ ಆಸ್ತಿಗೆ ಸಂಬಂಧಿಸಿದಂತೆ ಪ್ರತಿ ಮಹಡಿಗೆ ಅನುಮತಿಸಲ್ಪಡುವ ಸ್ವ ಜಾಹೀರಾತಿನ ವಿಸ್ತೀರ್ಣ 4 x 30=120 ಚ.ಅ)	ಲ್ಲಿ ಅಳವಡಿಸುವುದು		ಮೀರಿದ್ದಲ್ಲಿ ಪ್ರತಿ ಚದರ ಅಡಿಗೆ ರೂ. 25/-	ಅಡಿಗಳಿಗಿಂತ ಹೆಚ್ಚು ಇರಬಾರದು (ii) ಎರಡು ಅಥವಾ ಹೆಚ್ಚಿನ ರಸ್ತೆಗಳನ್ನು ಹೊಂದಿರುವ ವಾಣಿಜ್ಯ ಆಸ್ತಿಯ ಸಂದರ್ಭದಲ್ಲಿ, ಅಂತಹ ಪ್ರತಿಯೊಂದು ಬದಿಯಲ್ಲಿ ಸ್ವಯಂ ಜಾಹೀರಾತನ್ನು ಪ್ರದರ್ಶಿಸಬಹುದಾಗಿರುತ್ತದೆ (iii) ವಾಸ್ತವಿಕ ವಿಸ್ತೀರ್ಣವು ಗರಿಷ್ಠ ಮಿತಿಯನ್ನು ಮೀರಿದ್ದಲ್ಲಿ ನಿಯಮಗಳನ್ವಯ ಶುಲ್ಕ ವಿಧಿಸಲಾಗುವುದು. (iv) ಗರಿಷ್ಠ ಮಿತಿಯನ್ನು ಮೀರದಿದ್ದಲ್ಲಿ ಒಂದು ಕಟ್ಟಡದಲ್ಲಿ ಇತರೆ ವಾಣಿಜ್ಯ

								ಸ್ವತ್ತುಗಳ ಚಿಹ್ನೆ ಅಥವಾ ಸ್ವ ಜಾಹೀರಾತು ಪ್ರದರ್ಶನಗಳನ್ನು ಪ್ರದರ್ಶಿಸಬಹುದಾಗಿದೆ. (v) ಅನಧಿಕೃತವಾಗಿ ನಿರ್ಮಾಣಗೊಂಡಿರುವ ಮಹಡಿಗಳಲ್ಲಿನ ಸಂಪೂರ್ಣ ಜಾಹೀರಾತಿಗೆ ಸಂಬಂಧಿಸಿದಂತೆ ನಿಗದಿತ ಶುಲ್ಕವನ್ನು ಪಾವತಿಸತಕ್ಕದ್ದು.
22	ಕಟ್ಟಡದ ಮೇಲೆ ಅಳವಡಿಸಲಾದ ಪ್ರಾಜೆಕ್ಟೆಡ್ ಸೈನ್	ವಾಣಿಜ್ಯ ಆವರಣದಲ್ಲಿ ಸ್ವ-ಜಾಹೀರಾತಿಗೆ ಮಾತ್ರ	ನಿಯಮಗಳು 13 ಮತ್ತು 14 ರ ಪ್ರಕಾರ	ಅಕ್ಷರಗಳ ಗರಿಷ್ಠ ಎತ್ತರವು ಅಡ್ಡಲಾಗಿ 12 ಇಂಚುಗಳನ್ನು ಮೀರದಂತೆ ಮತ್ತು ಲಂಬವಾಗಿ 18 ಇಂಚುಗಳನ್ನು ಮೀರಬಾರದು.	7 ಅಡಿ	40 ಅಡಿ	ಅನುಮತಿಸಲಾದ ಗಾತ್ರದ ಪರಿಮಿತಿಯೊಳಗೆ ಇದ್ದಲ್ಲಿ ಶೂನ್ಯ ಮತ್ತು ಗಾತ್ರದ ಮಿತಿಯನ್ನು ಮೀರಿದ್ದಲ್ಲಿ ಪ್ರತಿ ಚದರ ಅಡಿಗೆ ರೂ. 25/-	(i) ಯಾವುದೇ ಸಂದರ್ಭದಲ್ಲಿ ಯಾವುದೇ ಗೋಡೆಗೆ ಹೊರಚಾಚಿಕೊಂಡಿರುವ ಚಿಹ್ನೆಯನ್ನು ದೀಪದ ಕಂಬ ಅಥವಾ ಟ್ರಾಫಿಕ್ ಚಿಹ್ನೆ ಅಥವಾ ವ್ಯಾಪಾರವನ್ನು ಮಾಡುವ ಅಂಗಡಿಯನ್ನು

